# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೭

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕರ್ನಾಟಕದ ಮುವ್ವತ್ತನೇ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿಯವರು ಅಧಿಕಾರ ಸ್ವೀಕರಿಸಿರುವುದರೊಂದಿಗೆ ರಾಜ್ಯದ ರಾಜಕಾರಣದಲ್ಲಿ ಯಡಿಯೂರಪ್ಪನವರ ಅಧಿಕಾರ ಪರ್ವ ಮುಗಿದಂತಾಗಿದೆ. ನಾಲ್ಕು ದಶಕಗಳ ಕಾಲ ರಾಜ್ಯ ರಾಜಕಾರಣದಲ್ಲಿ, ಅಷ್ಟೇನೂ ಪ್ರಭಾವಶಾಲಿಯಾಗಿರದಿದ್ದ ಪಕ್ಷವೊಂದನ್ನು ಮುಖ್ಯವಾಗಿ ಬೀದಿ ಹೋರಾಟಗಳ ಮೂಲಕವೇ ಸಂಘಟಿಸಿ ಅಧಿಕಾರಕ್ಕೆ ಬರುವ ಮಟ್ಟಕ್ಕೆ ಬೆಳೆಸಿದ ಶ್ರೇಯಸ್ಸು ಅವರದ್ದು. ಒಂದು ನಮ್ರ ಸಾಮಾಜಿಕ ಹಿನ್ನೆಲೆಯಿಂದ ಬಂದು ಈ ಸಾಧನೆ ಮಾಡಿದ ಈ ನಾಯಕ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರದ ಪ್ರಮಾಣ ವಚನ ಸ್ವೀಕರಿಸಿದರೂ ಒಮ್ಮೆಯೂ ಅಧಿಕಾರಾವಧಿಯನ್ನು ಪೂರ್ಣಗೊಳಿಸಲಾಗದೆ ಕೊನೆಗೆ ತನ್ನ ಪಕ್ಷದ 'ಹಿತ'ದೃಷ್ಟಿಯಿಂದಲೇ ಅಧಿಕಾರ ತ್ಯಜಿಸಬೇಕಾಗಿ ಬಂದುದು ಒಂದು ವಿಪರ್ಯಾಸವೇ ಸರಿ, ಯಡಿಯೂರಪ್ಪ ಭಾಜಪದ ಹಳೆಯ ತಲೆಮಾರಿಗೆ ಸೇರಿದ ನಾಯಕರಾಗಿಬಿಟ್ಟಿದ್ದು, ಅವರು ರಾಷ್ಟ್ರಮಟ್ಟದಲ್ಲಿ ಅವರ ಪಕ್ಷ ಈಗ ಬೆಳೆಯುತ್ತಿರುವ ರೀತಿ, ಅದು ರಾಷ್ಟ್ರ ರಾಜಕಾರಣಕ್ಕೆ ನೀಡಬಯಸುತ್ತಿರುವ ಹೊಸ ರೂಪ ಮತ್ತು ದಿಕ್ಕುಗಳಿಗೆ ಹೊಂದಿಕೊಳ್ಳಲಾಗದ ರಾಜಕಾರಣಿಯಾಗಿ ಪಕ್ಷದ ರಾಷ್ಟ್ರ ನಾಯಕತ್ವಕ್ಕೆ ಕಂಡಿದ್ದಾರೆ. ಬೇರೆ ಭಾಷೆಯಲ್ಲಿ, ನೇರವಾಗಿ ಹೇಳುವುದಾದರೆ, ಪಕ್ಷ 'ಬೆಳೆ'ಯಲು ಅಡ್ಡಿಯಾಗುವಷ್ಟು, ಪಕ್ಷದ ರಾಷ್ಟ್ರೀಯ ನಾಯಕತ್ವದ ಹಿಡಿತಕ್ಕೆ ಸಿಗದಷ್ಟು, ಯಡಿಯೂರಪ್ಪ ಬೆಳೆದುಬಿಟ್ಟಿದ್ದಾರೆ! ಅವರ ಪಕ್ಷ ತಾನು ವಾಜಪೇಯಿ-ಅಡ್ವಾನಿ ಯುಗದ ನಂತರ ಕಂಡುಕೊಂಡಿರುವ ಹೊಸ ದಿಕ್ಕಿನಲ್ಲಿ ಬೆಳೆಯಲು ಬೇಕಾದ ಹೊಸ ರಾಜ್ಯ ನಾಯಕರ ಹುಡುಕಾಟದಲ್ಲಿದ್ದು ಇದರ ಪರಿಣಾಮವಾಗಿ ಯಡಿಯೂರಪ್ಪನವರ ಈ ಪದಚ್ಯುತಿ ನಡೆದಿದೆ.

ಆದರೆ ಈ ಪದಚ್ಯುತಿ ರಾಜಕಾರಣದಲ್ಲಿ ಬಿಜೆಪಿಯ ವರಿಷ್ಠ ನಾಯಕತ್ವ ಪೂರ್ಣ ಯಶಸ್ವಿಯಾಗಿದೆಯೇ ಎಂದು ಕೇಳಿದರೆ ಇಲ್ಲ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಬೊಮ್ಮಾಯಿ ಆಯ್ಕೆ ಪಕ್ಷವನ್ನು ಅದರ ಮೂಲ ಸಿದ್ಧಾಂತಕ್ಕೆ ಬದ್ಧವಾದ ಹೊಸ ನಾಯಕತ್ವವನ್ನು ಬೆಳೆಸುವ ಉದ್ದೇಶ ಈಡೇರಿಲ್ಲ ಎಂದು ಹೇಳಬೇಕು. ಬಸವರಾಜ ಬೊಮ್ಮಾಯಿ ತಮ್ಮ ತಂದೆ ಎಸ್, ಆರ್, ಬೊಮ್ಮಾಯಿ ಅವರು ಸೇರಿದ್ದ ಜನತಾ ದಳದ ರಾಜಕೀಯ ಪರಂಪರೆಗೆ ಸೇರಿದವರಾಗಿದ್ದು ೨೦೦೮ರಲ್ಲಷ್ಟೇ, ಅಂದರೆ ೧೩ ವರ್ಷಗಳ ಹಿಂದಷ್ಟೇ ಬಿಜೆಪಿಗೆ ಸೇರಿದವರು. ಅವರೇನೂ ಈಗಿನ ಅವರ ಪಕ್ಷದ ಪಿತೃ ಸಂಸ್ಥೆಯಾದ ಆರೆಸೆಸ್‌ನ ಸಿದ್ಧಾಂತದಿಂದ ಪ್ರೇರಿತರಾದವರಲ್ಲ. ಆದರೆ ಇವರು ಯಡಿಯೂರಪ್ಪನವರಿಗೆ ಆಪ್ತರಾದವರು ಮತ್ತು ಅವರ ಶಿಫಾರ್ಸಿನಂತೆಯೇ ಇವರ ಆಯ್ಕೆ ನಡೆದಿದೆ ಎಂದು ಹೇಳಲಾಗುತ್ತಿದ್ದು, ಯಡಿಯೂರಪ್ಪ ತಮ್ಮ ಅಧಿಕಾರ ನಿರ್ಗಮನದ ಹೊತ್ತಿಗೆ ಎಂತಹ ವಾತಾವರಣ ನಿರ್ಮಾಣ ಮಾಡಿದ್ದರು ಎಂಬುದನ್ನು ಗಮನಿಸಿದಾಗ ಇದು ನಿಜ ಎನ್ನಿಸದಿರದು. ಕಾಂಗ್ರೆಸ್‌ನ ಪ್ರಮುಖ ನಾಯಕರೂ ಸೇರಿದಂತೆ ರಾಜ್ಯದ ಅತಿ ದೊಡ್ಡ ಸಮುದಾಯವೆನಿಸಿದ ಲಿಂಗಾಯತ ಸಮುದಾಯ ಅದರ ನೂರಾರು ಮಠಗಳ ಮುಖ್ಯಸ್ಥರ ಮೂಲಕ ಯಡಿಯೂರಪ್ಪನವರ ಪರ ಬಲ ಪ್ರದರ್ಶನ ನಡೆಸಿತ್ತು. ಹೀಗಾಗಿ ಲಿಂಗಾಯತ ಸಮುದಾಯಕ್ಕೆ ಸೇರಿದ ಬೊಮ್ಮಾಯಿಯವರ ಆಯ್ಕೆ ರಾಜ್ಯ ಬಿಜೆಪಿಯಲ್ಲಿ ಒಂದು ರೀತಿಯಲ್ಲಿ ಬದಲಾವಣೆಯನ್ನೂ ಇನ್ನೊಂದು ರೀತಿಯಲ್ಲಿ ಮುಂದುವರಿಕೆಯನ್ನೂ ಸೂಚಿಸುತ್ತದೆ ಎನ್ನಬಹುದು. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಹೇಗೆ ಕಾರ್ಯ ನಿರ್ವಹಿಸುತ್ತಾರೆ ಮತ್ತು ಅವರನ್ನು ಪಕ್ಷದಲ್ಲಿನ ಆರೆಸ್ಸೆಸ್ ಮೂಲದ ಹಿರಿಯ ನಾಯಕರು ಎಷ್ಟರಮಟ್ಟಿಗೆ ಒಪ್ಪಿಕೊಂಡು ಮುಂದುವರೆಯುವರು ಎಂಬುದು ಈ ಮಾತು ನಿಜವೋ ಸುಳ್ಳೋ ಎಂಬುದನ್ನು ನಿರ್ಧರಿಸುವುದು. ಹಾಗೇ ಇವರು ಕ್ರಮೇಣ ಆರೆಸ್ಸೆಸ್ ಮೂಲದ ನಾಯಕರಿಗೆ ಅಧಿಕಾರ ರವಾನಿಸಲು ಮಾಡಲಾಗಿರುವ ಮಧ್ಯಂತರ ವ್ಯವಸ್ಥೆಯಷ್ಟೆ ಎಂಬ ಅಭಿಪ್ರಾಯದ ನಿಜತ್ವವನ್ನೂ. ಅದೇನೇ ಇರಲಿ, ಹೊಸ ಮುಖ್ಯಮಂತ್ರಿ ಬೊಮ್ಮಾಯಿಯವರಿಗೆ ಪತ್ರಿಕೆಯ ಶುಭಾಶಯಗಳು ಮತ್ತು ಯಡಿಯೂರಪ್ಪನವರಿಗೆ ಶುಭ ವಿದಾಯದ ಹಾರೈಕೆಗಳು.

ಈ ಶುಭಾಶಯ ಮತ್ತು ಹಾರೈಕೆಗಳ ಮಾತುಗಳೊಂದಿಗೆ ಇನ್ನೊಂದು ಮಾತನ್ನೂ ಹೇಳಬೇಕು. ಅದೆಂದರೆ ಯಡಿಯೂರಪ್ಪನವರ ನಿರ್ಗಮನದಿಂದ ಅವರ ಆಡಳಿತದ ನೇರ ಫಲಾನುಭವಿಗಳಾದ ಮಠಾಧೀಶರು ಮತ್ತು ಇತರ ಕೆಲವು ಜಾತಿ ಮೂಲ ಪಟ್ಟಭದ್ರ ಹಿತಾಸಕ್ತಿಗಳ ಹೊರತಾಗಿ ಇನ್ನಾರೂ ಮರುಗಲಾರರು. ಯಡಿಯೂರಪ್ಪ ದೀರ್ಘಕಾಲಿಕ ಪರಿಣಾಮ ಬೀರಬಹುದಾದ ಅಂತಹ ಆಳದ ರಾಜಕೀಯ ಮುತ್ಸದ್ದಿತನ ಅಥವಾ ತಮ್ಮದೇ ವಿಶಿಷ್ಟ ಕಲ್ಪನಾಶೀಲತೆಯುಳ್ಳ ಆಡಳಿತಗಾರರಾಗಿರಲಿಲ್ಲ. ಅವರು ರಾಜ್ಯಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ಸದುದ್ದೇಶವುಳ್ಳವರಾಗಿದ್ದರಾದರೂ ಬಹು ಸ್ಥೂಲ ಮನಸ್ಸಿನ ರಾಜಕಾರಣಿಯಾಗಿದ್ದರಿಂದ ಅವರದ್ದೇ ಛಾಪಿರುವ ಯಾವುದೇ ಆಡಳಿತ ಕ್ರಮ ಈವರೆಗೆ ಜನಮನದಲ್ಲಿ ದಾಖಲಾದಂತಿಲ್ಲ. ಅವರು ಆಧಿಕಾರಕ್ಕೆ ಬಂದಾಗಲೆಲ್ಲ ಅವರ ಲಾಂಛನ ಘೋಷಣೆಯಾಗಿರುತ್ತಿದ್ದ 'ಅಭಿವೃದ್ಧಿ ಅಭಿವೃದ್ಧಿ ಅಭಿವೃದ್ಧಿ' ಎಂಬುದರಲ್ಲಿ,ಈ ಅಭಿವೃದ್ಧಿ ಎಂದರೆ ಕಾಮಗಾರಿ ಎಂಬುದೇ ಆಗಿದ್ದುದು ಸಹಜವೇ. ಹಾಗಾಗಿಯೇ ನಮ್ಮ ಕಡಿದಾಳು ಶಾಮಣ್ಣ ಅವರಿಗೆ ಅಭಿವೃದ್ಧಿ ಎಂದೊಡನೆ ೨೦% ಎಂದೇ ಕೇಳಿಸುತ್ತಿತ್ತಂತೆ! ಇದಕ್ಕೆ ತಕ್ಕಹಾಗೇ ಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ಎದುರಿಸಿದಷ್ಟು ಭ್ರಷ್ಟಾಚಾರದ ಆಪಾದನೆಗಳನ್ನೂ, ವಿವಿಧ ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳನ್ನು ಬಹುಶಃ ಇನ್ನಾವ ಮುಖ್ಯಮಂತ್ರಿಯೂ ಎದುರಿಸಿರಲಾರರು. ಒಮ್ಮೆ ಈ ಸಂಬಂಧ ಅವರು ಸೆರೆಮನೆಗೂ ಹೋಗಿ ಬರಬೇಕಾಯಿತು. ಈ ಸಂಬಂಧ ಇವರ ಬಗ್ಗೆ ಇರುವ ಒಂದು ಜನಪ್ರಿಯ ಚಟಾಕಿ ಎಂದರೆ ಒಂದು ಸಣ್ಣ ಭ್ರಷ್ಟಾಚಾರವನ್ನೂ ಚಾಣಾಕ್ಷತನದಿಂದ ಮಾಡುವಷ್ಟು ರಾಜಕೀಯ ಪರಿಣಿತಿ ಇಲ್ಲದ ಮೊದ್ದು ರಾಜಕಾರಣಿ ಇವರು! ಆದರೂ ಶಿವಮೊಗ್ಗ-ಶಿಕಾರಿಪುರಗಳಲ್ಲಿ ಅವರ ಕುಟುಂಬ ಕಟ್ಟಿಕೊಂಡಿರುವ ಸಾಮ್ರಾಜ್ಯದ ಆಳ-ವಿಸ್ತಾರಗಳೇನೂ ಕಡಿಮೆಯಲ್ಲ. ಆದರೆ ಭ್ರಷ್ಟಾಚಾರದ ಇನ್ನೂ ಒಂದೆರಡು ಕ್ಲಿಷ್ಟ ಪ್ರಕರಣಗಳು ಅವರನ್ನು ಬಾಧಿಸುತ್ತಿವೆ ಎಂದು ಹೇಳಲಾಗುತ್ತಿದೆ. ಈ ಎಲ್ಲವುಗಳ ಒತ್ತಡ ಕೂಡ ಅವರ ಅಧಿಕಾರ ನಿರ್ಗಮನದ ಹಿಂದೆ ಇದ್ದರೆ ಆಶ್ಚರ್ಯವಿಲ್ಲ. ಆದರೆ ರಾಜ್ಯದ ಕಾಂಗ್ರೆಸ್, ಯಡಿಯೂರಪ್ಪನವರಿಗೆ ಬಹಿರಂಗ ಬೆಂಬಲ ಘೋಷಿಸಿದ ಇಬ್ಬರು ಲಿಂಗಾಯತ ನಾಯಕರ ಬಗ್ಗೆ ಈವರೆಗೆ ತುಟಕ್ ಪಿಟಕ್ ಎನ್ನದೆ ತಾನೊಂದು ರಾಜಕೀಯ 'ದಂ' ಇರುವ ಪಕ್ಷ ಅಲ್ಲ ಎಂದು ಪರೋಕ್ಷವಾಗಿ ಘೋಷಿಸಿಕೊಂಡಿರುವುದರಲ್ಲಿ ಮಾತ್ರ ಆಶ್ಚರ್ಯವೇನೂ ಇರಲಾರದು!

ಹಾಗೆ ನೋಡಿದರೆ ಯಡಿಯೂರಪ್ಪನವರ ಪದಚ್ಯುತಿ ಬಿಜೆಪಿ ಕಳೆದ ಕೆಲವು ವರ್ಷಗಳಲ್ಲಿ ಕೈಗೊಂಡ ಕೆಲ ಅಪಕ್ವ ನಿರ್ಧಾರಗಳಿಂದಾಗಿ-ನಿರ್ದಿಷ್ಟವಾಗಿ ಅದು ಕೋವಿಡ್ ಮಹಾಮಾರಿಯನ್ನು ನಿರ್ವಹಿಸಿದ ರೀತಿಯ ಬಗೆ-ರಾಷ್ಟ್ರ ಮಟ್ಟದಲ್ಲಿ ಕಳೆದುಕೊಳ್ಳಲಾರಂಭಿಸಿರುವ ಬೆಂಬಲದ ಹಿನ್ನೆಲೆಯಲ್ಲಿ ತನ್ನ ಸಿದ್ಧಾಂತದಲ್ಲಿ ರಾಜಿ ಮಾಡಿಕೊಂಡು ಅನುಸರಿಸಲಾಗುತ್ತಿರುವ ಶುದ್ಧ ಜಾತಿ ರಾಜಕಾರಣಕ್ಕೆ ಅನುಗುಣವಾಗಿಯೇ ಇದೆ. ಇತ್ತೀಚಿನ ಕೇಂದ್ರ ಸಚಿವ ಸಂಪುಟ ಪುನಾರಚನೆಯಲ್ಲಿ ಇದು ಎದ್ದು ಕಾಣುವಂತೆಯೇ ಇದೆ. ಮುಂದಿನ ವರ್ಷಗಳಲ್ಲಿ ನಡೆಯಲಿರುವ ರಾಜ್ಯ ವಿಧಾನ ಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಆಯಾ ರಾಜ್ಯಗಳ-ಮುಖ್ಯವಾಗಿ ಉತ್ತರಪ್ರದೇಶದ-ಜಾತಿ ಬಲಗಳಗನುಗುಣವಾಗಿ ಸಚಿವ ಸ್ಥಾನಗಳ ಹಂಚಿಕೆಯನ್ನು ಮಾಡಲಾಗಿದೆ. ಈ ಸಂಪುಟ ಪುನಾರಚನೆಯ ಇನ್ನೊಂದು ಗಮನಾರ್ಹ ಅಂಶವೆಂದರೆ ಕೇಂದ್ರದಲ್ಲಿ ಸಹಕಾರ ಸಚಿವಾಲಯವನ್ನು ಆರಂಭಿಸಿರುವುದು ಮತ್ತು ಅದನ್ನು ಗೃಹಮಂತ್ರಿ ಅಮಿತ್ ಶಾ ಅವರ ಸುಪರ್ದಿಗೆ ನೀಡಿರುವುದು. ಇದು ಈ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ, ಆರೋಗ್ಯ ಮುಂತಾದ ಸಂವಿಧಾನದ ರಾಜ್ಯಪಟ್ಟಿಯಲ್ಲಿರುವ ವಿಷಯಗಳನ್ನು ಅತಿಕ್ರಮಿಸಿ ಅಧಿಕಾರ ಚಲಾಯಿಸುತ್ತಿರುವ ರಾಷ್ಟ್ರದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಪ್ರವೃತ್ತಿಯ ಮುಂದುವರಿಕೆಯೇ ಆಗಿದೆ. ಏಕೆಂದರೆ ಸಹಕಾರವೂ ರಾಜ್ಯಪಟ್ಟಿಯ ವಿಷಯವಾಗಿದ್ದು, ಸ್ಥಳೀಯ ಹಣಕಾಸಿನ ಮತ್ತು ರಾಜಕೀಯ ವ್ಯವಹಾರಗಳನ್ನೊಳಗೊಂಡ ಕ್ಷೇತ್ರವಾಗಿದೆ. ಇದರಲ್ಲಿ ಕೇಂದ್ರ ಸರ್ಕಾರದ, ಅದೂ ಗೃಹ ಸಚಿವರೂ ಆಗಿರುವ ಅಮಿತ್ ಶಾ ನೇತೃತ್ವದಲ್ಲಿನ ಪ್ರವೇಶವು ಸರ್ಕಾರದ ಈ ಕ್ರಮದ ಹಿಂದಿರಬಹುದಾದ ಸದುದ್ದೇಶಗಳನ್ನೂ ಸಂಶಯಿಸುವಂತೆ ಮಾಡಿದೆ.

ಇದೇ ವೇಳೆಯಲ್ಲಿ ಕೇಂದ್ರ ಸರ್ಕಾರ ತನ್ನ ಬುಡಕ್ಕೇ ಸಂಚಕಾರ ತಂದಿರುವ ಒಂದು ದೊಡ್ಡ ಬಿಕ್ಕಟನ್ನು ಎದುರಿಸುವಂತಾಗಿದೆ. ಇಸ್ರೇಲಿ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕೊಂಡ್ದೆಂದು ಹೇಳಲಾಗುತ್ತಿರುವ ಪೆಗಾಸಿಸ್ ಗೂಢಚರ್ಯ ಕು-ತಂತ್ರಾಂಶದ ಮೂಲಕ ವಿರೋಧಿ ನಾಯಕರ ಮಾತ್ರವಲ್ಲದೆ, ಚುನಾವಣಾ ಆಯುಕ್ತರು, ಆರೆಸ್ಸೆಸ್ಸಿನ ಓರ್ವ ಪ್ರಮುಖ

(೧೪ನೇ ಪುಟಕ್ಕೆ

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜೂನ್–ಜುಲೈ ಸಂಚಿಕೆಗಳು ಈಗ ಕೈಸೇರಿದವು. ನೀವು ಬರೆದಂತೆ ದೇಶ ಸಾವಿನ ಮನೆಯಾಗಿಯೇ ಮಾರ್ಪಟ್ಟಿತ್ತು. ಇಂದಿನ ಹೊಸ ನಮೂನೆಯ 'ದೇಶಭಕ್ತ'ರು ಇದನ್ನು ಒಪ್ಪುವುದಿಲ್ಲ, ಗೋಳ್ವಾಳ್ಕರ್ ಹೇಳುವ ಹಿಂದುತ್ವವೇ ಒಂದು, ಭಾಗವತ್ ಅವರು ಹೇಳುವುದು ಇನ್ನೊಂದು. ಇನ್ನು ಮೋದಿಯವರದ್ದೇ ಮತ್ತೊಂದು. ಜನ ಯಾರನ್ನು ನಂಬಬೇಕು? ಈ ಎಲ್ಲ ಕಂಡು ಕಣ್ಣೀರು ಬರುತ್ತದೆ.

**–ಎಂ.ಜಿ. ಹೆಗ್ಡೆ,** ಮುಂಬೈ

ಜೂನ್ ಮತ್ತು ಜುಲೈ ಸಂಚಿಕೆಗಳಲ್ಲಿ ಇತರ ಸಮಕಾಲೀನ ಚರ್ಚೆಗಳ ಜೊತೆಗೆ ಇನ್ನು ಈ ಅಭಿವೃದ್ಧಿ ಸಾಕು ಎಂಬ ಪ್ರಮುಖ ಲೇಖನಗಳು ಅವುಗಳಿಗೆ ಬಂದ ಪ್ರತಿಕ್ರಿಯೆಗಳು ಎಲ್ಲವೂ ತುಂಬಾ ಮೌಲಿಕ ಬರಹಗಳು. ತುಂಬಾ ಕಳಕಳಿಯ ಬರಹಗಳು. ಈ ಸಂಚಿಕೆಗಳನ್ನು ಆಧರಿಸಿಯೆ ಕೆಲವು ವಿಚಾರಗೋಷ್ಠಿಗಳನ್ನು ನಡೆಸಬಹುದು ಎಂದು ಅನ್ನಿಸಿತು... ಇವನ್ನು ಯುವ ಪೀಳಿಗೆಯ ಹೆಚ್ಚು ಮಂದಿ ಓದಬೇಕು , ಓದಿಸಬೇಕು.

**–ವೆಂಕಟರಮಣ ಐತಾಳ,** ಹೆಗ್ಗೋಡು

'ಹೊಸ ಮನುಷ್ಯ' ಇಂದು ಕನ್ನಡ ಮಾಧ್ಯಮ ಲೋಕದಲ್ಲಿನ ಏಕೈಕ ನಿಜದನಿಯಾಗಿದೆ.

**–ರಾಮು** (ಟಿ.ಎಸ್. ರಾಮಸ್ವಾಮಿ), ಮೈಸೂರು

'ಅಪ್ರಿಯವಾದ ಸತ್ಯವನ್ನು ನುಡಿಯಬಾರದು' ಎನ್ನುವುದು ಸುಭಾಷಿತದ ಆಶಯ. ಹಾಗಾದರೂ ನೀವು ತಿಳಿಸುವ ಅಂತಹ ಸತ್ಯಗಳೇ ನಿಮ್ಮ ಬರವಣಿಗೆಯನ್ನು ನನಗೆ ಅಪ್ಯಾಯಮಾನವಾಗಿಸುವುದು. ಅಂತಹ ಎರಡು ಸತ್ಯ ಸಂಗತಿಗಳು: ೧. "ಅದು (ಕರೋನ) ಮೂಲತಃ ಹಣ ಆಧಾರಿತ ಸುಖದ ಸ್ಪರ್ಧೆಯ ವೇಗಕ್ಕೆ ತುತ್ತಾಗಿ ಮೈಮರೆತಿರುವ ಸಮಾಜವನ್ನು ರೂಪಿಸಿರುವ ಬಂಡವಾಳಶಾಹಿ ಕೈಗಾರಿಕಾ ನಾಗರೀಕತೆಯ ಸೃಷ್ಟಿ." ೨. ವಾಟ್ಸಪ್ ಕುರಿತಂತೆ, "ಇನ್ನೊಬ್ಬರಿಗೆ ಬೇಕೋ ಬೇಡವೋ ಎಂದರಿಯುವ ಮುನ್ನವೇ ತಾವು ಅಲೆದಾಡಿ ಬಂದ ಮಾಹಿತಿಯ ತಿಪ್ಪೆ ಗುಂಡಿಗಳ ಸರಕನ್ನೆಲ್ಲ ಇನ್ನೊಬ್ಬರ ಮನೆಯ ಹಜಾರಕ್ಕೆ ಸುರಿಯುವ ವರ್ತನೆ ನನ್ನ ಪ್ರಕಾರ ಅನಾಗರಿಕ ವರ್ತನೆಯೇ.

'ಇನ್ನು ಅಭಿವೃದ್ಧಿ ಸಾಕು' ಒಂದು ಉಪಯುಕ್ತ ಸಂವಹನವಾಗಿ ಮುಂದುವರೆದಿದೆ. ಆ ಕುರಿತು ಚಿಂತನೆಯನ್ನು ಪ್ರಚೋದಿಸುವಷ್ಟು ಸಾಮಗ್ರಿ ಬಹಳಷ್ಟಿದೆ.

**–ಎಚ್.ಎಸ್. ಈಶ್ವರ,** ಬೆಂಗಳೂರು

ಇನ್ನು ಈ ಅಭಿವೃದ್ಧಿ ಸಾಕು' ಎಂಬುದು ಹೊಸ ಭರವಸೆಯನ್ನು ಹುಟ್ಟಿಸುವುದರೊಂದಿಗೆ ಕಾಲವೂ ತಕ್ಕ ಪಾಠ ಕಲಿಸುತ್ತಿದೆ. ಈ ಜಾಗತೀಕರಣ ಹುಟ್ಟುಹಾಕಿರುವ ಬೇಡಿಕೆ, ಪೂರೈಕೆ, ಉತ್ಪಾದನೆ ಎಂಬ ಬಂಡವಾಳಶಾಹಿಯ ಬೆನ್ನತ್ತಿ, ಅದು ಪ್ರಕೃತಿಯ ವಿನಾಶದ ಜೊತೆಗೆ ಕೊನೆಗೆ ನಮ್ಮನ್ನೇ ನಾವು ನಾಶಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದೇವೆ. ಗಾಂಧಿ ಮಿತಿಯುಳ್ಳ ಬದುಕನ್ನು ಹೇಳಿದ್ದು, ಅದನ್ನು ಆಯ್ಕೆ ಮಾಡಿಕೊಂಡಿದ್ದು ಈ ಕಾರಣಕ್ಕೆ. ಮಿತಿಯುಳ್ಳ ಬದುಕು ನಮ್ಮನ್ನೇ ನಾವು ಅರಿತುಕೊಳ್ಳುವ ಆಧ್ಯಾತ್ಮಿಕ ನಡೆ, ಪ್ರಕೃತಿಯೊಂದಿಗಿನ ಸಹಬಾಳ್ವೆ.

ಯೋಗೇಂದ್ರ ಯಾದವ್, ಇವತ್ತಿಗೆ ಭಾರತಕ್ಕೆ ಹೊಸ ಭರವಸೆ ಬೇಕು ಅಂತ ಹೇಳಿದ್ದಾರೆ. ಹೊಸ ತತ್ವಪ್ರಣಾಳಿಕೆಯಲ್ಲಿ ಪರಿಸರವಾದವನ್ನು ಸೇರಿಸಿದ್ದಾರೆ. ಆ ಪರಿಸರವಾದಕ್ಕೆ ಮೊದಲ ಆದ್ಯತೆ ದೊರೆಯಲಿ. ಇದು ವಿಶ್ವ ಮಟ್ಟದಲ್ಲೂ ಆಗಬೇಕು.

**–ಸಂಜಯ್ ಕುಮಾರ್,** ಬೊಕ್ಕೆಪುರ (ಚಾಮರಾಜನಗರ)

ಗಾಂಧೀಜಿಯವರ ಮೈಮೇಲಿನ ಬಿಳಿ ಬಟ್ಟೆಯ ಹೊದಿಕೆಯಂತೆ ಈ ಬಾರಿಯ ಹೊಸ ಮನುಷ್ಯ ಕಂಡಿತು. ನಿಮ್ಮ ಸಂಪಾದಕೀಯದಿಂದ ವೈರಾಣುವಿನ ಮೂಲ ಎಂಬುದು ಮನುಷ್ಯನ ದುರಾಸೆ ಒಳಗಿದೆಯೋ ಅಥವಾ ಆ ದುರಾಸೆಯಿಂದ ಉಂಟಾದ ಅಹಂ ಎಂಬ ಬಲೂನು ಕಣ್ಣಿಗೆ ಕಾಣದ ವೈರಾಣು ಎದುರು ಭೀತಿಗೊಂಡಿದೆಯೋ ಎಂಬ ಪ್ರಶ್ನೆ ಹುಟ್ಟುಹಾಕುತ್ತಿದೆ. ಇನ್ನು ಯೋಗೇಂದ್ರ ಯಾದವ್ ಜೆಪಿಯವರ ಅಪೂರ್ಣ ಕ್ರಾಂತಿಯನ್ನು ಸಂಪೂರ್ಣಗೊಳಿಸಲು ಕೆಲವು ಸೂತ್ರಗಳನ್ನು ಕೊಟ್ಟಿರುವುದು ಇವತ್ತಿನ ರಾಜಕೀಯ ಸಮಸ್ಯೆಗಳಿಗೆ ಪರ್ಯಾಯ ಸೃಷ್ಟಿಸುವ ಮೂಲ ಮಾತೃಕೆಯಂತಿದೆ. ಆದರೆ ಇಂದು ದೇಶದಲ್ಲಿ ಪರ್ಯಾಯ ರಾಜಕಾರಣ ಸಾಧ್ಯವೇ ಇಲ್ಲ ಎಂಬ ವಾತಾವರಣ ಸೃಷ್ಟಿಯಾಗಿದೆಯಲ್ಲ? ಎಂ. ರಾಜು ಅವರ ಅನುವಾದ ಚೆನ್ನಾಗಿದೆ.

ಹಿಂದೊಮ್ಮೆ ನಮ್ಮ ಚಾಮರಾಜನಗರದ ಹಳ್ಳಿಯಲ್ಲಿ ದಲಿತ ಸಮಾವೇಶ ನಡೆದ ನಂತರ ಅಪ್ಪ ಬಸ್ಸುಗಳೆ ಇಲ್ಲದ ಸಂದರ್ಭದಲ್ಲಿ ಸೈಕಲ್ ಮೇಲೆ ಸಿದ್ದಲಿಂಗಯ್ಯನವರನ್ನು ಕೂರಿಸಿಕೊಂಡು ಪಟ್ಟಣಕ್ಕೆ ಬಂದದ್ದು ಮತ್ತು ಆ ಸ್ನೇಹ *ಕಪ್ಪು ಜನರ ಕೆಂಪು ಕಾವ್ಯ, ಹೊಲೆ ಮಾದಿಗರ ಹಾಡು* ಕೃತಿಗಳು ನನಗೂ ಕಾಣುವಂತಾಗಿ ದಲಿತ ಲೋಕದ ಸಂವೇದನೆಗಳು ತಿಳಿಯುವಂತೆ ಮಾಡಿದ್ದು ಈಗ ನೆನಪಾಗುತ್ತಿದೆ. ಅವರ ಇತ್ತೀಚಿನ ಸೈದ್ಧಾಂತಿಕ ಪಲ್ಲಟದ ಆಚೆಗೂ ಅವರು ಯಾಕೆ ಕಾಡುತ್ತಿದ್ದಾರೆ ಎಂದು ನೆನೆದರೆ ಅಚ್ಚರಿಯಾಗುತ್ತೆ.

ಹಿಂದೆ ವಾರದಲ್ಲಿ ಒಂದು ದಿನ ಸೈಕಲ್ ಬಳಸುತ್ತೇವೆ ಎಂದು ಶುರುಮಾಡಿ ತಿಂಗಳುಗಟ್ಟಲೆ ತನಕ ಪಾಲಿಸಿ ಅದನ್ನು ಆನಂತರ ಮರೆತೆ ಬಿಟ್ಟೆವು ಈ ವೇಗದ ಬದುಕಿಗೆ ನಾಶವಾದರೂ ಪರ್ವಾಗಿಲ್ಲ ಎನ್ನುವಷ್ಟು ಹೊಂದಿಕೊಂಡಿದ್ದೇವೆಯೇ? ಸಿಗ್ನಲ್ ಸಿಗದೆ ಬೆಟ್ಟವನ್ನೇರಿ ಛತ್ರಿ ಹಿಡಿದು ಕುಳಿತ ಆನ್‌ಲೈನ್ ಕ್ಲಾಸುಗಳು ಹೊಸ ತಲೆಮಾರನ್ನು ಹೇಗೆ ರೂಪಿಸುತ್ತಿವೆ? ಇಲ್ಲ ಅದಕ್ಕೇ ಗ್ರೇಟಾಥರ್ಮ್ಸ್ ಬರ್ಗ್‌ರಂತ ಪರಿಸರಪ್ರೇಮಿ ಮಕ್ಕಳಿದ್ದಾರೆ. ಲೇಖಕ ಸಂತೋಷ್ ಗುಡ್ಡಂಗಡಿಯವರ ಸರ್ಕಾರಿ ಶಾಲೆಯ ಮಕ್ಕಳು ನೆಸ್ಲೆ, ಕೋಕೊಕೋಲದಂತಹ ಕಂಪನಿಗಳ ಪರಿಸರ ವಿರೋಧಿ ಪ್ಲಾಸ್ಟಿಕ್‌ಗಳನ್ನು ಅದೇ ಕಂಪನಿಗೆ ವಾಪಸ್ ಕಳಿಸಿ ದೊಡ್ಡವರು ಮಾಡಲಾಗದ ಸಾಧನೆ ಮಾಡಿ ಕಂಪನಿಯವರು ಗಮನಿಸಿ ಮರುಪತ್ರ ಬರೆಯುವಂತೆ ಮಾಡಿದ್ದರು. ಇಂಥ ಮಕ್ಕಳೇ ಮನುಷ್ಯಕುಲದ ನಾಶವನ್ನು ತಪ್ಪಿಸುವ ದೇವರಂತೆ ಕಾಣಿಸುತ್ತಿದ್ದಾರೆ.

**–ಅಪೂರ್ವ ಡಿಸಿಲ್ವ,** ಮೈಸೂರು

ಜುಲೈ ಸಂಚಿಕೆಯ ನಿಮ್ಮ ಸಂಪಾದಕೀಯ ಕೋವಿಡ್ ಕುರಿತಂತೆ ಬಹುಶಃ ನಾನು ಕನ್ನಡದಲ್ಲಿ ಓದಿದ ಅತ್ಯಂತ ಸಮಗ್ರ ಬರಹ. ಇದಕ್ಕೆ ಸರಿಸಮವಾದ ನಿಮ್ಮ ಇನ್ನೊಂದು ಟಿಪ್ಪಣಿ ಎಂದರೆ 'ಈ ಅಭಿವೃದ್ಧಿ ಇನ್ನು ಸಾಕು' ಕುರಿತ ಎರಡನೆಯ ಸುತ್ತಿನ ಚರ್ಚೆಗೆ ನೀವು ಬರೆದಿರುವ ಮುನ್ನುಡಿ, ಈ ಚರ್ಚೆಯಲ್ಲಿ ಗಮನ ಸೆಳೆದವುಗಳೆಂದರೆ ವಿಜಯೇಂದ್ರ ಪಾಟೀಲ, ಮಮತಾ ರೈ ಮತ್ತು ಎನ್. ಎಂ. ಕುಲಕರ್ಣಿಯವರ ಬರಹಗಳು. ಅವು ವಾಸ್ತವಿಕತೆಗೆ ಅಂಟಿಕೊಂಡ ಬರಹಗಳು. ನಿಮ್ಮ ಸಂಪಾದಕೀಯ ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಎರಡು ಮರ್ಯಾದೆಗೇಡು ಹತ್ಯೆಗಳ ಬಗ್ಗೆ ಓದುಗರ ಗಮನ ಸೆಳೆಯುತ್ತಾ ಸಾಮಾಜಿಕವಾಗಿ ಅತ್ಯಂತ ಪ್ರಗತಿಪರವೆನಿಸಿದ್ದ ನಮ್ಮ ರಾಜ್ಯ ಈಗ ಏಕೆ ಇಷ್ಟು ಬರ್ಬರವಾಗುತ್ತಿದೆ ಯೋಚಿಸಬೇಕು ಎಂದಿರುವುದು ಬಹು ಮಾರ್ಮಿಕ ಮಾತೇ ಆಗಿದೆ.

**–ಎಂ ದೇವರಾಜು,** ದಾವಣಗೆರೆ

ಜುಲೈ ಸಂಚಿಕೆಯ ನಿಮ್ಮ ಬಿಡಿ ಟಿಪ್ಪಣಿಗಳಲ್ಲಿ ನಮ್ಮ ಕಲಿತ ದಲಿತ ಸಮುದಾಯದ ಕೆಲವರು ಕುವೆಂಪು ಬಗ್ಗೆ ತಳೆದಿರುವ ನಿಲುವಿನ ಬಗ್ಗೆ ಬರೆದಿರುವುದನ್ನು ಓದಿ ಆಶ್ಚರ್ಯವೂ, ನೋವೂ ಒಟ್ಟಿಗೆ ಉಂಟಾಯಿತು. 'ಜಲಗಾರ' ಮತ್ತು 'ಶೂದ್ರ ತಪಸ್ವಿ' ಎಂಬ ಎರಡು ನಾಟಕಗಳು ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಗುತ್ತಿಯಂತಹ ಉಜ್ವಲ ಪಾತ್ರ ಕುವೆಂಪು ಅವರಿಂದ ಸೃಷ್ಟಿಯಾಗಿರದಿದ್ದರೆ ಕನ್ನಡ ಜನತೆ ಅಂಬೇಡ್ಕರ್‌ರನ್ನು ಈಗಿನಂತೆ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಸಾಧ್ಯವೇ ಇರಲಿಲ್ಲ ಎಂಬುದು ಇಂತಹ ದಲಿತ ಮನಸ್ಸುಗಳಿಗೆ ಅರ್ಥವಾಗದೇ ಇರುವುದು ಆಶ್ಚರ್ಯ ಮತ್ತು ಅವರ ಸ್ಥೂಲ ಬುದ್ಧಿಯ ದ್ಯೋತಕ.

**–ಆರ್. ರಾಜಶೇಖರ ರೆಡ್ಡಿ, ಹೊಸಪೇಟೆ**

ಗಾಂಧಿ ಮತ್ತು ಲೋಹಿಯಾರನ್ನು ಅಂಬೇಡ್ಕರ್‌ಗೆ ಹೋಲಿಸಿ ಬೆಳಗಾವಿ ಕಡೆಯ ದಲಿತರೊಬ್ಬರು ಬರೆದಿರುವರೆಂದು ನೀವು ಉಲ್ಲೇಖಿಸಿರುವ ಮಾತು ಅಸಭ್ಯವೂ, ಖಂಡನೀಯವೂ. ಅಂಬೇಡ್ಕರ್ ಪರಂಗೆ ಅಪಚಾರ ಮಾಡುವಂಥದ್ದೂ ಆಗಿದೆ. ಆಧುನಿಕ ಭಾರತದಲ್ಲಿ ಹಲವು ಸಾಮಾಜಿಕ–ರಾಜಕೀಯ ಸುಧಾರಕರು ಆಗಿ ಹೋಗಿದ್ದಾರೆ. ಅವರಲ್ಲಿ ಅಂಬೇಡ್ಕರ್ ಅವರೂ ಒಬ್ಬರಷ್ಟೆ ಅವರ ಕೆಲವು ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ತಾಳುವುದೇ ಅಪರಾಧವೆನ್ನುವುದು ದುರಭಿಮಾನದ, ಸ್ಥಗಿತ ಮನಸ್ಸುಗಳ ಲಕ್ಷಣವಷ್ಟೆ.

**–ಎಂ. ನಾಗರಾಜಮೂರ್ತಿ,** ಮೈಸೂರು

**ಹೊಸ ಮನುಷ್ಯ'ದ ೧೦ನೇ ವರ್ಷದ ಕೊಡುಗೆ : ಸದ್ಯಕ್ಕೆ ಚಂದಾ ಬೇಡ!**

**ಪ್ರತಿ ವರ್ಷ 'ಹೊಸ ಮನುಷ್ಯ' ತನ್ನ ಆಗಸ್ಟ್ ಸಂಚಿಕೆಯನ್ನು ವಾರ್ಷಿಕ ವಿಶೇಷ ಸಂಚಿಕೆಯಾಗಿ ಹೊರತರುತ್ತಿತ್ತು. ಆದರೆ ಈ ವರ್ಷ ಕರೋನಾ ತಂದಿರುವ ದುಃಖ–ಸಂಕಷ್ಟಗಳ ಕಾರಣ ಈ ವಿಶೇಷ ಸಂಚಿಕೆಯನ್ನು ಹೊರತರದಿರಲು ನಿರ್ಧರಿಸಲಾಗಿದೆ. ಆದರೆ ಇದಕ್ಕೆ ಬದಲಾಗಿ, ಮುಂದಿನ ಫೆಬ್ರುವರಿಗೆ ಪತ್ರಿಕೆ ಹತ್ತು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಸಂದರ್ಭದಲ್ಲಿ ಈ ವಾರ್ಷಿಕ ವಿಶೇಷ ಸಂಚಿಕೆಯನ್ನು ಹೊರತರುವ ಆಲೋಚನೆ ಇದೆ.**

**ಬಹಳ ಜನ ಓದುಗರು ತಮ್ಮ ಚಂದಾ ಮುಗಿದಿದೆಯೇ? ಎಂದು ವಿಚಾರಿಸುತ್ತಾ, ಚಂದಾ ನವೀಕರಣಕ್ಕೆ ಮುಂದಾಗಿದ್ದಾರೆ. ಪತ್ರಿಕೆ ಕುರಿತ ಈ ಅಭಿಮಾನಕ್ಕಾಗಿ ಇವರಿಗೆಲ್ಲ ವಂದನೆ ಸಲ್ಲಿಸುತ್ತಾ, ಬಹಳ ಜನ ಓದುಗರ ಚಂದಾ ಸೆಪ್ಟೆಂಬರ್‌ಗೆ(ಮುಂದಿನ ತಿಂಗಳು) ಮುಗಿದಿದ್ದರೂ, ನಮ್ಮ ಚಂದಾ ನಿಧಿಯಲ್ಲಿ ಒಂದಿಷ್ಟು ಹಣ ಉಳಿದಿರುವುದರಿಂದ, ಪತ್ರಿಕೆಯ ಹತ್ತನೇ ವರ್ಷದ ಕೊಡುಗೆಯಾಗಿ, ಮುಂದಿನ ಮಾರ್ಚ್‌ವರೆಗೆ ಯಾರಿಂದಲೂ ಚಂದಾ ಪಡೆಯದಿರಲು ನಿರ್ಧರಿಸಿದ್ದೇವೆ. ಚಂದಾ ನಿಧಿಯಲ್ಲಿ ಉಳಿದಿರುವ ಹಣದಿಂದ ಅಕ್ಟೋ.–ಮಾರ್ಚ್‌ವರೆಗಿನ ಆರು ಸಂಚಿಕೆಗಳನ್ನು (ವಾರ್ಷಿಕ ವಿಶೇಷ ಸಂಚಿಕೆ ಸೇರಿ) ಹೊರತರಲು ಸಾಕಾಗದಿರುಬಹುದಾದರೂ, ಕೊರತೆಯ ಹಣವನ್ನು ಆರ್ಥಿಕವಾಗಿ ಅನುಕೂಲ ಪರಿಸ್ಥಿತಿಯಲ್ಲಿರುವ ಕೆಲವು ಆಯ್ದ ಓದುಗರಿಂದ ಸಣ್ಣ ಮೊತ್ತದ ದೇಣಿಗೆಗಳಾಗಿ ಪಡೆದು ತುಂಬಿಕೊಳ್ಳಲು ನಿರ್ಧರಿಸಲಾಗಿದೆ. ಹಾಗಾಗಿ ಯಾವ ಓದುಗರೂ ಸದ್ಯಕ್ಕೆ ಚಂದಾ ಕಳಿಸುವ ಅಗತ್ಯವಿಲ್ಲ.–ಸಂಪಾದಕ.**

## ಈ ಅಭಿವೃದ್ಧಿ ಇನ್ನು ಸಾಕು: ಮುಂದುವರೆದ ಚರ್ಚೆ



## ೧. ಪರಿಸರ ಜೀವನ ಶೈಲಿ ಪರಿಷತ್ತು-ಸಮಾವೇಶಗಳ ಬಗ್ಗೆ ಈಗ ಯೋಚಿಸಬೇಕಿದೆ

**ಕೊ**ರೋನಾ, ಹವಾಮಾನ ಸಂಕಷ್ಟ ಭೂ ತಾಪ ಹೆಚ್ಚಳ, ಅರಣ್ಯ-ಜೀವಿ ವೈವಿಧ್ಯ ನಾಶ, ಪರಿಸರ ಮಾಲಿನ್ಯ, ಪೆಟ್ರೋಲಿಯಂ ಮತ್ತು ಇತರ ಖನಿಜಗಳ ಲಭ್ಯತೆ ಕಡಿಮೆಯಾಗುವದು ವಿಪರೀತ ನಗರೀಕರಣ, ಕೃಷಿ ಭೂಮಿಯ ಫಲವತ್ತತೆಯ ಇಳಿಕೆ, ಇವೇ ಮುಂತಾದವುಗಳ ಜೊತೆಗೇ ಕೋಮು ವೈಷಮ್ಯ, ಜೀವನ ಶೈಲಿ ಕಾಯಿಲೆಗಳು, ಒಂಟಿತನ-ಖಿನ್ನತೆ, ನಿರುದ್ಯೋಗ, ಸಾಮಾಜಿಕ ಅಸಹಿಷ್ಣುತೆ ಹೀಗೆ ನಾವು ಎದುರಿಸುತ್ತಿರುವ ಸಮಸ್ಯೆಗಳ ಈ ಪಟ್ಟಿಯನ್ನು ಇನ್ನೂ ಬೆಳೆಸುತ್ತ ಹೋಗಬಹುದು. ಆದರೆ ಕಟು ವಾಸ್ತವ ಏನೆಂದರೆ ನಮ್ಮ ಸಮಾಜದಲ್ಲಿನ ಸುಮಾರು ಶೇ೯೯ ಜನರಿಗೆ ಈ ಸಮಸ್ಯೆಗಳ ಗಂಭೀರತೆ, ಅವುಗಳ ಕಾರಣ, ಅವುಗಳ ನಡುವಿನ ಅಂತರ್‌ಸಂಬಂಧ ಇತ್ಯಾದಿಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ಇವೆಲ್ಲದರ ಬಗ್ಗೆ ಅಷ್ಟಿಷ್ಟು ಗೊತ್ತಿರುವ ನಾವು ಅಂದರೆ ಈ ಲೇಖನ ಮಾಲಿಕೆಯಲ್ಲಿ ಪಾಲ್ಗೊಳ್ಳುತ್ತಿರುವವರು ಕೇವಲ ಶೇ.೧ ಜನ ಮಾತ್ರ. ಹಾಗೆಂದ ಮಾತ್ರಕ್ಕೆ ನಾವು ಧೃತಿಗೆಡಬೇಕಾಗಿಲ್ಲ. ಸಮಸ್ಯೆಗಳ ಅಗಾಧತೆ ಮತ್ತು ತುರ್ತು ಎರಡನ್ನೂ ಅರಿತು ನಾವು ಪರಿಹಾರಗಳನ್ನು ಶೋಧಿಸಬೇಕಿದೆ, ಅವುಗಳನ್ನು ಬಾಳಬೇಕಿದೆ. ಈ ಸಂಬಂಧವಾಗಿ ನನಗೆ ತೋಚುವ ಕೆಲವು ಸಂಗತಿಗಳು ಇವು :

೧. ಮಾತು, ಲೇಖನ, ಚರ್ಚೆ ಎಲ್ಲ ಹೌದು. ಆದರೆ ನಾವು ಕಂಡುಕೊಳ್ಳುವ ಪರಿಹಾರಗಳನ್ನು-ಅವು ಎಷ್ಟೇ ಸಣ್ಣ ಮತ್ತು ವಿಚಿತ್ರ ಅನಿಸಿದರೂ ಸರಿಯೇ-ವೈಯಕ್ತಿಕ ಕೌಟುಂಬಿಕ ಮತ್ತು ಸಾಮುದಾಯಿಕ ಸ್ತರಗಳಲ್ಲಿ ಕ್ರಿಯಾ ರೂಪದಲ್ಲಿ ಕಾಣುವಂತಾಗಬೇಕು. ರಮಣ, ರಾಮಕೃಷ್ಣ, ಸಾಯಿಬಾಬಾ, ಗಾಂಧಿ, ವಿನೋಬಾ ಭಾವೆ, ಸಿದ್ಧೇಶ್ವರ ಸ್ವಾಮೀಜಿ ಮುಂತಾದ ದಾರ್ಶನಿಕರಂತೆ ಸ್ವೇಚ್ಛಾ ಸರಳತೆಯ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು..

೨. ಕನಿಷ್ಠತಾವಾದ {ಮಿನಿಮಲಿಸಂ] , ವೈಜ್ಞಾನಿಕ ಪಾವಿತ್ರ್ಯ, ಪರಿಸರಕೇಂದ್ರಿತ ಆಧ್ಯಾತ್ಮ, ಶೂನ್ಯ ಇಂಗಾಲ ಜೀವನಶೈಲಿ, ಭೌತಿಕ ಸಮೃದ್ಧಿ ಮತ್ತು ಸುಮಧುರ ಸಂಬಂಧಗಳ ಸಮನ್ವಯ, ಸರಳ ಶರೀರಶ್ರಮಪೂರ್ಣ ಬದುಕು, ಸ್ಥಳೀಕರಣ ಇವೇ ಮುಂತಾದ ಪರಿಕಲ್ಪನೆಗಳ ಬಗ್ಗೆ ನಮ್ಮ ನಡುವೆ ಇನ್ನೂ ವ್ಯಾಪಕವಾದ ಚರ್ಚೆ ನಡೆಯಬೇಕಿದೆ. ಅದಕ್ಕಾಗಿ ನಾವು ಸಮಾನ ಮನಸ್ಕರು ಸಾಹಿತ್ಯ ಪರಿಷತ್ತು ಸ್ವರೂಪದ ಒಂದು "ಪರಿಸರಸ್ನೇಹಿ ಜೀವನಶೈಲಿ ಪರಿಷತ್ತು" ರಚಿಸಿಕೊಂಡು ನಿಯಮಿತವಾಗಿ ಸಮಾವೇಶಗಳನ್ನು ಹಮ್ಮಿಕೊಂಡು ವಿಚಾರ ವಿನಿಮಯ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಿದೆ.

೩. ನಾನು ಇತ್ತೀಚಿಗೆ ಪೀಟರ್ ವೋಲೆಬೆನ್ ಎಂಬ ಜರ್ಮನ್ ಪರಿಸರವಾದಿ ಬರೆದಿರುವ The Hidden Life of Trees ಮತ್ತು The Inner life of Animal ಎಂಬ ಎರಡು ಪುಸ್ತಕ ಓದಿದೆ. ನಮ್ಮ ಸುತ್ತಲಿನ ಜೀವಜಗತ್ತಿನ ಬಗೆಗಿನ ನಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ಇಂಥ ಪುಸ್ತಕಗಳು ಬಹಳ ಸಹಾಯಕಾರಿ. ಇಂತಹ ಸಾಹಿತ್ಯ ಸಿನೆಮಾ, ಯೂ ಟ್ಯೂಬ್ ಯೂನಿವರ್ಸಿಟಿ (!) , ವಾಟ್ಸಪ್ ಮತ್ತು ಇಂಟರ್ನೆಟ್ ಮುಂತಾದ ಆಧುನಿಕ ತಂತ್ರಜ್ಞಾನದ ಸರಿಯಾದ ಬಳಕೆಯಿಂದ ನಾವು ಜಗತ್ತಿನ ಮೂಲೆ ಮೂಲೆಯಲ್ಲಿ ನಡೆದಿರುವ ಪರಿಸರಸ್ನೇಹಿ ಜೀವನಶೈಲಿಯ ಪ್ರಯತ್ನ - ಪ್ರಯೋಗಗಳ ಬಗ್ಗೆ ತಿಳಿದುಕೊಂಡು ಅವುಗಳನ್ನು ನಾವು ಕೂಡ ಅನುಷ್ಠಾನಗೊಳಿಸಿಕೊಳ್ಳುವತ್ತ ಹೆಜ್ಜೆ ಇಡಬೇಕಿದೆ. ಹೀಗೆ ಮಾಡುವ ಮೂಲಕ ನಾವು "ಮನುಷ್ಯ ಶ್ರೇಷ್ಠತೆ"ಯ ಜೀವನ ದೃಷ್ಟಿಕೋನದಿಂದ ಹೊರಗೆ ಬಂದು ಪರಿಸರಕೇಂದ್ರಿತ ಜೀವನವಿಧಾನವನ್ನು ರೂಢಿಸಿಕೊಂಡು ನಿಜವಾದ ಅರ್ಥದಲ್ಲಿ "ವಿಶ್ವ ಮಾನವ"ರಾಗಬೇಕಿದೆ. ದೇಶ ದೇಶಗಳ ನಡುವಿನ ರಾಜಕೀಯ ಗಡಿಗಳ ಆಚೆ ಸಮಾನ ಮನಸ್ಕರ ಒಂದು ವಿಶಾಲವಾದ ಬಳಗವನ್ನು-ಬೇಕಾದರೆ ಅದನ್ನು ಒಂದು ಪಂಥ ಎಂದು ಕರೆದರೂ ಸರಿಯೇ-ರೂಪಿಸಿಕೊಳ್ಳಲು ಇದು ಅತ್ಯಂತ ಸೂಕ್ತ ಕಾಲ.



**-ಸಂಜೀವ ಕುಲಕರ್ಣಿ**, ಹಿರಿಯ ವೈದ್ಯರು, ಬಾಲ ಶಿಕ್ಷಣ ಮತ್ತು ಸಾವಯವ ಕೃಷಿ ಕಾರ್ಯಕರ್ತರು, ಧಾರವಾಡ

## ೨. ಎಡೆಬಿಡದ ದುಡಿತ, ಬಿಡುವಿಲ್ಲದ ಸಂಚಾರ, ತಲ್ಲಣಗೊಂಡ ಮನಸ್ಸುಗಳು....

**ನಾ**ನು ಬ್ಯಾಂಕ್ ಗೆ ಸೇರಿದ ಹೊಸತರಲ್ಲಿ ನಮಗೆಲ್ಲ ಮೊದಲಿನಿಂದಲೇ ಉಳಿತಾಯ ಮಾಡುವ ಅಭ್ಯಾಸ ರೂಢಿಸಿಕೊಳ್ಳಿ, ಇದರಿಂದ ಮುಂದೆ ನಿಮಗೆ ಕಷ್ಟ ಕಾಲಕ್ಕೆ ಆಗುತ್ತದೆ. ಇಲ್ಲದಿದ್ದರೆ ಬೇರೆ ಯಾರಿಗಾದರೂ ಕಷ್ಟಕ್ಕೆ ಬೇಕಾಗುತ್ತದೆ. ಏನಾದರು ಕೊಳ್ಳಬೇಕಾದರೆ ನಿನ್ನ ಉಳಿಕೆ ಹಣದಲ್ಲಿ ತೆಗೆದುಕೋ, ಸಂತೋಷ ತರುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಆಗ ಇದ್ದ ಧ್ಯೇಯ ಏನೆಂದರೆ ಇಂದು ಉಳಿಸು ಮುಂದೆ ಕೊಳ್ಳು (Save now buy later) ಆದರೆ ಈಗೇನಾಗಿದೆ. ಉದಾರ ಆರ್ಥಿಕ ನೀತಿಯಿಂದಾಗಿ ಈಗ ಕೊಳ್ಳು ಮುಂದೆ ಪಾವತಿಸು ( Buy now pay later) ಮಾತು ಪ್ರಚಲಿತವಾಗಿದೆ. ಇದಕ್ಕೆ ಪೂರಕವಾದ ವಾತಾವರಣ. ಎಲ್ಲೆಡೆ ಮಾರುಕಟ್ಟೆಗಳಲ್ಲಿ ಎಂಥವರನ್ನೂ ಬೆರಗು ಗೊಳಿಸಿ ಆಕರ್ಷಿಸಲು ಜೋಡಿಸಿರುವ ವೈವಿಧ್ಯಮಯ ವಸ್ತುಗಳು. ಒಂದನ್ನು ಕೊಂಡರೆ ಮತ್ತೊಂದು ಉಚಿತ ಎಂಬ ದೊಡ್ಡ ದೊಡ್ಡ ಜಾಹಿರಾತುಗಳು.. ಕ್ರೆಡಿಟ್ ಕಾರ್ಡ್‌ಗಳ, ರಿವಾರ್ಡ್ ಪಾಯಿಂಟ್ಸ್, ಬಡ್ಡಿ ರಹಿತ ಸುಲಭ ಕಂತುಗಳಲ್ಲಿ ಮರುಪಾವತಿ. ಕೆಲವು ಬ್ಯಾಂಕ್ ಕಾರ್ಡ್‌ಗಳಲ್ಲಿ ಹಣ ವಾಪಸ್ (Cash back ) ಇತ್ಯಾದಿ ಪ್ರಲೋಭನೆಗಳು. ಇವೆಲ್ಲ ಏತಕ್ಕಾಗಿ? ಇವುಗಳಿಂದ ಪಡೆಯುತ್ತಿರುವುದಾದರೂ ಏನು? ಈ ಸಂಗ್ರಹ ಮೋಹಕ್ಕೆ ಕಾರಣವೇನು? ಇದೇ ಈಗಿನ ಅಭಿವೃದ್ಧಿಯ ಹೊಸ ಸ್ವರೂಪ. ಯಾವುದೇ ಉದ್ಯಮ ಲಾಭಂಶವಿಲ್ಲದೆ ವ್ಯಾಪಾರ ಮಾಡುವುದಿಲ್ಲ ಎಂಬ ಕನಿಷ್ಠ ಜ್ಞಾನವು ಜನರಿಗಿಲ್ಲ. ಮನೆ ತುಂಬ ಸಾಮಾನು. ಉಪಯೋಗಕ್ಕೆ ಬರಲಿ ಬಾರದಿರಲಿ ಮನೆಯಲ್ಲಿರಬೇಕು. ಹೀಗೆ ಕೊಳ್ಳುಬಾಕತನಕ್ಕೆ ಮಿತಿ ಇಲ್ಲ. ಅವುಗಳಿಂದಲೇ ಇವರಿಗೆ ಸಮಾಜದಲ್ಲಿ ಘನತೆ ಪ್ರತಿಷ್ಠೆ. ಇದರಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಯಾರಿಗೂ ಎಚ್ಚರವಿಲ್ಲ. ಇವೆಲ್ಲವುಗಳ ಪರಿಣಾಮವೇ , ತಲ್ಲಣಗೊಂಡಿರುವ ಮನಸ್ಸುಗಳು, ಎಡೆಬಿಡದೆ ದುಡಿತ, ಬಿಡುವಿಲ್ಲದ ಸಂಚಾರ, ಜೀವನವೆಂದರೆ ಹೊರಲಾಗದೆ ಹೊರೆ, ಮನಸ್ಸಿಗೆ ನೆಮ್ಮದಿಯಿಲ್ಲ, ಸದಾ ಆತಂಕ.ಭಯ

ಇವೆಲ್ಲವನ್ನೂ ವಿಶ್ಲೇಷಿಸಿ, ಮತ್ತೆ ಸಾಮಾನ್ಯ ಬದುಕಿಗೆ ಮರಳಲು ಕೊರೊನ ಒಂದು ಅವಕಾಶ ಕಲ್ಪಿಸಿದೆ. ಕೆಲಸ ಕಡಿತ, ಸಂಬಳ ಕಡಿತ, ನಿರುದ್ಯೋಗ ಮತ್ತಾರು ಸಮಸ್ಯೆಗಳಿಗೆ ಕಾರಣವನ್ನು ಹುಡುಕುವ ಸುಸಂದರ್ಭ ಇದು. ಬದುಕು ಸರಳವಾಗಿಸಿ, ಕೇವಲ ಅಗತ್ಯಗಳಿಗಷ್ಟೇ ಆದ್ಯತೆ ನೀಡಿ, ಕೊಳ್ಳುಬಾಕತನಕ್ಕೆ ಇತಿಶ್ರೀ ಹಾಡಿ ನೆಮ್ಮದಿಯ ಬಾಳನ್ನು ಕಟ್ಟಿಕೊಳ್ಳಬೇಕು. ಚೆದುರಿ ಅಲ್ಲಾಡುತ್ತಿರುವ ನಮ್ಮ ನಂಬಿಕೆಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು. ಸಂದೇಹ, ಸಂಶಯಗಳಿಂದ ತುಂಬಿರುವ ಭವಿಷ್ಯಕ್ಕೆ ಭರವಸೆ ತಂದುಕೊಳ್ಳಬೇಕು. ಇವುಗಳನ್ನು ಕಂಡು ಕೊಳ್ಳಲು ಮತ್ತೆ ಮತ್ತೆ ನಾವು ಗಾಂಧಿಯವರಿಗೇ ಮೊರೆಹೋಗಬೇಕು.



**-ಎನ್.ಆರ್. ಬಾಲಸುಬ್ರಮಣ್ಯ**, ಹಿರಿಯ ಬ್ಯಾಂಕ್ ಮ್ಯಾನೇಜರ್, ಬೆಂಗಳೂರು

## ೩, ಪತ್ರಿಕೆಯ ಈ ಚರ್ಚೆ ನನ್ನಲ್ಲಿ ಎಬ್ಬಿಸಿದ ಹಲವು ಪ್ರಶ್ನೆಗಳು

ಜೂನ್ ಮತ್ತು ಜುಲೈ ಸಂಚಿಕೆಗಳಲ್ಲಿ 'ಈ ಅಭಿವೃದ್ಧಿ ಇನ್ನು ಸಾಕು' ಎಂಬ ಚರ್ಚೆಯಲ್ಲಿ ಹಲವು ಸಹೃದಯರು ಪಾಲ್ಗೊಂಡು ತಮ್ಮ ದೃಷ್ಟಿ, ಧೋರಣೆಗಳನ್ನು ನಿರೂಪಿಸಿದ್ದಾರೆ. ಕೋವಿಡ್ ಎಂಬುದು ನಿತ್ಯ ದುಡಿದು ಜೀವನ ಸಾಗಿಸುವವರ ಪಾಲಿಗೆ ದೊಡ್ಡ ನರಕವಾಯಿತು. ಇಂಥ ಸನ್ನಿವೇಶದಲ್ಲಿ ನಾವು ನಿತ್ಯ ಜಪಿಸುವ ಅಭಿವೃದ್ಧಿ ಎಲ್ಲಿ ಹೋಯಿತು? ಕೆಲವು ಬಂಡವಾಳಶಾಹಿಗಳು ಮಾತ್ರ ಎಂತಹ ಭೀಷಣ ಸನ್ನಿವೇಶದಲ್ಲೂ ದುಡ್ಡಿನ ಪಲ್ಲಂಗದ ಮೇಲೆ ಪವಡಿಸಿರುತ್ತಾರೆ. ಅವರು ಹೇಳುತ್ತ ಬಂದಿರುವ, ಬರುವ ಸಂಗತಿಗಳಲ್ಲಿ ಸದಾಕಾಲ ಇರುವ ವಾಸ್ತವ ಮಾಯವಾಗಿರುತ್ತದೆ. ಇವರನ್ನು ಬೆಂಬಲಿಸುವ ಜನಪ್ರತಿನಿಧಿಗಳು ಕೂಡ ಮೇಲ್ಮುಖಿ ಅಭಿವೃದ್ಧಿ ಜಪ ಮಾಡುತ್ತ ವಂಚಿಸುತ್ತಿರುತ್ತಾರೆ. ಪಶ್ಚಿಮ ಘಟ್ಟಗಳ ವ್ಯಾಪ್ತಿಗೆ ಬರುವ ' ಜಿಲ್ಲೆಗಳ ಹಲವು ಭೂಪ್ರದೇಶಗಳು ಹೇಗಿರಬೇಕು? ಎಂಬುದರ ಕುರಿತು ಮಾಧವ ಗಾಡ್ಗೀಳ್ ಮತ್ತು ಕಸ್ತೂರಿ ರಂಗನ್ ನೀಡಿರುವ ಎರಡೂ ವರದಿಗಳನ್ನು ಮೂಲೆಗೆ ತಳ್ಳಬೇಕು ಎಂದು ಈ ಭಾಗದ ಶಾಸಕರು, ಸಚಿವರು ಒಂದೇ ಸಮನೆ ಒರಲುತ್ತಲೇ ಇದ್ದಾರೆ. ಇಲ್ಲಿ ಪರಿಸರ ಮುಖ್ಯವಾದರೆ ಇವರೆಲ್ಲರೂ ನಿರುದ್ಯೋಗಿಗಳಾಗುತ್ತಾರೆ. ಲಾಭದಿಂದ ವಂಚಿತರಾಗುತ್ತಾರೆ. ರಾಜಕೀಯ ಭವಿಷ್ಯಕೂಡ ಇರೋದಿಲ್ಲ. ಈ ಆತಂಕವೇ ಇವರ ಅಬ್ಬರಕ್ಕೆ ಮೂಲ ಕಾರಣ. ಇದಕ್ಕೆ ಹಾಕಿಕೊಂಡಿರುವ ವೇಷ ಮತ್ತು ಭಾಷೆ ಎರಡೂ ಅಭಿವೃದ್ಧಿ ಎನ್ನುವ ತೊಗಲೇ ಆಗಿದೆ. ಎರಡೂ ಸಂಚಿಕೆಗಳ ಬರಹಗಳನ್ನು ಓದಿದ ಕೂಡಲೇ ಈ ಬಿಕ್ಕಟ್ಟಿನ ಗುಂಗು ಬಿಡದೆ ಜತೆಯಾಯಿತು. ನಮ್ಮ ಅಭಿವೃದ್ಧಿಯ ಅಪೇಕ್ಷೆಗಳಲ್ಲಿ ಮಾನವೀಯ ಹಪಾಹಪಿ ಇರಬೇಕಲ್ಲವೇ? ನಮ್ಮ ಇಬ್ಬಂದಿತನಕ್ಕೆ, ನಾಟಕಕ್ಕೆ ಮುಕ್ತಿ ಕಾಣಿಸಬೇಕಲ್ಲವೇ? ಹೋಲಿಕೆಯೇ ಜೀವನ ತತ್ವವಾಗಬೇಕೆ? ಸಾಮುದಾಯಿಕ ವಿವೇಕ ಅಗತ್ಯವಲ್ಲವೇ? ಸಂಕಷ್ಟದಲ್ಲಿರುವವರನ್ನು ಮೊದಲು ಮೇಲೆತ್ತುವ ತಹತಹ ಇರಲೇಬೇಕಲ್ಲವೇ? ಎಂಬ ಪ್ರಶ್ನೆಗಳ ಸವಾಲನ್ನು 'ಹೊಸ ಮನುಷ್ಯ' ಮುಂದಿಟ್ಟಿದೆ. ನಮ್ಮನ್ನು ಆಳವಾಗಿ ಯೋಚಿಸುವಂತೆ ಮಾಡಿದೆ.



**-ಕೆ. ವೆಂಕಟೇಶ**, ಲೇಖಕ, ಪತ್ರಕರ್ತ , ದೊಡ್ಡಬಳ್ಳಾಪುರ

ಪ್ರಚಲಿತ-೨

# ಲಕ್ಷದ್ವೀಪದಲ್ಲಿ 'ಅಭಿವೃದ್ಧಿ: ಅಪಾಯಗಳು ಮತ್ತು ಅನಾಹುತಗಳು'

-ಸಾದಿಯಾ ಶೆರೀನ್ ಸಿ.ಟಿ.

**ಮೋದಿ ಸರ್ಕಾರ ಗುಜರಾತ್‌ನಿಂದ ಆಯ್ದು ಕಳಿಸಿರುವ ಹೊಸ ಆಡಳಿತಾಧಿಕಾರಿ ಅರಬ್ಬೀ ಸಮುದ್ರದಲ್ಲಿನ ಕೇಂದ್ರಾಡಳಿತ ಪ್ರದೇಶ ಲಕ್ಷದ್ವೀಪವನ್ನು ತನ್ನ ಒಡೆಯರ ಯೋಜನೆಯಂತೆ ದೇಶದ ಇತರೆಲ್ಲ ಭಾಗಗಳನ್ನು 'ರಾಷ್ಟ್ರೀಯ'ಗೊಳಿಸಲು ಜಾರಿಗೆ ತಂದಿರುವ ಹೊಸ ಅಭಿವೃದ್ಧಿ ಯೋಜನೆ ಹೇಗೆ ಸ್ಥಳೀಯ ಪ್ರಾಕೃತಿಕತೆಯ ಪರಿಸರ, ಸಾಮಾಜಿಕತೆ ಮತ್ತು ಸಾಂಸ್ಕೃತಿಕತೆಗಳನ್ನು ಬುಡಮೇಲುಗೊಳಿಸಹೊರಟಿದೆ ಎಂಬುದನ್ನೂ ಈ ಪರಿಸರ ಅಧ್ಯಯನದ ಲೇಖನ ವಿವರಿಸುವ ಪ್ರಯತ್ನ ಮಾಡುತ್ತದೆ-ಸಂ.**




ಲಕ್ಷದ್ವೀಪದ ಆಡಳಿತಾಧಿಕಾರಿಯಾಗಿ ಇತ್ತೀಚೆಗೆ ನೇಮಕಗೊಂಡ ಪ್ರಫುಲ್ ಖೋಡಾ ಪಟೇಲ್ ಅವರು ಅತ್ಯಂತ ಅಸಂಬದ್ಧವಾದ, ತೊಂದರೆಗಳಿಗೆ ಕಾರಣವಾಗುವ ಕಾನೂನು ಮತ್ತು ನಿಯಮಗಳನ್ನು ಜಾರಿಗೆ ತಂದಿರುವ ಬಗ್ಗೆ ಬಹಳಷ್ಟು ಲೇಖನಗಳು ಮತ್ತು ಸರಣಿಸುದ್ದಿಗಳು ಮುಖ್ಯಧಾರೆಯ ಮಾಧ್ಯಮಗಳಲ್ಲಿ ಬಂದಿವೆ. ಪ್ರಫುಲ್ ಖೋಡಾ ಗುಜರಾತಿನಲ್ಲಿ ನರೇಂದ್ರಮೋದಿ ಸರ್ಕಾರದಲ್ಲಿ ಗೃಹಮಂತ್ರಿಗಳಾಗಿದ್ದವರು. ಅವರ ಹೊಸ ಆಡಳಿತ ಪ್ರಸ್ತಾಪಿಸಿರುವ ಕ್ರಿಯಾಯೋಜನೆ ಲಕ್ಷದ್ವೀಪದ ವಿಶಿಷ್ಟ ಸಂಸ್ಕೃತಿಯನ್ನು ನಾಶಮಾಡುವಂತಹದು ಮತ್ತು ಅಲ್ಲಿನ ಜನರ ಹಕ್ಕುಗಳನ್ನು ಮೊಟಕುಗೊಳಿಸುವಂತಹದಾದ ಕಾರಣ ಅವರು ತೆಗೆದುಕೊಂಡ ಕ್ರಮಗಳು ಹೆಚ್ಚಿನವರ ಗಮನ ಸೆಳೆದಿದೆ. ಈ ಲೇಖನಗಳಲ್ಲಿ ಮತ್ತು ವರದಿಗಳಲ್ಲಿ ಮುಂದೆ ಉಂಟಾಗಬಹುದಾದ ಸಾಂಸ್ಕೃತಿಕ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳ ಬಗ್ಗೆ ಸಾಕಷ್ಟು ವಿಶದವಾಗಿ ವಿವರಿಸಲಾಗಿದೆ. (ಎಲ್ಲ ವರದಿಗಳಲ್ಲಿ ಒಮ್ಮತ ಕಾಣುತ್ತದೆ) ಆದರೆ ಆಡಳಿತಶಾಹಿಯ ಈ ಕ್ರಿಯಾಯೋಜನೆಯ ಅನುಷ್ಠಾನದಿಂದ ಜೀವವೈವಿಧ್ಯ ಮತ್ತು ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ವರದಿ ಬಂದಿರುವುದು ಕಡಿಮೆಯೇ. ಒಂದು ಭೌಗೋಳಿಕ ಭೂಭಾಗದ ಬಗ್ಗೆ ಮಾತಾಡುವಾಗ ಪರಿಸರ ಮತ್ತು ಜೀವಪರಿಸರಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಈ ಕ್ರಮಗಳಿಂದ ಪರಿಸರ ಮತ್ತು ಜೀವವೈವಿಧ್ಯ ಕ್ಷೀಣಿಸುವುದರಿಂದ ಅಲ್ಲಿ ಜೀವಿಸುತ್ತಿರುವ ಜನರ ಬದುಕಿಗೆ ಹಾನಿ ಉಂಟಾಗುತ್ತದೆ ಮತ್ತು ಅವರನ್ನು ಅವರ ಸಾಂಸ್ಕೃತಿಕ ಬೇರಿನಿಂದ ಬೇರ್ಪಡಿಸಿದಂತಾಗುತ್ತದೆ. ಜೀವಪರಿಸರ ವಿಜ್ಞಾನದ ಆಸಕ್ತ ವಿದ್ಯಾರ್ಥಿಯಾಗಿ ನಾನು, ಈ ಲೇಖನದಲ್ಲಿ, ಈಗಾಗಲೇ ದುರ್ಬಲವಾದ ಪರಿಸರ ವ್ಯವಸ್ಥೆಯ ಮೇಲೆ ಉಂಟಾಗಬಹುದಾದ ಜೀವವೈವಿಧ್ಯ ಮತ್ತು ಪಾರಿಸರಿಕ ಅಪಾಯಗಳ ಬಗ್ಗೆ ಬೆಳಕು ಚೆಲ್ಲುವಂತಹ ಒಂದು ಪ್ರಯತ್ನ ಮಾಡುತ್ತಿದ್ದೇನೆ.

## ವೈಶಿಷ್ಟ್ಯಗಳು ಮತ್ತು ಅಪಾಯದ ಭೀತಿ

ಲಕ್ಷದ್ವೀಪವು ಅರಬ್ಬಿ ಸಮುದ್ರದಲ್ಲಿರುವ ಒಂದು ಅನನ್ಯವಾದ ಸಂಸ್ಕೃತಿ ಮತ್ತು ಜೀವವೈವಿಧ್ಯವಿರುವ ೩೬ ದ್ವೀಪಗಳ ಒಂದು ಸಣ್ಣ ದ್ವೀಪಸಮೂಹ. ೩೬ ದ್ವೀಪಗಳ ಪೈಕಿ ೧೦ ದ್ವೀಪಗಳಲ್ಲಿ ಜನವಸತಿ ಇದೆ(ಅಗಟ್ಟಿ, ಅಮಿನಿ, ಅನ್ರೋಟ್, ಬಿತ್ರ, ಚೆತ್ಲಾತ್, ಕದ್ಮತ್, ಕಲ್ಪೇನಿ, ಕವರತ್ತಿ, ಕಿಲ್ತಾನ್ ಮತ್ತು ಮಿನಿಕಾಯ್). ಬಂಗಾರಂ ದ್ವೀಪದಲ್ಲಿ ಪ್ರವಾಸಿ ತಾಣವಿದೆ. ಭಾರತದಲ್ಲಿ ಲಕ್ಷದ್ವೀಪ ಮಾತ್ರ ಹವಳದ ದ್ವೀಪಗಳಾಗಿವೆ. ಅವುಗಳಲ್ಲಿ ಬಳೆಯಾಕಾರದ ಹವಳದ ದಿಬ್ಬಗಳು, ಹವಳದ ಬಳೆಯಿಂದ ಭಾಗಶಃ ಅಥವಾ ಪೂರ್ಣವಾಗಿ ಸುತ್ತುವರಿದ ಲಗೂನ್(ಸಮುದ್ರದಿಂದ ಬೇರ್ಪಟ್ಟ ಮರಳುಪ್ರದೇಶದಲ್ಲಿನ ಜಲಭಾಗ)ಗಳೂ ಸೇರಿವೆ. ಇದರಲ್ಲಿ ಹವಳದ ಅಂಚು/ಬಳೆ ಇರುವಂತಹದು ಅಥವಾ ಇರದಿರುವಂತಹದು ಸೇರಿವೆ. ಈ ಹವಳದ ದಿಬ್ಬಗಳ ದ್ವೀಪದಲ್ಲಿ ಲಗೂನ್, ಭೂಪ್ರದೇಶ, ದಿಬ್ಬಗಳು ಮತ್ತು ತೆರೆದ ಸಾಗರ ಹೀಗೆ ೪ ವಿಭಿನ್ನ ನಿರ್ದಿಷ್ಟ ಪರಿಸರ ವ್ಯವಸ್ಥೆ(ಬಯೋಮ್)ಗಳಿವೆ. ಲಕ್ಷದ್ವೀಪದಲ್ಲಿ ಭೂಪ್ರದೇಶ ಅತ್ಯಂತ ಕಡಿಮೆ (೩೨ ಕಿ.ಮೀ.) ಇದ್ದರೂ ಲಗೂನ್ ಪ್ರದೇಶ ೪೨೦೦ ಚ.ಕಿ.ಮೀ. ಇದೆ. ಇದೇ ಈ ದ್ವೀಪಗಳ ಭೌತಿಕ ಅಸ್ತಿತ್ವದ ಆಧಾರವಾಗಿದೆ. ಈ ಲಗೂನ್, ಭೂಭಾಗ, ಪ್ರಾದೇಶಿಕವಾಗಿ ನೀರಿನಿಂದಾವೃತವಾದ ಪ್ರದೇಶ(೨೦,೦೦೦ ಚ. ಕಿಮೀ.) ಮತ್ತು ಪ್ರತ್ಯೇಕ ಆರ್ಥಿಕ ವಲಯಗಳಲ್ಲಿ, (೪೦,೦೦೦ ಚ.ಕಿಮೀ.) ಹವಳದ ದಿಬ್ಬ ಮತ್ತು ಕಡಲಹುಲ್ಲಿನ ಪ್ರಭೇದಗಳು ಮೇವು, ಸಮುದ್ರದ ಪ್ರಾಣಿಸಂಕುಲದ ಸಂತಾನಾಭಿವೃದ್ಧಿ ಮತ್ತು ವಿಶ್ರಾಂತಿಯ ತಾಣವಾಗಿ ಬಳಕೆಯಾಗುತ್ತಿವೆ. ದಿಬ್ಬಗಳನ್ನು ಅಪಾರವಾದ ಜೈವಿಕ ಉತ್ಪಾದನೆಯ ಕೇಂದ್ರಗಳೆಂದು ಪರಿಗಣಿಸಲಾಗುತ್ತಿದೆ. ಇವು ಇಂಗಾಲದ ಆಮ್ಲವನ್ನು ಕುಗ್ಗಿಸುತ್ತವಾದ್ದರಿಂದ ಇಲ್ಲಿ ಸಮೃದ್ಧ ಜೀವವೈವಿಧ್ಯವಿದೆ. ಅವು ಕ್ಯಾಲ್ಸಿಯಂ ಶೇಖರಣೆಯ ನೆಲೆಯಾಗಿವೆ ಮತ್ತು ಕಡಲತೀರದ ರಕ್ಷಣೆಗೆ ಆಧಾರವಾಗಿದೆ ಮತ್ತು ಪ್ರಾಣಿ ಹಾಗೂ ಮಾನವ ಸಮೂಹಕ್ಕೆ ನೈಸರ್ಗಿಕ ವಿಪತ್ತುಗಳ ಮುನ್ಸೂಚಕಗಳಾಗಿಯೂ ಕೆಲಸ ನಿರ್ವಹಿಸುತ್ತದೆ. ಈ ಹವಳದ ದಿಬ್ಬದ ವ್ಯವಸ್ಥೆ ಮತ್ತು ಸುತ್ತಲಿನ ಜೀವಿಸಮೂಹವು ಲಕ್ಷದ್ವೀಪದ ಜನರ ಜೀವನೋಪಾಯದ ಬೆನ್ನೆಲುಬಾಗಿದೆ. ಈಗ ಅದಕ್ಕೆ ಬಹುದೊಡ್ಡ ಅಪಾಯ ಎದುರಾಗಿದೆ.



ಜಗತ್ತಿನೆಲ್ಲೆಡೆ ಹವಳದ ದಿಬ್ಬಗಳು ಅಪಾರ ಪ್ರಮಾಣದಲ್ಲಿ ಕ್ಷೀಣಿಸುತ್ತಾ ಇವೆ. ಮಾಲಿನ್ಯ, ಜೀವಿಗಳ ಆವಾಸಸ್ಥಾನದ ವಿನಾಶ, ಮತ್ತು ಹಲವಾರು ಮಾನವನಿರ್ಮಿತ ಹಾಗೂ ನೈಸರ್ಗಿಕ ಸ್ವಾಭಾವಿಕ ಒತ್ತಡಗಳು, ರೋಗರುಜಿನಗಳು ಹಠಾತ್ತನೆ ಕಾಣಿಸಿಕೊಂಡ ಕಾರಣ ಹವಳದ ದಿಬ್ಬಗಳು ಕಡಿಮೆಯಾಗಲು ಕಾರಣವಾಗಿದೆ. ಹವಳದ ಅಳಿವಿನ ಪ್ರಮಾಣ ೧೯೯೮ (ಶೇಕಡಾ ೮೦), ೨೦೧೪ (ಶೇ.೪೪) ಮತ್ತು ೨೦೧೬ (ಶೇ.೩೧)ರಲ್ಲಿ ವರದಿಯಾಗಿದೆ. ಈ ಘಟನೆಗಳ ನಂತರವೂ ಲಕ್ಷದ್ವೀಪದ ನಡುಗಡ್ಡೆಗಳು ಮನರುಜ್ಜೀವಗೊಳ್ಳುವ ಗಮನಾರ್ಹವಾದ ಸಾಮರ್ಥ್ಯವನ್ನು ತೋರಿವೆ. ಈ ದಿಬ್ಬಗಳಲ್ಲಿರುವ ಬೇರೆ ಎಲ್ಲಾ ಜೀವಸಂಕುಲ-ಅವು ದಿಬ್ಬದಲ್ಲಿ ಹೊಂದಾಣಿಕೆ ಮಾಡುವ ಸಮುದಾಯಗಳು ಮತ್ತು ಮೂಲಸ್ವರೂಪದ ಪ್ರಭೇದಗಳು-ಮಿತಿಮೀರಿದ ಪ್ರಮಾಣದಲ್ಲಿದ್ದವು. ಈ ಅಪಾಯಗಳು ಕಡಿಮೆಯಾಗದಿದ್ದರೆ ಮುಂದಿನ ೩೦ ವರ್ಷಗಳಲ್ಲಿ ಈ ದಿಬ್ಬಗಳು ಶೇ. ೩೦ರಷ್ಟು ನಾಶವಾಗುತ್ತವೆ. ಆರೋಗ್ಯಪೂರ್ಣವಾದ ಹವಳದ ದಿಬ್ಬಗಳ ನಾಶದಿಂದ ಜನಸಮುದಾಯದ ಪ್ರಮುಖ ಆಹಾರಮೂಲಗಳು ನಿರ್ಮೂಲವಾಗಿಬಿಡುತ್ತವೆ. ಜಗತ್ತಿನಲ್ಲಿ ಮಿಲಿಯಗಟ್ಟಲೆ ಜನರ ವರಮಾನ ಮತ್ತು ಉದ್ಯೋಗಕ್ಕೆ ಕುತ್ತು ಬರುತ್ತದೆ ಮತ್ತು ಅತ್ಯದ್ಭುತವಾದ ಮತ್ತು ಸುಂದರವಾದ ಸಾಗರದ ಜೀವಪ್ರಭೇದಗಳ ಅಳಿವಿಗೆ ಕಾರಣವಾಗುತ್ತದೆ. ಕೆಲವು ಜೀವಂತ ಹವಳಗಳು, ಬೃಹತ್ ಸಮುದ್ರ ನಕ್ಷತ್ರ(ಅಕಾಂತಸ್ಟರ್ ಪ್ಲಾನ್ಸಿ)ಗಳಿಂದ ಬಾಧೆಗೊಳಗಾಗಿವೆ. ಲಕ್ಷದ್ವೀಪದ **ಜೀವಂತ ಹವಳಗಳ ಸಂಖ್ಯೆ ೨೦೦೯ರಲ್ಲಿ ಶೇ.೧೭.೫ ರಿಂದ ಶೇ.೪೪.೩ರ ನಡುವಿನ ಪರಿಮಿತಿಯಲ್ಲೇ ಇತ್ತು. ಜೀವಂತ ಹವಳಗಳ ಪ್ರಮಾಣ ಸುಹೇಲಿ ದ್ವೀಪದಲ್ಲಿ** ಶೇಕಡಾವಾರು ಅತ್ಯಂತ ಕಡಿಮೆ ಮತ್ತು ಬಿತ್ರಾ ದ್ವೀಪದಲ್ಲಿ ಅತ್ಯಂತ ಹೆಚ್ಚು ಎಂದು ದಾಖಲಾಗಿದೆ.

ಹಲವಾರು ಸಂಶೋಧಕರು ಲಕ್ಷದ್ವೀಪದ ಜೀವವೈವಿಧ್ಯವನ್ನು, ೧೪೮ ಹವಳದ ಪ್ರಭೇದಗಳು; ೬೦೧ ಪ್ರಭೇದಗಳ ೧೨೬ ಮೀನಿನ ಕುಟುಂಬಗಳು; ೬೮ ಕಠಿಣಚರ್ಮಿಗಳು(ಏಡಿ, ಸಿಗಡಿ ಇತ್ಯಾದಿ); ೨೨೭ ಮೃದ್ವಂಗಿ ಪ್ರಭೇದಗಳು; ೯೧ ಸ್ಪಾಂಜುಗಳ ಪ್ರಭೇದಗಳು; ೨ ಮ್ಯಾನ್‌ಗ್ರೋವ್ ಪ್ರಭೇದಗಳು, ೧೧೪ ಕಡಲಕಳೆ ಪ್ರಭೇದಗಳು, ೭೮ ಕಂಟಕಚರ್ಮಿ ಪ್ರಭೇದಗಳು, ೬ ಕಡಲಹುಲ್ಲಿನ ಪ್ರಭೇದಗಳು, ೪ ಕಡಲಾಮೆ ಪ್ರಭೇದಗಳು, ೧೦೧ ಪ್ರಭೇದದ ಪಕ್ಷಿಗಳು, ೧೨ ಡಾಲ್ಫಿನ್, ತಿಮಿಂಗಿಲಗಳ ಪ್ರಭೇದಗಳು, ೨೪೮ ಸಸ್ಯಪ್ರಭೇದಗಳು ಇತ್ಯಾದಿ ಎಂದು ಅಂದಾಜು ಮಾಡಿರುತ್ತಾರೆ. ಕವರತ್ತಿಯ ವಾಯುವ್ಯಕ್ಕೆ ೨೪ ಕಿ.ಮೀ. ದೂರದಲ್ಲಿ ಮರಳದಿಣ್ಣೆಯಲ್ಲಿನ ಕೇವಲ ೧.೨೧ ಹೆಕ್ಟೇರ್ ಪ್ರದೇಶದಲ್ಲಿರುವ ಪಿಟ್ಟಿ ದ್ವೀಪ ಪಕ್ಷಿಗಳ ದ್ವೀಪವಾಗಿದೆ ಮತ್ತು ಇದನ್ನು ಪಕ್ಷಿಧಾಮವೆಂದು ಘೋಷಿಸಲಾಗಿದೆ. ೪ ಪ್ರಭೇದದ ಕಡಲಕಾಗೆಗಳ ಸಂತಾನಾಭಿವೃದ್ಧಿಯ ತಾಣವಾಗಿದೆ ಮತ್ತು ಭಾರತದ ಪ್ರಾದೇಶಿಕ ಕ್ಷೇತ್ರಗಳಲ್ಲಿ ಸಂತಾನಾಭಿವೃದ್ಧಿಗಾಗಿ ವಲಸೆ ಬರುವ ಹಕ್ಕಿಗಳ ತಾಣವೆಂದು-ಯಾಕೆಂದರೆ ಅಂತಹ ಸಂತಾನಾಭಿವೃದ್ಧಿ ತಾಣಗಳು ಬಹಳ ಅಪರೂಪವಾದ್ದರಿಂದ- ಅತ್ಯಂತ ಮಹತ್ವ ಪಡೆದಿದೆ. ಈ ಜೀವಿಗಳಲ್ಲಿ ಹೆಚ್ಚಿನವು ಜೀವಿಪರಿಸರದ ಸಮತೋಲತೆಯ ಜಾಲದಲ್ಲಿನ ಅನನ್ಯ ಕೊಂಡಿಗಳಾಗಿವೆ. ಕಡಲಹುಲ್ಲುಗಳು ಕಡಲಕೊರೆತವನ್ನು ತಡೆಯುವುದು ಮತ್ತು ಕಡಲತೀರದ ಕೆಸರುಮಡ್ಡಿಯ ಚಲನೆಯನ್ನು ತಡೆಯುವುವಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಇನ್ನೊಂದು ಕಡೆ, ಲಕ್ಷದ್ವೀಪದ ಸಮುದ್ರಸೌತೆಗಳು ಲಕ್ಷದ್ವೀಪದ ನಡುಗಡ್ಡೆಗಳ ಅತ್ಯಂತ ಅಮೂಲ್ಯವಾದ ಪ್ರಭೇದಗಳಲ್ಲೊಂದಾಗಿದ್ದು ಪೌಷ್ಟಿಕಾಂಶದ ಆಗರವಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಷೆಡ್ಯೂಲ್ ೧ ರಂತೆ ಹುಲಿ ಮತ್ತು ಸಿಂಹಕ್ಕೆ ಇರುವಂತಹ ಸ್ಥಾನವೇ ಈ ಸಮುದ್ರಸೌತೆಗೆ ಇದೆ. ಇದಕ್ಕೆ ಸಂಬಂಧಿಸಿದಂತೆ ಅಪರಾಧವೆಸಗಿದರೆ ತೀವ್ರ ಸ್ವರೂಪದ ದಂಡನೆಗಳಿಗೆ ಒಳಗಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಲಕ್ಷದ್ವೀಪದ ಆಡಳಿತ, ೨೩೯ ಚದರ ಕಿ.ಮೀ. ಪ್ರದೇಶದಲ್ಲಿ ಹರಡಿಕೊಂಡಿರುವ ಅಳಿವಿನ ಅಂಚಿನಲ್ಲಿರುವ ಸಮುದ್ರಸೌತೆಗಳಿರುವ ಪ್ರದೇಶವನ್ನು ಜಗತ್ತಿನ ಮೊದಲ ಸಂರಕ್ಷಿತ ಪ್ರದೇಶ ಎಂದು ಘೋಷಿಸಿದೆ. ಆದರೇನು,

ಸಮುದ್ರಸೌತೆಗಳು, ನೀಲಿ ತಿಮಿಂಗಿಲಗಳು, ಡಾಲ್ಫಿನ್‌ಗಳು ಮತ್ತು ಆಮೆಗಳು ಷೆಡ್ಯೂಲ್ ೧ ರಂತೆ ಸಂರಕ್ಷಣೆಯಲ್ಲಿದ್ದೂ ಹೆಚ್ಚು ಅಪಾಯಕ್ಕೆ ಸಿಕ್ಕಿವೆ ಮತ್ತು ಈ ದುರ್ಬಲಗೊಂಡ ಹವಳದ ಪರಿಸರ ವ್ಯವಸ್ಥೆ ಪ್ರಾಕೃತಿಕವಾದ ಮತ್ತು ಮಾನವಹಸ್ತಕ್ಷೇಪದ ಕಾರಣಗಳಿಗಾಗಿ ಅವನತಿಯತ್ತ ಸಾಗುತ್ತಿದೆ.

ಪ್ರವಾಸೋದ್ಯಮವನ್ನು ವ್ಯಾಪಕವಾಗಿ ಅಭಿವೃದ್ಧಿಪಡಿಸುವ ಈಗಿನ ಯೋಜನೆಗಳೇನೇ ಇರಲಿ, ಇಲ್ಲಿನ ಕೆಲವು ದ್ವೀಪಗಳಲ್ಲಿನ ಸಹಜ ಜೀವವಾಸಸ್ಥಾನಗಳನ್ನು ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಉದ್ದೇಶಗಳಿಗಾಗಿ ಉಳಿಸಿ ರಕ್ಷಿಸಲು ಸಂರಕ್ಷಣಾ ಕ್ರಮಗಳನ್ನು ತುರ್ತಾಗಿ ಕಾರ್ಯಗತಗೊಳಿಸುವುದು ಅನಿವಾರ್ಯವಾಗಿದೆ. ಹೊಸ ಆಡಳಿತಾಧಿಕಾರಿ ಈ ಯೋಜನೆಗಳು ದ್ವೀಪದ ಉಜ್ವಲ ಭವಿಷ್ಯಕ್ಕಾಗಿ "ಮಾಲ್ಡೀವ್ಸ್ ಮಾದರಿ ಅಭಿವೃದ್ಧಿಗಾಗಿ" ರೂಪಿಸಿರುವಂತಹದು ಎಂದು ಹೇಳುತ್ತಿದ್ದಾರೆ. ಆದರೆ ಇವು ಸ್ಥಳೀಯ ಜನರ ಇಚ್ಛೆಗೆ ಮತ್ತು ಲಕ್ಷದ್ವೀಪದ ಹಿಂದಿನ ಕ್ರಿಯಾ ಯೋಜನೆಗಳಿಗೆ ವಿರುದ್ಧವಾಗಿವೆ. ಹವಳದ ದ್ವೀಪಗಳು ಮತ್ತು ಲಗೂನುಗಳು, ಅವನತಿಯ ಭೀತಿಯಲ್ಲಿರುವ ಮತ್ತು ಅಳಿವಿನಂಚಿನಲ್ಲಿರುವ ವೈವಿಧ್ಯಮಯ ಪ್ರಭೇದಗಳ ಆಶ್ರಯತಾಣವಾಗಿವೆ. ಇವು ಮುಂದೆ ಬರುವ ಯೋಜನೆಗಳಿಂದ ಹೆಚ್ಚು ಪ್ರವಾಸಿಗರನ್ನು ಸೆಳೆಯುವಂತಹ ತಾಣಗಳು. ಆದರೆ ಈಗಾಗಲೇ ದುರ್ಬಲಗೊಂಡ ಪರಿಸರ ವ್ಯವಸ್ಥೆಯ ಮೇಲಿನ ಪಾರಿಸರಿಕ ಪರಿಣಾಮಗಳೇನೆಂಬುದನ್ನು ಸುಲಭವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಲಕ್ಷದ್ವೀಪವು ಈಗಾಗಲೇ ಹಲವಾರು ಮಾನವಜನ್ಯ ಅಪಾಯಗಳಿಂದ ಅಂದರೆ ಹಡಗುಗಳ ಪ್ರವೇಶದ ಜಾಗಕ್ಕಾಗಿ ದಿಬ್ಬಗಳಲ್ಲಿ ಹೂಳೆತ್ತುವುದರಿಂದ, ತೊಂದರೆಗೀಡಾಗಿದೆ. ಕಟ್ಟಡ ನಿರ್ಮಾಣದ ಚಟುವಟಿಕೆಗಳಿಗಾಗಿ ಹವಳ ದಿಬ್ಬಗಳ ಒತ್ತುವರಿ, ತೀರದ ಹರಳುಕಲ್ಲುಗಳನ್ನು ಸಂಗ್ರಹಿಸುವುದರಿಂದ, ಮೀನು ಬೇಟೆಗಾಗಿ ಭಾರಿ ಬಲೆಗಳನ್ನು ಎಳೆಯಲು ಜನ ಸಮುದ್ರವನ್ನು ಪ್ರವೇಶಿಸುವುದರಿಂದ, ಕೆಲ ಸಂಪನ್ಮೂಲಗಳ ಅತಿಬಳಕೆಯಿಂದುಂಟಾಗುವ ತೈಲ ಸೋರಿಕೆ, ಕೊಳಚೆನೀರು, ಕೃತಕ ಉತ್ಪನ್ನಗಳಾದ ರಬ್ಬರ್, ಪ್ಲಾಸ್ಟಿಕ್, ಸಿಮೆಂಟ್, ಭಾರವಾದ ಲೋಹದ ಮಾಲಿನ್ಯ ಇವೆಲ್ಲಾ ಹವಳಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

ರೋಹನ್ ಆರ್ಥರ್ ಮತ್ತವರ ಜೊತೆಗಾರರ ಸಂಶೋಧನೆಯಂತೆ ಹವಳದ ದಿಬ್ಬಗಳು ಸಂಚಯವಾಗುವುದಕ್ಕಿಂತ ಹೆಚ್ಚು ವೇಗವಾಗಿ ಸವೆತಕ್ಕೊಳಗಾಗುತ್ತಿವೆ ಮತ್ತು ಇದು ಏನನ್ನು ತೋರಿಸುತ್ತಿದೆಯೆಂದರೆ ಮುಂದಿನ ದಶಕಗಳಲ್ಲಿ ಹೆಚ್ಚಿನ ದ್ವೀಪಗಳಲ್ಲಿ ಭೂಸವೆತ, ಸಿಹಿನೀರಿನ ಸಂಗ್ರಹದಲ್ಲಿ ಕೊರತೆ, ಪ್ರತಿಯೊಂದು ಚಂಡಮಾರುತ ಅಥವಾ ಹವಾಮಾನ ವೈಪರೀತ್ಯಗಳ ಪರಿಣಾಮಗಳಿಂದ ಹೆಚ್ಚಿನ ಹಾನಿಯುನ್ನು ಅನುಭವಿಸಬೇಕಾಗುತ್ತದೆ ಎಂಬುದು. ೨೦೧೨ರ ಲಕ್ಷದ್ವೀಪದ ಕ್ರಿಯಾ ಯೋಜನೆ ಹವಾಮಾನ ಬದಲಾವಣೆಯ ವಾಸ್ತವವನ್ನು ಗುರುತಿಸಿ ವ್ಯಾಪಕವಾದ ಪ್ರವಾಸೋದ್ಯಮದ ಪರಿಣಾಮಗಳನ್ನು, ಅಭಿವೃದ್ಧಿ ಯೋಜನೆಗಳು ಮತ್ತು ಇತರ ಪ್ರಯೋಜನಕಾರಿ ಯೋಜನೆಗಳ ಪಟ್ಟಿ ಮಾಡಿತ್ತು ಮತ್ತು ಈ ಯೋಜನೆಗಳ ನಿರ್ವಹಣೆಗಾಗಿ ಸೂಚಿಸಿದ್ದ ಮಾರ್ಗೋಪಾಯಗಳ ಮಿತಿಗಳೂ ಆಡಳಿತಕ್ಕೆ ಸ್ಪಷ್ಟವಿತ್ತು. ಆದರೆ ಈಗಿನ ಲಕ್ಷದ್ವೀಪ ಅಭಿವೃದ್ಧಿ ನಿಯಮ ೨೦೨೧, ಜೀವ ಪರಿಸರ ಮತ್ತು ಹವಾಮಾನ ಬದಲಾವಣೆಯ ಕಾಳಜಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದರೆ ಅಭಿವೃದ್ಧಿಗಾಗಿ ಮೂಲಸೌಕರ್ಯಗಳು, ಉತ್ತಮ ಆಡಳಿತ ಮತ್ತು ಸುಭದ್ರ ಯೋಜನೆಗಳನ್ನು ರೂಪಿಸುವುದಕ್ಕೆ ಹೆಚ್ಚಿನ ಗಮನ ನೀಡಿದೆ. ಪ್ರಸ್ತಾಪಿತ ನಿಯಮ ಭೂಮಿ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಮತ್ತು ಆ ಭೂಮಿಯಲ್ಲಿ ಮುಂದೆ ಕೈಗೊಳ್ಳಬಹುದಾದ ಯೋಜನೆಗಳನ್ನು ನಿರ್ಧರಿಸುವ ತೀರ್ಮಾನಗಳನ್ನು ಕೇಂದ್ರೀಕರಿಸುವ ಒಲವು ತೋರಿದೆ. ಈ ಹೊಸ ನಿಯಮಗಳು, ನ್ಯಾಯಮೂರ್ತಿ ರವೀಂದ್ರನ್ ಸಮಿತಿಯ(೨೦೧೪)ಯ ಅಸಂದಿಗ್ಧವಾಗಿದ್ದ ಹೆಚ್ಚಿನ ಎಲ್ಲಾ ಶಿಫಾರಸ್ಸುಗಳನ್ನು ದುರ್ಬಲಗೊಳಿಸಿವೆ. ಈ ಸಮಿತಿಯನ್ನು, ದ್ವೀಪದ ಸಮಗ್ರ ನಿರ್ವಹಣಾ ಯೋಜನೆಗಾಗಿ ರೂಪಿಸಿದ ನ್ಯಾಶನಲ್ ಅರ್ಥ್ ಸೈನ್ಸ್ ಸ್ಟಡೀಸ್(NCESS)ನಿಂದ ಸ್ವೀಕೃತವಾದ ದ್ವೀಪದ ಸಮಗ್ರ ನಿರ್ವಹಣಾ ಯೋಜನೆಯ ಕರಡನ್ನು ಮೌಲ್ಯಮಾಪನ ಮಾಡಲು ನೇಮಿಸಲಾಗಿತ್ತು. ಈ ವರದಿ ಅಭಿವೃದ್ಧಿ ಯೋಜನೆಗಳನ್ನು ಗಮನದಲ್ಲಿರಿಸಿಕೊಂಡೇ, ಜೀವಿಪರಿಸರದ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಹವಳಗಳು, ಕಡಲಹುಲ್ಲು ಮತ್ತಿತರ ಪರಿಸರ ವ್ಯವಸ್ಥೆಯನ್ನು ಮಾನವಜನ್ಯ ಚಟುವಟಿಕೆಗಳಿಂದ ಸಂರಕ್ಷಿಸುವ ಅಗತ್ಯದ ಬಗ್ಗೆ ಎಚ್ಚರಿಕೆ ನೀಡಿತ್ತು. ಆದರೆ ಲಕ್ಷದ್ವೀಪದಲ್ಲಿ ಹೊಸ ಯೋಜನೆಗಳಿಗಾಗಿ ನೀತಿ ಆಯೋಗದ ಇತ್ತೀಚಿನ ಕ್ರಮಗಳು ಈ ಶಿಫಾರಸ್ಸುಗಳನ್ನು ದುರ್ಬಲಗೊಳಿಸಿವೆ.

ಅಭಿವೃದ್ಧಿ ಯೋಜನೆಗಳು ಮತ್ತು ಪ್ರವಾಸೋದ್ಯಮಕ್ಕಾಗಿ ಹೊಸ ಯೋಜನೆಗಳು, ಈ ಯೋಜನೆಯ ಪಾಲುದಾರರಿಗೆ ಮತ್ತು ಸ್ಥಳೀಯರಿಗೆ ಬಹಳ ಲಾಭಕರವಾದುದೆಂದು ಬಿಂಬಿಸಲಾಗುತ್ತಿದೆ. ಆದರೆ ಈ 'ಸಮಗ್ರ ದ್ವೀಪ ಅಭಿವೃದ್ಧಿ' ಎಂದು ಹೇಳಲಾಗುವ ಯೋಜನೆಗಳಿಂದ ಲಕ್ಷದ್ವೀಪ ಮತ್ತು ಅಲ್ಲಿಯ ಜನರಿಗೆ ಅಪಾಯಗಳು ಕಾದಿವೆ ಎಂಬುದು ಬಹಳ ಸ್ಪಷ್ಟವಾಗಿದೆ ಮತ್ತು ಪ್ರಭಾವೀ ಕಾರ್ಪೋರೇಟ್ ಉದ್ಯಮಿಗಳು ಲಕ್ಷದ್ವೀಪದಲ್ಲಿ ಕಾಲೂರಿ ತಮ್ಮ ಸಂಸ್ಕೃತಿ ಮತ್ತು ಜೀವನೋಪಾಯದ ಮೂಲಗಳನ್ನು ಹಾಳು ಮಾಡುತ್ತಾರೆಂದು ಜನರು ಭಯಭೀತರಾಗಿದ್ದಾರೆ. ದ್ವೀಪವಾಸಿಗಳು ತಮ್ಮ ದಿನನಿತ್ಯದ ಬಳಕೆಗೆ ಲಗೂನ್‌ಗಳಲ್ಲಿ ಮೀನುಗಾರಿಕೆ ಮಾಡುತ್ತಾರೆ. ಲಗೂನ್ ಮೀನು ಲಕ್ಷದ್ವೀಪದ ಹೆಸರಾಂತ ಸುಸ್ಥಿರ ಮತ್ತು ಸ್ಥಳೀಯ ಟ್ಯೂನಾ ಮೀನುಗಾರಿಕೆಯ ಬೆನ್ನೆಲುಬೂ ಆಗಿದೆ. ಕಡಲತೀರವನ್ನು ಇಲ್ಲಿನ ಜನರು ಬಹಳ ಹೆಚ್ಚು ಉಪಯೋಗಿಸುತ್ತಿದ್ದಾರೆ: ಹಿಡಿದ ಮೀನುಗಳನ್ನು ಇಲ್ಲಿಯೇ ಸಂಸ್ಕರಿಸಲಾಗುತ್ತದೆ ಮತ್ತು ಮರಳಿನಲ್ಲಿ ಬಿಸಿಲಿನಲ್ಲಿ ಒಣಗಿಸಲಾಗುತ್ತದೆ. ಆದರೆ ಹೊಸ ನಿಯಮಗಳು ಆಡಳಿತಾಧಿಕಾರಿಗೆ ಈ ದ್ವೀಪದ ಭೂಪ್ರದೇಶ ಮತ್ತು ಜನರ ಮೇಲೆ ಪೂರ್ಣ ಪ್ರಮಾಣದ ಮತ್ತು ಪ್ರಶ್ನಾತೀತ ಅಧಿಕಾರ ನೀಡಿ ದ್ವೀಪದ ಯಾವುದೇ ಭಾಗವನ್ನು 'ಅಭಿವೃದ್ಧಿ ಚಟುವಟಿಕೆಗಳು' ಎಂದು ಹೇಳಿ ನಿಯಂತ್ರಿಸಲು ಅವಕಾಶ ನೀಡಿದೆ. ಇದರಿಂದಾಗಿ ಜೀವಪರಿಸರಕ್ಕೆ ಹಾನಿಯುಂಟುಮಾಡುವ ಗಣಿಗಾರಿಕೆ ಮತ್ತು ಭೂಮಿಯ ಹಕ್ಕನ್ನು ಹೊಂದಿದ ದ್ವೀಪವಾಸಿಗಳನ್ನು–ಅವರಲ್ಲಿ ಶೇ. ೯೫ಕ್ಕಿಂತ ಹೆಚ್ಚಿನವರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಅವರನ್ನು ಸುಲಭವಾಗಿ ಜಮೀನಿನಿಂದ ದೂರಮಾಡಲು ಅವಕಾಶವಿಲ್ಲವಾದರೂ–ಬಲವಂತವಾಗಿ ಒಕ್ಕಲೆಬ್ಬಿಸುವುದು ಅಥವಾ ಸ್ಥಳಾಂತರಿಸುವುದು ಸಾಧ್ಯವಾಗಿದೆ. ಇಲ್ಲಿ ಪಂಚಾಯತಿಗಳನ್ನು ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಗಳನ್ನು ಲೆಕ್ಕಕ್ಕಿಲ್ಲದಂತೆ ಮಾಡಲಾಗಿದೆ. ಆಶ್ಚರ್ಯವೆಂದರೆ ಈ ನಿಯಮಗಳು ಆಡಳಿತಾಧಿಕಾರಿ ತೆಗೆದುಕೊಂಡ ಕ್ರಮಗಳನ್ನು ಮೇಲ್ಮನವಿ ಮತ್ತು ನ್ಯಾಯಾಲಯದ ಪರಿಶೀಲನೆಯಿಂದ ಹೊರತಾಗಿಸಿದೆ.

ಈ ದ್ವೀಪಗಳಲ್ಲಿ ಪ್ರವಾಸೋದ್ಯಮ ಸೌಲಭ್ಯಗಳನ್ನು ಸುಧಾರಿಸಲು ನರೇಂದ್ರ ಮೋದಿ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದೆ. ಜನವರಿ ೨೦೨೦ರಲ್ಲಿ ಭಾರತದ ಗೃಹಮಂತ್ರಿ ಅಮಿತ್ ಶಾ ದ್ವೀಪ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ನಡೆಸಿ ದ್ವೀಪಗಳ ಅಭಿವೃದ್ಧಿ ಕುರಿತ ಪ್ರಗತಿ ಸಮೀಕ್ಷೆಯನ್ನು ಮಾಡಿದ್ದರು. ನೀತಿ ಆಯೋಗದ ಯೋಜನೆಗಳಲ್ಲಿ, ಪ್ರಪ್ರಥಮವಾಗಿ ಹಿಂದೂ ಮಹಾಸಾಗರದ ದ್ವೀಪಗಳಲ್ಲಿ ಜಲಕುಟೀರದ ಯೋಜನೆಗಳು, ಸ್ಕೂಬಾ ಡೈವಿಂಗ್ ಮತ್ತು ಇತರ ಜಲಕ್ರೀಡೆಗಳು, ಪರಿಸರ ಪ್ರವಾಸೋದ್ಯಮ, ಸಮುದ್ರ ವಿಮಾನ(ಸೀಪ್ಲೇನ್) ಚಾಲನೆಗೆ ಉತ್ತೇಜನ ನೀಡುವುದು, ನಡುಗಡ್ಡೆಗಳಲ್ಲಿ ಕ್ರೂಸ್ ಪ್ರವಾಸೋದ್ಯಮ ಇತ್ಯಾದಿ ಸೇರಿವೆ. ಈ ಯೋಜನೆಗಳೆಲ್ಲಾ ಪುಟ್ಟ ದ್ವೀಪಗಳು ತಡೆದುಕೊಳ್ಳಬಹುದಾದ ಸಾಮರ್ಥ್ಯವನ್ನು ಮೀರಿದ್ದು. ಹವಾಮಾನ ಬದಲಾವಣೆ ಕುರಿತ ಲಕ್ಷದ್ವೀಪದ ಕ್ರಿಯಾಯೋಜನೆ (೨೦೧೨)ಯಲ್ಲಿ ಸಿಹಿನೀರಿನ ಅಭಾವ, ಅಂತರ್ಜಲ ಸಂಪನ್ಮೂಲದ ಮೇಲಿನ ಪರಿಣಾಮಗಳಿಂದ ಉಂಟಾಗುವ ಭವಿಷ್ಯದ ಒತ್ತಡಗಳನ್ನು ಊಹಿಸಿ ಹೇಳಲಾಗಿದೆ. ಇಲ್ಲಿ ಹವಾಮಾನ ತನ್ನ ಮೊದಲಿನ ಸ್ಥಿತಿಗೆ ಪುಟಿದೇಳುವಂತಹ ಯೋಜನೆಗಳು ಬೇಕಾಗಿವೆಯೇ ಹೊರತು ಈಗ ಪ್ರಸ್ತಾವನೆಯಲ್ಲಿರುವ ಯೋಜನೆಗಳಲ್ಲ. ಈ ಬಗೆಗಿನ ಅಂಕಿ ಅಂಶಗಳಲ್ಲಿನ ವ್ಯತ್ಯಾಸವನ್ನು ಪರಿಶೀಲಿಸಿ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ವೈಜ್ಞಾನಿಕ ಜ್ಞಾನದ ಕೊರತೆ ಮತ್ತು ಅಂಕಿಅಂಶಗಳ ವ್ಯತ್ಯಾಸಗಳು ಸಹ ತಪ್ಪು ಯೋಜನೆಗಳನ್ನು ರೂಪಿಸುವುದಕ್ಕೆ ಕಾರಣವಾಗುತ್ತದೆ.

## ಮಾಲ್ಡೀವ್ಸ್ ಮಾದರಿ– ದುರಂತದ ಸೂಚಕ

ಮಾಲ್ಡೀವ್ಸ್‌ನ ಭೌತಿಕ ಮತ್ತು ಭೌಗೋಳಿಕ ಗುಣಲಕ್ಷಣಗಳು ಲಕ್ಷದ್ವೀಪದಲ್ಲಿರುವ ಹವಳದ ದ್ವೀಪಗಳ ರೀತಿಯಲ್ಲಿಯೇ ಇವೆ. ನೀರೊಳಗಿನ ದಿಬ್ಬಗಳ ಜಗತ್ತಿನ ಸೌಂದರ್ಯ, ಲಗೂನುಗಳಲ್ಲಿ ಶುದ್ಧ ನೀರು, ಬಿಳಿಯ ಮತ್ತು ನಿರ್ಮಲ ಮರಳ ಕಡಲತೀರಗಳು, ದ್ವೀಪದ ಸಮೃದ್ಧ ಸಸ್ಯಸಂಪತ್ತು ಮತ್ತು ಹಿತವಾದ ಉಷ್ಣವಲಯದ ಹವಾಮಾನ ಇವೆಲ್ಲಾ ಪ್ರವಾಸಿಗರನ್ನು ಆಕರ್ಷಿಸುವಂತಹ ಸ್ವರ್ಗಸಮಾನ ಸಂಗತಿಗಳೇ. ನೀತಿ ಆಯೋಗದ ಪ್ರಸ್ತಾವನೆಯಂತೆ ಮಾಲ್ಡೀವ್ಸ್‌ನಲ್ಲಿರುವಂತೆ ಮಿನಿಕಾಯ್, ಸುಹೇಲಿ ಮತ್ತು ಕದ್ಮತ್ ದ್ವೀಪಗಳಲ್ಲಿ ಜಲಕುಟೀರಗಳನ್ನು ನಿರ್ಮಿಸುವ ಯೋಜನೆಗಳಿವೆ ಮತ್ತು ಈಗಾಗಲೇ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಆರಕ್ಕಿಂತ ಹೆಚ್ಚು ಪರಿಸರ ಪ್ರವಾಸೋದ್ಯಮ ಯೋಜನೆಗಳಿಗಾಗಿ ಬಿಡ್ ಕರೆಯಲಾಗಿದೆ. ಮಾಲ್ಡೀವ್ಸ್‌ನಂತೆಯೇ ಪ್ರಾಕೃತ್ರಿಕ ಸೌಂದರ್ಯವಿರುವ ಲಕ್ಷದ್ವೀಪದಲ್ಲಿನ ಪ್ರವಾಸೋದ್ಯಮಕ್ಕೆ ಹಲವಾರು ಮಿತಿಗಳಿವೆ. ಮಾಲ್ಡೀವ್ಸ್‌ನಲ್ಲಿ ೧೧೯೨ ದ್ವೀಪಗಳಿವೆ. ಅವುಗಳಲ್ಲಿ ಹೆಚ್ಚಿನವು ಜನವಸತಿ ಇಲ್ಲದವು. ಮಾಲ್ಡೀವ್ಸ್‌ನ ಜನಸಂಖ್ಯೆ ಲಕ್ಷದ್ವೀಪದ ಸುಮಾರು ಅರ್ಧದಷ್ಟಿದೆ. ಅದಕ್ಕಿಂತಲೂ ಹೆಚ್ಚಾಗಿ ಪ್ರವಾಸೋದ್ಯಮದ ಈ ಮಾದರಿ ಕೇವಲ ವ್ಯಾಪಾರದ ಹಿತಾಸಕ್ತಿಗಳಿಗಾಗಿ ಯೋಜಿಸಿರುವಂತಹದು ಮತ್ತು ಅದರ ಸ್ವರೂಪದಿಂದಲೇ ಸ್ಥಳೀಯರ ಪಾಲುದಾರಿಕೆಗೆ ಹೊರತಾದುದು.

ಮಾಲ್ಡೀವ್ಸ್ ಮಾದರಿಯ ಪ್ರವಾಸೋದ್ಯಮದ ಇನ್ನೊಂದು ಮುಖವೆಂದರೆ ಅದು ಬಾಹ್ಯ ಸೌಂದರ್ಯ ಮತ್ತು ನೋಟವನ್ನು ಮಾತ್ರ ಪರಿಗಣಿಸುತ್ತದೆ. ಆದರೆ ಜೀವವೈವಿಧ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ದ್ವೀಪದ ಪರಿಸರ ವ್ಯವಸ್ಥೆಯೂ ಭೌತಿಕ ವಾತಾವರಣ ಮತ್ತು ಮಾನವಜನ್ಯ ಅಪಾಯಗಳ ವಿಷಯಗಳಲ್ಲಿ ಬಹಳ ವಿಶಿಷ್ಟವಾಗಿದೆ. ದೀಪಗಳು ಪ್ರತ್ಯೇಕವಾಗಿಯೇ ಇರುವುದರಿಂದ ಅಪಾರ ಪ್ರಮಾಣದಲ್ಲಿ ಸ್ಥಳೀಯ ವಿಶಿಷ್ಟತೆಗೆ ಮತ್ತು ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೂ ಪ್ರೋತ್ಸಾಹದಾಯಕವಾಗಿದೆ. ಕಳೆದ

(೭ನೇ ಪುಟಕ್ಕೆ

ಪ್ರಚಲಿತ-೩

# ಮದ್ಯ ನಿಷೇಧ : ಬಿಹಾರದ ಸಾಧನೆಯ ಹಿಂದೆ – ಮುಂದೆ

–ಅನಿಲ್ ಹೆಗ್ಡೆ

**ಹಲವು ಕಡೆಗಳ, ಹಲವು ಸ್ತರಗಳ ಮತ್ತು ಹಲವು ರೀತಿಗಳ ವಿರೋಧ, ಟೀಕೆ-ಟಿಪ್ಪಣಿಗಳ ನಡುವೆಯೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ವಿಚಲಿತರಾಗದೆ ಕಳೆದ ಐದು ವರ್ಷಗಳಲ್ಲಿ ತಮ್ಮ ರಾಜ್ಯದಲ್ಲಿ ಪಾನ ನಿಷೇಧವನ್ನು ಯಾವುದೇ ರೀತಿಯಲ್ಲಿ ಸಡಿಲಿಸದೆ ತಮ್ಮ ಸಂಕಲ್ಪಕ್ಕೆ ಬದ್ಧರಾಗಿ ಉಳಿದಿರುವುದು, ಈ ಸಂಬಂಧ ಇತರ ರಾಜ್ಯಗಳ ನಡೆಗಳ ಹಿನ್ನೆಲೆಯಲ್ಲಿ ಮತ್ತು ಇಂದಿನ ಜಾಗತೀಕರಣದ 'ಸುಧಾರಣೆ'ಗಳ ಕಾಲದಲ್ಲಿ ಒಂದು ಅನನ್ಯ ಸಾಧನೆಯೇ. ಸ್ವಾತಂತ್ರ್ಯೋತ್ಸವ ಸಂಚಿಕೆಯ ಈ ವಿಶೇಷ ಲೇಖನ ಇದರ ಹಿನ್ನೆಲೆ-ಮುನ್ನೆಲೆಗಳನ್ನು ಪರಿಚಯಿಸುತ್ತದೆ-ಸಂ.**



ಮದ್ಯನಿಷೇಧ ಜಾರಿಗೆ ಒತ್ತಾಯಿಸಿ, ತಮ್ಮ ಸಂಸಾರಗಳ ಮೇಲೆ ಆಗುತ್ತಿರುವ ದುಷ್ಪರಿಣಾಮಗಳಿಂದ ತಮಗೆ ಮುಕ್ತಿ ನೀಡುವಂತೆ ರಾಜ್ಯ ಸರಕಾರಗಳ ಮುಂದೆ ಸಾವಿರಾರು ಮಹಿಳಾ ಸಂಘಟನೆಗಳು ದೇಶದಾದ್ಯಂತ ಹೋರಾಟ ನಡೆಸುವುದು ಮತ್ತು ಸರ್ಕಾರಕ್ಕೆ ದುಂಬಾಲು ಬೀಳುವುದು ಇತ್ಯಾದಿಗಳನ್ನು ನಾವು ನೋಡುತ್ತಿದ್ದೇವೆ.

ಅನೇಕ ರಾಜಕೀಯ ಪಕ್ಷಗಳ ಸಂವಿಧಾನದ ನೀತಿ ನಿಯಮಾವಳಿಗಳ ಪ್ರಕಾರ, ಪಕ್ಷದ ಸದಸ್ಯರು ಶುದ್ಧ ಖಾದಿವಸ್ತ್ರ ಧರಿಸಬೇಕು; ಅಲ್ಲದೆ ಮದ್ಯನಿಷೇಧಕ್ಕಾಗಿ ಕೆಲಸ ಮಾಡಬೇಕೆಂದಿದ್ದರೂ ಅದನ್ನು ಪಾಲಿಸದೆ ಭಾಷಣಗಳಲ್ಲಿ ಗಾಂಧಿಯ ಹೆಸರಿನಲ್ಲಿ ಪ್ರತಿಭಟನೆಗಳಲ್ಲಿ ಗಾಂಧಿಯ ಚಿತ್ರ ಜೊತೆಗಿರಿಸಿಕೊಂಡು ತಮ್ಮ ಆಷಾಡಭೂತಿತನ ಪ್ರದರ್ಶಿಸುತ್ತಾರೆ. ಈ ಮಧ್ಯೆ ಬಿಹಾರ ಸದ್ದಿಲ್ಲದೆ ಗಾಂಧೀಜಿಗೆ ಅತಿಪ್ರಿಯ ವಿಷಯವಾದ ಮದ್ಯನಿಷೇಧ ಜಾರಿಗೊಳಿಸಿ ಕಳೆದ ಏಪ್ರಿಲ್ ೫ಕ್ಕೆ ೫ ವರ್ಷ ಪೂರ್ಣಗೊಳಿಸಿ ಮಹಿಳೆಯರಿಗೆ ನೆಮ್ಮದಿ ಕೊಡುವ ಮೌನಕ್ರಾಂತಿಗೆ ಸಾಕ್ಷಿಯಾಗಿದೆ.

ದೇಶದಲ್ಲಿ ಸಂಪೂರ್ಣ ಮದ್ಯನಿಷೇಧ ಇರುವ ದೊಡ್ಡ ರಾಜ್ಯಗಳು ಗುಜರಾತ್ ಮತ್ತು ಬಿಹಾರ. ಗುಜರಾತ್ ಗಾಂಧೀಜಿಯ ಜನ್ಮಭೂಮಿ, ಬಿಹಾರ್ ಅವರ ಕರ್ಮಭೂಮಿ.

ಕಳೆದ ೧೫ ವರ್ಷಗಳಲ್ಲಿ ಬಿಹಾರದಲ್ಲಿ ಬಹಳಷ್ಟು ಗಾಂಧೀವಾದಿ ಮತ್ತು ಪುರುಷ–ಮಹಿಳಾ ಅಸಮಾನತೆ ಹೋಗಲಾಡಿಸುವ ಕಾರ್ಯಕ್ರಮಗಳು ಅನುಷ್ಠಾನಗೊಂಡಿದ್ದು, 'ಪೂರ್ಣ' ಮದ್ಯನಿಷೇಧದಂತಹ ಅತಿ ಕಠಿಣ, ಅಸಂಭವ ಕೆಲಸವನ್ನು ಸಂಭವಗೊಳಿಸಿ ೫ ವರ್ಷ ದೀರ್ಘಕಾಲ ಜಾರಿಯಲ್ಲಿರಿಸಿಕೊಂಡಿರುವ ಕೀರ್ತಿಗೆ ಬಿಹಾರ ರಾಜ್ಯ ಪಾತ್ರವಾಗಿದೆ. ಇದಕ್ಕಿಂತ ಮೊದಲಿನ ಸ್ಥಾನ ಸ್ವತಂತ್ರ ಭಾರತದಲ್ಲಿ ದೀರ್ಘಕಾಲ 'ಪೂರ್ಣ' ಮದ್ಯನಿಷೇಧ ಜಾರಿಯಲ್ಲಿ ಇರಿಸಿಕೊಂಡಿರುವ ಶ್ರೇಯ, ೧೯೫೦ ರಲ್ಲಿ ಮದ್ಯನಿಷೇಧ ಜಾರಿಗೊಳಿಸಿದ ಅವಿಭಜಿತ ಮುಂಬೈಗೆ (ಈಗಿನ ಮಹಾರಾಷ್ಟ್ರ ಮತ್ತು ಗುಜರಾತ್) ಸಲ್ಲಬೇಕು. ೧೯೫೦ ರಲ್ಲಿ ಬಿ.ಜಿ.ಖೇರ್ ಮುಖ್ಯಮಂತ್ರಿ ಮತ್ತು ಮೊರಾರ್ಜಿ ದೇಸಾಯಿ ಗೃಹಮಂತ್ರಿಯಾಗಿದ್ದಾಗ ಇವರ ಹಠದ ಕಾರಣ ಅಲ್ಲಿ ಮದ್ಯನಿಷೇಧ ಜಾರಿಗೊಂಡಿತ್ತು. ೧೯೫೨ರಲ್ಲಿ ಮುರಾರ್ಜಿ ದೇಸಾಯಿ ಮುಖ್ಯಮಂತ್ರಿಯಾಗಿ ಅದನ್ನು ಮುಂದುವರಿಸಿದರು. ಬಿಹಾರದ ಈ ಸಾಧನೆಯ ಗೌರವಕ್ಕೆ ಸ್ವಾಭಾವಿಕವಾಗಿ ನಿತೀಶ್ ಕುಮಾರ್ ಹಕ್ಕುದಾರರು. ಮುಂಬೈ ರಾಜ್ಯದಿಂದ, ಪ್ರತ್ಯೇಕವಾದ ನಂತರ ಗುಜರಾತ್‌ನಲ್ಲಿ ಎಲ್ಲಾ ಪಕ್ಷಗಳ ಮುಖ್ಯಮಂತ್ರಿಗಳೂ ಮದ್ಯನಿಷೇಧ ಜಾರಿಯಲ್ಲಿರಿಸಿದ್ದಾರೆ.

ಈ ಎರಡು ರಾಜ್ಯಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಸಂಪೂರ್ಣ ಮದ್ಯನಿಷೇಧ ಇರುವ ೨ ಸಣ್ಣ ರಾಜ್ಯಗಳು ನಾಗಾಲ್ಯಾಂಡ್ ಮತ್ತು ಮಿಜೋರಂ. ಕೇಂದ್ರಶಾಸಿತ ಪ್ರದೇಶ ಲಕ್ಷದ್ವೀಪದಲ್ಲಿ ಕೂಡ ಮದ್ಯನಿಷೇಧ ಇದೆ. ೨೦೧೪ರಲ್ಲಿ ಆಗಿನ ನಾಗಾಲ್ಯಾಂಡ್ ಮುಖ್ಯಮಂತ್ರಿ ಟಿ ಆರ್ ಜೆಲಿಯಾಂಗ್ ಹೇಳಿದ್ದರು Nagaland is the wettest dry state" ಎಂದು! ಜಿಲ್ಲಾಮಟ್ಟದಲ್ಲಿ ಮಹಾರಾಷ್ಟ್ರದ ವರ್ಧಾ, ಗಡಚಿರೋಲಿ ಮತ್ತು ಚಂದ್ರಪುರದಲ್ಲಿ ಮದ್ಯನಿಷೇಧ ಜಾರಿಯಲ್ಲಿದೆ. ವರ್ಧಾದಲ್ಲಿ– ಗಾಂಧೀಜಿಯ ಸೇವಾಗ್ರಾಮ ಆಶ್ರಮ ಅದೇ ಜಿಲ್ಲೆಯಲ್ಲಿರುವ ಕಾರಣ. ಉಳಿದೆರಡು ಜಿಲ್ಲೆಗಳಲ್ಲಿ ಜನರ ಹೋರಾಟದ ಕಾರಣ. ಮಣಿಪುರದ ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಮದ್ಯನಿಷೇಧ ಇದೆ.

ಮದ್ಯನಿಷೇಧ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧಿಕಾಂಶ ಸರಕಾರಗಳಿಗೆ ದೃಢಸಂಕಲ್ಪ ಇರಲಿಲ್ಲ ಎಂದು ಸ್ವತಂತ್ರ ಭಾರತದ ಇತಿಹಾಸ ಹೇಳುತ್ತದೆ. ರಾಜಕೀಯ ಕಾರಣಗಳಿಂದ ತಮ್ಮದೇ ಸರಕಾರದ ನೀತಿಯನ್ನು ಹಲವಾರು ಸರಕಾರಗಳು ಹಿಂತೆಗೆದುಕೊಂಡಿವೆ. ತಮಿಳುನಾಡಿನಲ್ಲಿ ಸ್ವಾತಂತ್ರ್ಯ ಪೂರ್ವದ(೧೯೩೭ರ) ಮದ್ಯನಿಷೇಧವನ್ನು ೧೯೭೧ರಲ್ಲಿ ಕರುಣಾನಿಧಿ ಕೊನೆಗೊಳಿಸಿದರು. ಆದರೆ ಎರಡು ಉಪಚುನಾವಣೆಗಳಲ್ಲಿ ಸೋತ ನಂತರ ೧೯೭೪ರಲ್ಲಿ ಪುನಃ ಜಾರಿಗೊಳಿಸಿದರು – ಮೊದಲು ಕೇವಲ ದೇಸಿ ಸರಾಯಿ, ನಂತರ ಐಎಂಎಫ್‌ಎಲ್. ಆದರೆ ಪರ್ಮಿಟ್‌ದಾರರಿಗೆ ಐಎಂಎಫ್‌ಎಲ್ ಕೊಂಡುಕೊಳ್ಳಲು ಅವಕಾಶ ಕೊಟ್ಟರು. ೧೯೭೭ ರಲ್ಲಿ ಎಂಜಿಆರ್, ಐಎಂಎಫ್‌ಎಲ್‌ಗೆ ಮನವಿ ಸಲ್ಲಿಸಿದ ೪೫ ವಯಸ್ಸಿನ ಮೇಲ್ಪಟ್ಟ ಜನರಿಗೆ ಪರ್ಮಿಟ್ ಕೊಟ್ಟರು. ನಂತರ ೧೯೮೦ರ ಲೋಕಸಭಾ ಚುನಾವಣೆಯಲ್ಲಿ ಅವರ ಪಕ್ಷ ಹೀನಾಯವಾಗಿ ಸೋಲು ಕಂಡಾಗ ಪರ್ಮಿಟ್‌ನ ವಯಸ್ಸಿನ ಮಿತಿಯನ್ನು ೩೦ಕ್ಕೆ ಇಳಿಸಿ, ಸರ್ಕಾರಿ ನೌಕರರು ಐಎಂಎಫ್‌ಎಲ್ ಖರೀದಿಸಲು ಅಗತ್ಯವಿದ್ದ ಪರ್ಮಿಟ್‌ನ ತಡೆಯನ್ನು ತೆಗೆದುಹಾಕಿದರು. ಕೊನೆಯಲ್ಲಿ ೧೯೮೧ ರಲ್ಲಿ ದೇಸಿ ಸರಾಯಿಗೆ ಅನುಮತಿ ಕೊಟ್ಟು ತಮ್ಮ ತಥಾಕಥಿತ ಪೂರ್ಣ ಮದ್ಯನಿಷೇಧವನ್ನು ಆಂಶಿಕಗೊಳಿಸಿದರು.



**ಮುರಾರ್ಜಿ ದೇಸಾಯಿ, ಶಂಕರಗುಹಾ ನಿಯೋಗಿ, ಪ್ರಕಾಶ್ ಆಮ್ಟೆ, ಪರೊಮಿತಾ ಗೋಸ್ವಾಮಿ**

ನಕ್ಸಲ್‌ವಾದಿ ಹಿನ್ನೆಲೆಯ ಕ್ರಾಂತಿಕಾರಿ ಕಾರ್ಮಿಕ ಮುಖಂಡ ಹುತಾತ್ಮ ಶಂಕರ್ ಗುಹಾ ನಿಯೋಗಿ ಅವರ ಪ್ರೇರಣೆಯಿಂದ ೧೯೭೮ರಲ್ಲಿ ಇಂದಿನ ಛತ್ತೀಸ್‌ಗಢ್ ರಾಜ್ಯದ 'ದಲ್ಲಿರಾಜ್ಹರ' ಬ್ಲಾಕಿನ ೧೦ ಸಾವಿರ ಆದಿವಾಸಿ ಗಣಿಕಾರ್ಮಿಕರು, 'ಮದ್ಯಸೇವನೆ' ಆದಿವಾಸಿಗಳ 'ಸಾಂಸ್ಕೃತಿಕ–ಸಂಪ್ರದಾಯ'ವಾಗಿದ್ದ ಹೊರತಾಗಿಯೂ ಸಾಮೂಹಿಕವಾಗಿ ಮದ್ಯಸೇವನೆ ತ್ಯಜಿಸಿದರು. ನಿಯೋಗಿ, ಸರಾಯಿ ಮಾಫಿಯಾಗಳ ಹಗೆತನ ಕಟ್ಟಿಕೊಂಡು ೧೯೯೧ರಲ್ಲಿ ಅವರಿಂದ ಹತ್ಯೆಗೊಳ್ಳುವ ತನಕ, ಇವರ ಕಾರ್ಮಿಕ ಸಂಘಟನೆಯಾದ 'ಛತೀಸ್‌ಗಢ ಮುಕ್ತಿ ಮೋರ್ಚಾ'ದ ಕನಿಷ್ಠ ೧೦ ಸಾವಿರ ಕಾರ್ಮಿಕರು ಮದ್ಯಪಾನ ಮಾಡುತ್ತಿರಲಿಲ್ಲ.

ಖ್ಯಾತ ಸಮಾಜವಾದಿ ಯೋಗೇಂದ್ರ ಯಾದವ್ ಹೇಳುತ್ತಾರೆ "ಪ್ರತಿವರ್ಷ ದೇಶದಲ್ಲಿ ೨.೬ ಲಕ್ಷ ಜನರು ಲಿವರ್ ಸಿರೋಸಿಸ್, ಕ್ಯಾನ್ಸರ್ ಮತ್ತು ರಸ್ತೆ ಅಪಘಾತದಿಂದ ಮರಣ ಹೊಂದುತ್ತಾರೆ. ಮಹಿಳೆಯರು ಕೌಟುಂಬಿಕ ಪೀಡೆಗೆ ಬಲಿಯಾಗುತ್ತಾರೆ. ಭಾರತದ ಮಹಿಳೆಯರಿಗೆ ಒಂದು ವೇಳೆ 'ಒಂದು ದಿನದ ಮಟ್ಟಿಗೆ' ಅಧಿಕಾರ ಸಿಕ್ಕಿ, ತಮ್ಮ ಇಚ್ಛೆಯ ಯಾವ ಒಂದು ಕೆಲಸ ಮಾಡಿಸಿಕೊಳ್ಳುತ್ತೀರಿ? ಎಂದು ಕೇಳಿದರೆ, ಏನು ಹೇಳುತ್ತಾರೆ? ನನ್ನ ಅನುಭವದ ಪ್ರಕಾರ ಅವರು 'ಮದ್ಯನಿಷೇಧ' ಎಂದು ಹೇಳುತ್ತಾರೆ." ಪಟ್ಟಣ ಪ್ರದೇಶದ ಬುದ್ಧಿಜೀವಿಗಳಿಗೆ ಕೇಳಿದರೆ ಅವರಿಗೆ ಇದು ದೊಡ್ಡ ಪ್ರಶ್ನೆಯೇ ಅಲ್ಲ. ಯಾವುದೇ ಸರಕಾರ ಮದ್ಯನಿಷೇಧ ಜಾರಿಗೊಳಿಸಿದರೆ ಅದರ ವಿರುದ್ಧ ಉದ್ದುದ್ದ ಸಂಪಾದಕೀಯ ಬರೆಯಲಾಗುತ್ತದೆ. ಈ ಸಂದರ್ಭದಲ್ಲಿ ಯಾದವ್, ಒಂದು ಪ್ರಶ್ನೆ ಕೇಳುತ್ತಾರೆ: "ಮಹಾರಾಷ್ಟ್ರದ ಗಡಚಿರೋಲಿ ಜಿಲ್ಲೆಯಲ್ಲಿ ಆರು ವರ್ಷಗಳ ತನಕ ಒಂದು ಬಹು–ಉದ್ದೇಶಿತ ಆಂದೋಲನ ನಡೆದು, ೧೯೯೩ರಿಂದ ಮದ್ಯನಿಷೇಧ ಜಾರಿಗೆ ಬಂತು. ದೇಶದ ಜನತೆಗೆ ಇದು ಒಂದು ಅನುಕರಣೀಯವಾದ ಮಾದರಿಯಲ್ಲವೇ?"

ಗಡಚಿರೋಲಿಯಲ್ಲಿ ೧೯೮೭ರಿಂದ ೬ ವರ್ಷ ಅಭಯ್ – ರಾಣಿ ಬಂಗ್ ಮತ್ತು ಪ್ರಕಾಶ್ ಆಮ್ಟೆ ನೇತೃತ್ವದ ಹೋರಾಟದ ನಂತರ ೧೯೯೩ರಲ್ಲಿ ಜಿಲ್ಲೆಯ ೬೦೦ ಪಂಚಾಯತ್‌ಗಳಲ್ಲಿ ಮಹಿಳೆಯರ ಮನವಿಯ ಕಾರಣ ಮತದಾನದ ಮೂಲಕ ಜನಮತ ಸಂಗ್ರಹ ನಡೆದು ಸರಕಾರ ಜಿಲ್ಲೆಯಲ್ಲಿ ಮದ್ಯನಿಷೇಧ ಜಾರಿಗೊಳಿಸಿತ್ತು. ಇವರ ಪ್ರಕಾರ ಮದ್ಯನಿಷೇಧ ಒಂದು ಅಂತಿಮ ಪರಿಹಾರವಲ್ಲ. ವಿರೋಧ ಪಕ್ಷದಲ್ಲಿ ಶಾಸಕರಾಗಿದ್ದಾಗ ಸದನದಲ್ಲಿ ಇಂದಿನ ಮಂತ್ರಿ ವಿಜಯ್‌ವಾಡೆತ್ತಿವರ್ ಹೀಗೆ ವಾದಿಸಿದ್ದರು: "ಪೊಲೀಸರ ಪರೋಕ್ಷ ಬೆಂಬಲದಿಂದ ಅಕ್ರಮ ಮದ್ಯ ಸರಬರಾಜು ನಡೆಯುತ್ತಿರುವ ಕಾರಣ ಮದ್ಯನಿಷೇಧ ವಿಫಲಗೊಂಡಿದ್ದು, ಅದನ್ನು ಹಿಂತೆಗೆದುಕೊಳ್ಳಬೇಕು." ಮಂತ್ರಿಯಾದ ನಂತರ ಇತ್ತೀಚೆಗೆ ಅವರು ಮದ್ಯನಿಷೇಧ ರದ್ದುಪಡಿಸುವ ಸರಕಾರದ ಇಚ್ಛಾಶಕ್ತಿ ಪ್ರಕಟಿಸಿದಾಗ, ಅಭಯ್ ಬಂಗ್‌ರ ಸಂಘಟನೆ 'ಮುಕ್ತಿಪಥ'ದವರು ೨೦೨೦ ರಲ್ಲಿ ಮುಖ್ಯಮಂತ್ರಿಗೆ ಹೀಗೆ ಬರೆದರು; "ಜನಮತ ಸಂಗ್ರಹ ನಡೆಸಿ ಜಾರಿಯಲ್ಲಿರುವ ಮದ್ಯನಿಷೇಧ ಕೊನೆಗೊಳಿಸುವುದರಿಂದ

ಮಹಿಳೆಯರ ಹಕ್ಕಿನ ಉಲ್ಲಂಘನೆಯಾಗುತ್ತದೆ ಮತ್ತು ಸಮಾಜದಲ್ಲಿ ತೊಂದರೆಗಳಾಗುತ್ತವೆ. ಅದನ್ನು ಮುಂದುವರಿಸುವುದು ಮಾತ್ರವಲ್ಲ, ಇನ್ನೂ ಕಠಿಣ ಕಾನೂನು ಮೂಲಕ ಹೆಚ್ಚು ಪರಿಣಾಮಕಾರಿಯಾಗಿಸಬೇಕು". ಈಗ 'ಮುಕ್ತಿಪಥ' ಸಂಘಟನೆ ಮುಖ್ಯಮಂತ್ರಿಯವರ ನೇತೃತ್ವದ ಟಾಸ್ಕ್ ಫೋರ್ಸ್ ಜೊತೆಗೆ ಸೇರಿ ಜಿಲ್ಲೆಯಲ್ಲಿ ಮದ್ಯ ನಿಷೇಧ ಸಫಲಗೊಳಿಸಲು ಕೆಲಸ ಮಾಡುತ್ತಿದೆ. ಇವರು ಹೇಳುತ್ತಾರೆ: "ಗಡಚಿರೋಲಿ ಜಿಲ್ಲೆಯ ಜನಸಂಖ್ಯೆ ೧೨ ಲಕ್ಷ. ೨೦೨೦ರ ಸಮೀಕ್ಷೆಯ ಪ್ರಕಾರ ಗಡಚಿರೋಲಿ ಜಿಲ್ಲೆಯಲ್ಲಿ ಮದ್ಯ ಮಾರಾಟ ಕಡಿಮೆಯಾಗಿದ್ದು, ಇಷ್ಟೇ ಜನಸಂಖ್ಯೆ ಇರುವ ಬೇರೆ ಜಿಲ್ಲೆಗಳಲ್ಲಿ ವರ್ಷಕ್ಕೆ ೫೦೦ ಕೋಟಿ ರೂಪಾಯಿಯ ಮದ್ಯ ಮಾರಾಟವಾಗಿದ್ದು, ಗಡಚಿರೋಲಿಯಲ್ಲಿ ಕೇವಲ ೬೪ ಕೋಟಿ ರೂಪಾಯಿಯ ಮದ್ಯ ಮಾರಾಟವಾಗಿದೆ. ಜಿಲ್ಲೆಯ ೯೦೦ ಹಳ್ಳಿಗಳಲ್ಲಿ ಮದ್ಯನಿಷೇಧ ಠರಾವು ಮಂಡನೆಯಾಗಿದ್ದು, ೭೦೦ ಹಳ್ಳಿಗಳಲ್ಲಿ 'ಅಧಿಕೃತವಾಗಿ' ಮದ್ಯ ಮಾರಾಟ ನಡೆಯುತ್ತಿಲ್ಲ."

ಗಡಚಿರೋಲಿಯಲ್ಲಿ ನಿಜವಾಗಲೂ ಮದ್ಯನಿಷೇಧ ಸಫಲವಾಗಿದೆಯೇ ಎಂದು ಅಭಯ್ ಬಂಗ್‌ರನ್ನು ಕೇಳಿದರೆ ಅವರು ಮರುಪ್ರಶ್ನೆ ಕೇಳುತ್ತಾರೆ, "ಯಾವ ಸರ್ಕಾರದ ಯಾವ ಯೋಜನೆ ಸರಿಯಾಗಿ ಕಾರ್ಯರೂಪಕ್ಕೆ ಬರುತ್ತದೆ?" ಎಂದು. ಜಿಲ್ಲೆಯಲ್ಲಿ ಮದ್ಯನಿಷೇಧ ಜಾರಿಯಲ್ಲಿದ್ದು ಮದ್ಯಸೇವನೆ ಕಡಿಮೆಯಾಗಿದೆ. 'ಮುಕ್ತಿಪಥ್' ತನ್ನ ಅಭಿಯಾನವನ್ನು ನಿರಂತರವಾಗಿ ನಡೆಸುತ್ತಿರುವುದು ಶ್ಲಾಘನೀಯ.

೨೦೧೫ ರಲ್ಲಿ ಪರೋಮಿತ ಗೋಸ್ವಾಮಿಯವರ ನೇತೃತ್ವದಲ್ಲಿ ಪ್ರಬಲ ಹೋರಾಟ ನಡೆದಿದ್ದರಿಂದ ಪಕ್ಕದ ಚಂದ್ರಪುರ ಜಿಲ್ಲೆಯಲ್ಲಿ ಮದ್ಯನಿಷೇಧ ಹೇರುವುದು ಸರಕಾರಕ್ಕೆ ಅನಿವಾರ್ಯವಾಗಿತ್ತು. ಈ ಜನಪ್ರಿಯತೆಯ ಹೊರತಾಗಿಯೂ ಇದೇ ಜಿಲ್ಲೆಯ ಬ್ರಹ್ಮಪುರಿ ವಿಧಾನಸಭಾ ಕ್ಷೇತ್ರದಿಂದ ೨೦೧೯ರ ಚುನಾವಣೆಗೆ ಅವರು ಸ್ಪರ್ಧಿಸಿದಾಗ ಅವರಿಗೆ ಕೇವಲ ೩೪೫೬ ಮತ ದೊರಕಿ ಇಡುಗಂಟು ಕಳಕೊಂಡರು! ವಿಪರ್ಯಾಸವೆಂದರೆ ಈ ಕ್ಷೇತ್ರದಲ್ಲಿ ೯೦ ಸಾವಿರ ಮಹಿಳೆಯರು ಮತದಾನ ಮಾಡಿದ್ದು, ಮೂರೂ ಜಿಲ್ಲೆಗಳಲ್ಲಿ ಮದ್ಯನಿಷೇಧ ರದ್ದುಪಡಿಸಲು ಬಹಿರಂಗ ಪ್ರಯತ್ನ ನಡೆಸುತ್ತಿರುವ ಇಂದಿನ ಮಂತ್ರಿ ವಾಡೆತ್ತಿವಾರ್ ಈ ಕ್ಷೇತ್ರದಿಂದ ಪರೋಮಿತಾರನ್ನು ಭಾರೀ ಅಂತರದಿಂದ ಸೋಲಿಸಿರುವುದು.

ಬಿಹಾರದಲ್ಲಿ ಮದ್ಯನಿಷೇಧ ಅನುಷ್ಠಾನ ಮತ್ತು ಜನಜಾಗೃತಿ ಎರಡನ್ನೂ ಸರಕಾರವೇ ನಡೆಸಿದೆ. ಇದರ ಸಮರ್ಥನೆಯಲ್ಲಿ ಸರಕಾರ ನಡೆಸಿದ ಮಾನವ ಸರಪಳಿಯಲ್ಲಿ ೪ ಕೋಟಿ (ರಾಜ್ಯದ ಜನಸಂಖ್ಯೆಯ ಮೂರನೇ ಒಂದು ಭಾಗ) ಜನತೆ ಪಾಲ್ಗೊಂಡಿದ್ದು ವಿಶ್ವದಾಖಲೆಯಾಗಿದೆ. ಮದ್ಯನಿಷೇಧ ವಿಷಯ ಅಪ್ರಸ್ತುತವಾಗಿದ್ದರೆ ಇಷ್ಟು ಜನರು ಭಾಗವಹಿಸುತ್ತಿದ್ದರೇ? ಚುನಾವಣೆಯಲ್ಲಿ ಪಕ್ಷಗಳ ಸೋಲು-ಗೆಲುವು ಹಲವಾರು ಕಾರಣಗಳನ್ನು ಅವಲಂಬಿಸಿವೆ. ಕೇವಲ ಒಂದು ಕಾರಣವಲ್ಲ. ತಮಿಳುನಾಡಿನ ಉದಾಹರಣೆಯಲ್ಲಿ ಕಂಡಂತೆ ಮದ್ಯನಿಷೇಧ ಕೊನೆಗೊಳಿಸಿದಾಗ ಮತ್ತು ಅನುಷ್ಠಾನಗೊಳಿಸಿದಾಗ ಎರಡೂ ಸಂದರ್ಭಗಳಲ್ಲಿ ಪಕ್ಷಗಳು ಚುನಾವಣೆಯಲ್ಲಿ ಸೋತಿವೆ. ಬಿಹಾರದಲ್ಲಿ ಜೆಡಿಯುಗೆ ಈ ಬಾರಿ ತನ್ನದೇ ಮೈತ್ರಿಕೂಟದಲ್ಲಿದ್ದು, ಈ ವಿಷಯದಲ್ಲಿ ಭಿನ್ನಮತ ಹೊಂದಿದ್ದ ಒಂದು ಪಕ್ಷ ತನ್ನ ಅಭ್ಯರ್ಥಿಗಳನ್ನು ಜೆಡಿಯು ವಿರುದ್ಧ ನಿಲ್ಲಿಸಿದ ಕಾರಣ ೩೫ ಕಡೆ ಜೆಡಿಯು ಸೋತಿರುವುದು.

ಬಿಹಾರದಲ್ಲಿ ಮದ್ಯನಿಷೇಧ ಸಫಲಗೊಳಿಸುವಲ್ಲಿ ಕಿಂಚಿತ್ತೂ ಕೊಡುಗೆ ಇಲ್ಲದ ರಾಜಕೀಯ ವಿರೋಧಿಗಳ ಟೀಕೆ-ಟಿಪ್ಪಣಿಗಳಿಗೆ ತಲೆಗೊಡದೆ, ತಾನು ಅಧಿಕಾರದಲ್ಲಿ ಇದ್ದಷ್ಟು ದಿನ ಮದ್ಯನಿಷೇಧ ರದ್ದು ಮಾಡುವುದಿಲ್ಲ ಎಂದು ನಿತೀಶ್ ಖಡಾಖಂಡಿತವಾಗಿ ಹೇಳಿದ್ದಾರೆ ಮಾತ್ರವಲ್ಲ, ಎಲ್ಲಾ ರಾಜ್ಯ ಸರ್ಕಾರಗಳೂ ಮದ್ಯನಿಷೇಧ ತರಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಮಹಿಳೆಯರ ಹಕ್ಕಿಗೆ ಸಂಬಂಧಪಟ್ಟಂತೆ ಏಕಾಧಿಕಾರ ಪ್ರದರ್ಶಿಸುವ ಎಡಪಕ್ಷಗಳಿಗೆ ಈ ವಿಷಯದಲ್ಲಿ ಸಹಮತವಿಲ್ಲ. ಬೃಂದಾ ಕಾರಟ್, ತಮ್ಮ ಪಕ್ಷ ಜನರ ಸಕ್ರಿಯ ಭಾಗವಹಿಸುವಿಕೆಯ ಅಭಿಯಾನದ ಮುಖಾಂತರ ಮದ್ಯಸೇವನೆ ಕಡಿಮೆಗೊಳಿಸುವ ಮತ್ತು ನಿಯಂತ್ರಣದ ಪರವಾಗಿ ಇದೆ, ಮದ್ಯನಿಷೇಧದ ಪರವಾಗಿ ಇಲ್ಲ. ಮದ್ಯನಿಷೇಧದಿಂದ ಅಕ್ರಮ ಮಾರಾಟ ನಡೆಯುತ್ತದೆ ಎನ್ನುತ್ತಾರೆ. ಕೇರಳದಲ್ಲಿ ಕಾಂಗ್ರೆಸ್ಸಿನ ಯುಡಿಎಫ್ ಸರಕಾರ ೨೦೧೫ರಲ್ಲಿ ಹಂತಹಂತವಾಗಿ ಪೂರ್ಣ ಮದ್ಯನಿಷೇಧ ಘೋಷಿಸಿತು. ಆದರೆ ೨೦೧೬ ರಲ್ಲಿ ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್ ಅಧಿಕಾರಕ್ಕೆ ಬರುತ್ತಲೇ ಈ ನೀತಿಯನ್ನು ಹಿಂತೆಗೆದುಕೊಂಡಿತು ಮಾತ್ರವಲ್ಲ, ವಿದ್ಯಾಲಯ -ಮಂದಿರ-ಮಸೀದಿ ಪರಿಸರದ ೨೦೦ ಮೀಟರ್‌ನಲ್ಲಿ ಮದ್ಯದಂಗಡಿ ತೆರೆಯಲು ನಿಷೇಧವೇನಿತ್ತೋ ಆ ಅಂತರವನ್ನು ೫೦ ಮೀಟರಿಗೆ ಇಳಿಸುವ ಮೂಲಕ 'ನಿಯಂತ್ರಣ'ದ ಮಾತನ್ನು ಕೂಡ ಪಾಲಿಸಲಿಲ್ಲ. ಅವರ ಪಕ್ಷ ಜನರ ಭಾಗವಹಿಸುವಿಕೆಯ ಅಭಿಯಾನದ ಜೊತೆಗೆ ಮದ್ಯ ಮಾರಾಟ ನಿಯಂತ್ರಣ ಕೇರಳದಲ್ಲಿ ಮಾಡದಿದ್ದರೆ ಇನ್ನು ಯಾವ ರಾಜ್ಯದಲ್ಲಿ ಮಾಡಲು ಸಾಧ್ಯ?

ಸರಕಾರಗಳು ಮದ್ಯನಿಷೇಧ ಮಾಡುವುದು ಎಷ್ಟು ಕಠಿಣ ಎನ್ನುವುದನ್ನು ಮತ್ತು ಅನುಷ್ಠಾನದ ತೊಡಕುಗಳನ್ನು ನೋಡಿದ್ದೇವೆ. ೭೦ರ ದಶಕದ ಐತಿಹಾಸಿಕ ರೈಲು ಮುಷ್ಕರ ಮತ್ತು ತುರ್ತುಪರಿಸ್ಥಿತಿ ವಿರುದ್ಧದ ಹೋರಾಟ ಈ ಎರಡರಲ್ಲೂ ಹೀರೋ ಆಗಿದ್ದ ಜಾರ್ಜ್ ಫರ್ನಾಂಡಿಸ್ ೧೯೭೭ರಲ್ಲಿ ಮೊರಾರ್ಜಿ ಸಂಪುಟದಲ್ಲಿ ಸಚಿವರಾಗಿದ್ದ ಹೊರತಾಗಿಯೂ "ಅಕ್ರಮ ದಾಸ್ತಾನುಗಾರರ ವಿರುದ್ಧ ಕೇವಲ ಕಾನೂನು ಕ್ರಮ ತೆಗೆದುಕೊಳ್ಳುವುದು ಮಾತ್ರವಲ್ಲ, ಜೊತೆಜೊತೆಗೆ 'ಜನಶಕ್ತಿಯ' ಬಳಕೆ ಅಗತ್ಯವಿದೆ" ಎಂದು ಬಹಿರಂಗವಾಗಿ ಹೇಳಿದ್ದರು.

ಅಂತರಾಷ್ಟ್ರೀಯ ಮಹಿಳಾ ದಿನ ೧೧೧ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಸಂದರ್ಭದಲ್ಲಿ ಜನಸಂಖ್ಯೆಯ ಶೇಕಡಾ ೫೦ರಷ್ಟಿರುವ ಮಹಿಳೆಯರ ನೆಮ್ಮದಿಗಾಗಿ ಮದ್ಯನಿಷೇಧವಿಲ್ಲದ ಕಡೆ 'ಛತ್ತೀಸ್‌ಗಡ್ ಮುಕ್ತಿ ಮೋರ್ಚಾ' ಮತ್ತು 'ಮುಕ್ತಿಪಥ' ಮಾದರಿಯ ಅಭಿಯಾನದ ಜೊತೆಗೆ ರಾಜ್ಯ ಸರಕಾರಗಳು ಮದ್ಯನಿಷೇಧ ಮಾಡುವಂತೆ ಒತ್ತಾಯ ತರುವ ಅಭಿಯಾನದ ಅಗತ್ಯವಿದೆ. ಮದ್ಯನಿಷೇಧವಿರುವ ರಾಜ್ಯಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಅದರ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕೇವಲ ಸರಕಾರಗಳನ್ನು ಟೀಕೆ ಮಾಡುವುದರ ಬದಲು ಆಡಳಿತ-ವಿರೋಧ ಪಕ್ಷಗಳ ಕಾರ್ಯಕರ್ತರು, ಮಹಿಳಾ ಸಂಘಟನೆಗಳು ಮತ್ತು ನಾಗರಿಕ ಸಮಾಜ, ಕಳ್ಳ ಸರಾಯಿ ದಂಧೆಕೋರರ ಜಾಲಗಳ ಮುಂದೆ ಯಾ ಸಂಬಂಧಪಟ್ಟ ಪೊಲೀಸ್ ಠಾಣೆಯ ಎದುರು ಪ್ರತಿಭಟಿಸುವ ಮೂಲಕ ಮದ್ಯನಿಷೇಧ ಪರಿಣಾಮಕಾರಿಯಾಗಿಸಲು ಸರಕಾರಗಳಿಗೆ ಸಹಕಾರ ನೀಡುವುದು ಕಷ್ಟಕರವೇ? 'ಸರಕಾರಗಳು ಜನಪರ ಕೆಲಸ ಮಾಡಿದಾಗ ಅದರ ಜೊತೆಗೆ ಸಹಕರಿಸಬೇಕು, ಜನವಿರೋಧಿಯಾಗಿದ್ದರೆ ಅದರ ವಿರುದ್ಧ ಹೋರಾಟ ಮಾಡಬೇಕು" ಎಂದು ಜೆಪಿ ಹೇಳಿದ್ದರು. ಪ್ರತಿಪಕ್ಷಗಳ ಯಾವುದೇ ಜನಪರ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗುವಂತೆ ರಾಜಕೀಯ ಪಕ್ಷಗಳು ಅಥವಾ ಕಾರ್ಯಕರ್ತರು, ಇದು ತಮ್ಮ ಜವಾಬ್ದಾರಿಯೆಂದು ಭಾವಿಸದಿರುವುದು ದುಃಖದ ವಿಷಯ. ನಾಗರಿಕ ಸಮಾಜದ ಸದಸ್ಯರಿಗೂ ಇದು ಅನ್ವಯವಾಗುತ್ತದೆ. ಮದ್ಯನಿಷೇಧ ಹೋರಾಟ ನಡೆಸುತ್ತಿರುವ ಎರಡು ಸಾವಿರಕ್ಕೂ ಹೆಚ್ಚು ಸಂಘಟನೆಗಳ ಮುಖಂಡರು ನಿತೀಶ್ ಕುಮಾರ್‌ಗೆ ಧನ್ಯವಾದ ಹೇಳಲು ಮತ್ತು ಮಾರ್ಗದರ್ಶನಕ್ಕಾಗಿ ಭೇಟಿಯಾದರು. ಅವರಲ್ಲಿ ಪ್ರಮುಖರಾದವರು ಮೇಧಾ ಪಾಟ್ಕರ್, ಪರೋಮಿತ ಗೋಸ್ವಾಮಿ, ಪೂಜಾ ಚಾಬ್ರಾ ಮತ್ತಿತರರು. ಸ್ವಾಮಿ ಅಗ್ನಿವೇಶ್‌ರಂತೂ ನಿತೀಶ್ ಕುಮಾರ್ ಅವರ ಪಕ್ಷದ ಸದಸ್ಯತ್ವನ್ನೇ ಪಡೆದರು. ಮೇಧಾ ಪಾಟ್ಕರ್ ಅವರ 'ನಶಾ ಮುಕ್ತ ಭಾರತ ಆಂದೋಲನ' ಸಂಘಟನೆ, ಬಿಹಾರ್ ಮಾದರಿಯ ಮದ್ಯನಿಷೇಧಕ್ಕಾಗಿ ಇಡೀ ದೇಶದಲ್ಲಿ ಯಾತ್ರೆ ನಡೆಸಿತು. ಮದ್ಯನಿಷೇಧ ಮಾಡಲು ಸಂಕಲ್ಪ ತೋರಿದ್ದಕ್ಕೆ ಕೇರಳದ ಕ್ಯಾಥೊಲಿಕ್ ಚರ್ಚಿನ ೩೧ ಡಯೋಸಿಸ್‌ಗಳ ೨೦೦೦ ಪ್ರತಿನಿಧಿಗಳು 'ಭರನಂಗಾನಮ್'ನಲ್ಲಿ ನಿತೀಶ್ ಕುಮಾರ್‌ರನ್ನು ಸನ್ಮಾನಿಸಿದರು.

ವಿರೋಧಿಗಳ ಟೀಕೆಗೆ ಮಣಿದು, ಒಂದು ವೇಳೆ ನಿತೀಶ್ ಕುಮಾರ್ ಮದ್ಯನಿಷೇಧ ಹಿಂತೆಗೆದುಕೊಂಡಿದ್ದರೆ ದೇಶದಾದ್ಯಂತ ಮದ್ಯನಿಷೇಧಕ್ಕಾಗಿ ನಡೆಯುತ್ತಿರುವ ಮಹಿಳಾ ಹೋರಾಟಕ್ಕೆ ದೊಡ್ಡ ಧಕ್ಕೆ ಉಂಟಾಗುತ್ತಿತ್ತು. ೨೦೨೦ರ 'ಲಾಕ್ಡೌನ್' ಸಂಕಷ್ಟದ ಸಮಯದಲ್ಲಿ ಮದ್ಯ ಸಿಗದ ಕಾರಣ ಬಹಳಷ್ಟು ಕುಟುಂಬಗಳಲ್ಲಿ ನೆಮ್ಮದಿ ನೆಲೆಸಿದ್ದುದನ್ನು ಕೇಳಿದ್ದೇವೆ, ವರದಿಗಳನ್ನು ಓದಿದ್ದೇವೆ.



**(ಜಾರ್ಜ್ ಫರ್ನಾಂಡೀಸರ ದೀರ್ಘಕಾಲಿಕ ಒಡನಾಡಿಯಾಗಿದ್ದ ಲೇಖಕರು ಈಗ ಜೆಡಿಯು ಪಕ್ಷದ ಮುಖ್ಯ ಚುನಾವಣಾಧಿಕಾರಿಯಾಗಿದ್ದಾರೆ)**

---

**೫ನೇ ಪುಟದಿಂದ )**

೫೦೦ ವರ್ಷಗಳಲ್ಲಿ ಅಧಿಕ ಪ್ರಮಾಣದಲ್ಲಿ ಜೀವಸಂಕುಲ ನಾಶವಾಗಿರುವುದು ದಾಖಲಾಗಿದೆ. ಮಾಲ್ದೀವ್ಸ್‌ನಲ್ಲಿ ಗಮನಿಸಲಾದ ಪ್ರತಿಕೂಲ ಪರಿಣಾಮಗಳೆಂದರೆ, ಪ್ರವಾಸೋದ್ಯಮದ ಬಳಕೆಗಾಗಿ ದಿಬ್ಬಗಳಲ್ಲಿ ಮೀನುಗಾರಿಕೆ ಹೆಚ್ಚಾಗಿರುವುದು, ಕಡಲತೀರದ ಕೊರೆತ, ಚರಂಡಿ ಕೊಳಚೆಯ ಕಾಟ, ಅಂತರ್ಜಲ ಬರಿದಾಗಿರುವುದು, ಪ್ರವಾಸಿಗಳ ಸಂಖ್ಯೆ ಹೆಚ್ಚಾದ ಕಾರಣ ಘನತ್ಯಾಜ್ಯಗಳಿಂದ ಉಂಟಾದ ಮಾಲಿನ್ಯ. ಲಕ್ಷದ್ವೀಪದಲ್ಲಿ ಮುಂದೆ ಇದೇ ಪರಿಸ್ಥಿತಿ ಉಂಟಾಗಬಹುದೆಂಬ ಆತಂಕ ಸಹಜವೇ ಅಲ್ಲವೇ?

ಸ್ಥಳೀಯ ಜನರ ಜೀವನೋಪಾಯದ ಮೂಲಗಳನ್ನು ಮತ್ತು ಪರಿಸರವನ್ನು ನಾಶಮಾಡಿ ಹೊಸ ಯೋಜನೆಗಳನ್ನು ಪ್ರಾರಂಭಿಸುವುದಕ್ಕಾಗಿಯೇ ಲಕ್ಷ ದ್ವೀಪಗಳ ಈಗಿನ ಆಡಳಿತ, ತಜ್ಞರು ನೀಡಿದ ಎಚ್ಚರಿಕೆ ಮತ್ತು ಪ್ರತಿಕೂಲ ಪರಿಣಾಮಗಳ ಕುರಿತ ವರದಿಗಳನ್ನು ಮರೆಮಾಚಿದೆ. ಪರಿಸರ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಮಾನವ ಪ್ರಗತಿಗೆ ಬಳಸಬಾರದೆಂದು ಇದರ ಅರ್ಥವಲ್ಲ. ಆದರೆ ಅಭಿವೃದ್ಧಿಯಲ್ಲಿ ಎಲ್ಲರೂ ಭಾಗಿಗಳಾಗಬೇಕು. ಅದರಲ್ಲಿ ಸ್ಥಳೀಯ ಜ್ಞಾನ, ಅನುಭವಗಳನ್ನು ಪರಿಗಣಿಸಬೇಕು ಮತ್ತು ಈ ಯೋಜನೆಗಳು ಸ್ಥಳೀಯ ಜನರ ಅಗತ್ಯಗಳನ್ನು ಪೂರೈಸುವಂತಿರಬೇಕು. ಇಲ್ಲದಿದ್ದರೆ ಪಾರಿಸರಿಕವಾಗಿ ಹಾನಿಕಾರಕವಾಗುತ್ತದೆ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗುತ್ತದೆ.



**(ಲೇಖಕರು ಪುದುಚೇರಿ ವಿಶ್ವವಿದ್ಯಾಲಯದ ಜೀವಪರಿಸರಶಾಸ್ತ್ರ ವಿಭಾಗದಲ್ಲಿ ಸಂಶೋಧಕರಾಗಿದ್ದಾರೆ)**

(ಕೃಪೆ : *ಜನತಾ*, ೧೧ ಜುಲೈ, ೨೦೨೧ ಕನ್ನಡಕ್ಕೆ: ಕೆ. ಪದ್ಮಾಕ್ಷಿ)

ಹಿರಿಯ ವಿದ್ವಾಂಸ ಎಚ್.ಜೆ. ಲಕ್ಕಪ್ಪಗೌಡ, ಹಿರಿಯ ಚಿತ್ರ ನಟಿ ಜಯಂತಿ ಮತ್ತು ಹಿರಿಯ ಸಾಮಾಜಿಕ ಕಾರ್ಯಕರ್ತ ಕೊಪ್ಪಳದ ವಿಟ್ಟಪ್ಪ ಗೋರಂಟ್ಲಿ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.-ಸಂ.

ದಾಖಲೆ

# ಭಾರತದ ವಿಭಜನೆಯ ತಪ್ಪಿತಸ್ಥರು

## (ರಾಮಮನೋಹರ ಲೋಹಿಯಾ ಅವರ Guilty men of India's partition ಪುಸ್ತಕದ ಕೆಲವು ಪುಟಗಳು )



**ಆಧುನಿಕ ಜಗತ್ತು ಕಂಡ ಅತ್ಯಂತ ಭೀಕರ ಮಾನವ ದುರಂತಗಳಲ್ಲಿ ಒಂದಾದ ಭಾರತದ ವಿಭಜನೆ ಎಂಬ ಘಟನೆ ಎರಡು ಪಕ್ಷಗಳ ನಡುವಣ ಮತೀಯ ಜಗಳದ ಪರಿಣಾಮವೆಂಬ ಸರಳ ಗ್ರಹಿಕೆಯ ಮೂಲಕ ಅರ್ಥ ಮಾಡಿಕೊಳ್ಳಲಾಗದ ಒಂದು ಸಂಕೀರ್ಣ ರಾಜಕೀಯ ವಿದ್ಯಮಾನವಾಗಿದ್ದು, ಅದರಲ್ಲಿ ಭಾರತದ ಚರಿತ್ರೆಯೇ ಅಡಗಿದೆ. ಮಹಾತ್ಮ ಗಾಂಧಿಯವರ ಶಿಷ್ಯಪಡೆಗೆ ಸೇರಿದ್ದ ಯುವ ಸ್ವಾತಂತ್ರ್ಯ ಸೇನಾನಿಯಾಗಿ ರಾಷ್ಟ್ರ ವಿಭಜನೆಯನ್ನು ತಮ್ಮ ಮಿತಿಯಲ್ಲಿ ವಿರೋಧಿಸುತ್ತಲೇ ಅದಕ್ಕೆ ಸಾಕ್ಷಿಯಾಗಬೇಕಾದ ಅನಿವಾರ್ಯತೆಗೆ ಸಿಕ್ಕಿದ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಈ ವಿಭಜನೆ ಸೃಷ್ಟಿಸಿದ ಹಿಂಸಾಚಾರವನ್ನು ತಡೆಯಲು ತಮ್ಮೆಲ್ಲ ಪ್ರಯತ್ನಗಳನ್ನು ಮಾಡಿದವರು ಸಹ. ಅವರು ಈ ದುರಂತದ ನಂತರದಲ್ಲೇ, ಗಾಂಧಿ ಹತ್ಯೆಯ ಕರಾಳ ಹಿನ್ನೆಲೆಯಲ್ಲಿ ಮೌಲಾನಾ ಅಬುಲ್ ಕಲಾಂ ಆಜ್ಹಾದರ India wins freedom ಪುಸ್ತಕ ಓದಿದ್ದೇ ನೆಪವಾಗಿ ರಾಷ್ಟ್ರ ವಿಭಜನೆಯ ಸುತ್ತ ಸೃಷ್ಟಿಯಾಗುತ್ತಿದ್ದ ಹಲವು ವಾದಗಳನ್ನು ಅನುಲಕ್ಷಿಸಿ ಅದನ್ನು ತಮ್ಮ ಹಿನ್ನೋಟ ಮತ್ತು ಒಳನೋಟಗಳೊಂದಿಗೆ ಒಂದು ಬಿಡುಬೀಸಾದ ಶೈಲಿಯಲ್ಲಿ ದಾಖಲಿಸಿದರು. ಲೋಹಿಯಾ ಅವರ ನಿಷ್ಠುರ ವಸ್ತುನಿಷ್ಠ ವಿಮರ್ಶೆಗೆ ಅವರ ಗುರು ಗಾಂಧಿ ಕೂಡಾ ಹೊರತಾಗಿಲ್ಲ.**

**ನಮ್ಮ ಸ್ವಾತಂತ್ರ್ಯೋತ್ಸವ ಸಂಚಿಕೆಯ ವಿಶೇಷವಾಗಿ ಇಲ್ಲಿ ಆಯ್ದು ನೀಡಿರುವ ಒಂದು ಸಣ್ಣ ಭಾಗದಲ್ಲಿ ಲೋಹಿಯಾ ಭಾರತದ ವಿಭಜನೆಯ ಹಿಂದೆ ಭಾರತದ ಜಾತಿ ವ್ಯವಸ್ಥೆಯ ಪಿಡುಗೂ ಹೇಗೆ ಕೆಲಸ ಮಾಡಿತ್ತು ಎಂಬುದನ್ನು ವಿಶ್ಲೇಷಿಸಿದ್ದಾರೆ–ಸಂ,**

**ಭಾ**ರತದಲ್ಲಿನ ಎಲ್ಲ ಕೆಡುಕುಗಳ ಮೂಲದಲ್ಲಿ, ಆಳುವವರ ಮತ್ತು ಅಳಿಸಿಕೊಳ್ಳುವವರ, ಮಧ್ಯಮವರ್ಗ ಮತ್ತು ಜನಸಮೂಹದ ನಡುವೆ ಬಹುತೇಕ ಇಲ್ಲವೇ ಇಲ್ಲವೆನ್ನುವಷ್ಟು ಪರಸ್ಪರ ಗುರುತಿಸಿಕೊಳ್ಳುವಿಕೆಯು ನಷ್ಟವಾಗಿದೆ. ಈ ಗುರುತಿಸಿಕೊಳ್ಳುವಿಕೆಯ ಅನುಪಸ್ಥಿತಿ, ಜಾತಿಗಳ ರಾಚನಿಕ ಸ್ವರೂಪದಲ್ಲಿ ಸಂಪೂರ್ಣವಾಗಿ 'ವಿಚ್ಛೇದಿತ' ಎಂಬುದಾಗಿ ಶತಶತಮಾನಗಳಿಂದ ದಾಖಲಾಗುತ್ತಾ ಬಂದಿದೆ. ಸರಿಯಾಗಿ ಹೇಳಬೇಕೆಂದರೆ, 'ವಿಚ್ಛೇದಿತ' ಎನ್ನುವುದು ಸೂಕ್ತ ಪದವಲ್ಲ, ಅದು ಪರಸ್ಪರ ಸಂಬಂಧವೇ ಕಡಿದಂತಹ ಒಂದು ಸ್ಥಿತಿ. ಭಾರತದ ಜನಸಮುದಾಯವು, ಅಂದರೆ ಒಂದು ವಿಶಾಲ ಜನಸಮೂಹವು, ಸಾಮಾನ್ಯವಾಗಿ ಮೇಲ್ಜಾತಿಯವರನ್ನೊಳಗೊಂಡ ಅತಿಸಣ್ಣ ಅಲ್ಪ ಸಂಖ್ಯಾತ ಆಳುವವರ್ಗದೊಂದಿಗೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಮಹಾತ್ಮಾ ಗಾಂಧಿಯವರು ಈ ಪರಿಸ್ಥಿತಿಯನ್ನು ಸೃಷ್ಟಿಸಲಿಲ್ಲ, ಅವರು ಅದರ ವಾರಸುದಾರರಾಗಿದ್ದರು. ಸಾವಿರಾರು ವರ್ಷಗಳ ಭಾರತದ ಇತಿಹಾಸವೇ ಅದನ್ನು ಅವರಿಗೆ ನೀಡಿದ್ದಾಗಿತ್ತು. ಯಾರೂ ಅದರಿಂದ ತಪ್ಪಿಸಿಕೊಳ್ಳಲಾರರು. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಏನೆಲ್ಲ ಸಂಭವಿಸಿರುವುದೋ ಅದಕ್ಕೆಲ್ಲ ಮುಖ್ಯವಾಗಿ ದೇಶವಿಭಜನೆಯೇ ಮುಖ್ಯ ಕಾರಣ ಎನ್ನುವುದು ನನ್ನ ನಂಬಿಕೆ. ಭಾರತದಲ್ಲಿ ನಡೆಯುತ್ತಿರುವುದೆಲ್ಲವೂ ಈ ವಿದ್ಯಮಾನಕ್ಕೇ ಕಟ್ಟುಬಿದ್ದಿವೆ ಎಂದಾಗಲೀ ಮತ್ತು ಆಗುತ್ತಿರುವುದೆಲ್ಲವೂ ಖಚಿತವಾಗಿ ಹಾಗೆಯೇ ಆಗಬೇಕು ಎಂದಾಗಲೀ ಹೇಳುತ್ತಿಲ್ಲ.

ಮೇಲ್ಜಾತಿ ಸಮುದಾಯದ ಆಳುವವರ ಮತ್ತು ವಿಶಾಲ ಜನಸಮೂಹದ ನಡುವಿನ ಗುರುತಿಸಿಕೊಳ್ಳುವಿಕೆಯ ಅನುಪಸ್ಥಿತಿಯು ಭಾರತದ ಇಂದಿನ ಸ್ಥಿತಿಗೆ ಬಹು ಮುಖ್ಯವಾದ, ಬಹು ದೃಢವಾದ, ಬಹು ನಿರ್ಣಾಯಕವಾದ ಏಕೈಕ ಅಂಶ. ಇದರ ಪರಿಣಾಮಗಳು ಬಹಳ ಅನಿಶ್ಚಿತವಾದದ್ದು. ಇವುಗಳು, ಶರಣಾಗುವ ಅಥವಾ ಅದನ್ನು ಮೀರುವಂತಹ, ಭಾಗಶಃ ಶರಣಾಗುವ ಅಥವಾ ಭಾಗಶಃ ಮೀರುವಂತಹ ಪ್ರಕ್ರಿಯೆಗಳ ನೂರಾರು ವಿವಿಧ ಸಂಯೋಜನೆಗಳನ್ನು ಅವಲಂಬಿಸಿರುತ್ತದೆ. ಆದರೆ ಈ ಅಂಶವು ಒಂದಲ್ಲ ಒಂದು ರೀತಿಯಲ್ಲಿ ಅಥವಾ ನೂರಾರು ರೀತಿಗಳಲ್ಲಿ ಪರಿಣಾಮಗಳನ್ನಂತೂ ಉಂಟುಮಾಡಲೇಬೇಕು.

ಭಾರತದ ಜನಸಮೂಹ ಮತ್ತು ಆಳುವವರ ನಡುವೆ ಇರುವ ಕಂದಕವನ್ನು ಗಾಂಧೀಜಿಯವರು ದಾಟಿಕೊಳ್ಳುವಲ್ಲಿ ಯಶಸ್ವಿಯಾದರೇ ಅಥವಾ ದಾಟಿಕೊಳ್ಳುವ ಪ್ರಯತ್ನವನ್ನಾದರೂ ಪೂರ್ಣವಾಗಿ ಮಾಡಿದರೇ? ಮೇಲ್ನೋಟಕ್ಕೆ ಅವರು ಪ್ರಯತ್ನ ಮಾಡಿದಂತೆ ಕಾಣುತ್ತದೆ. ದೇಶದ ಇತಿಹಾಸದಲ್ಲಿ ಬೆರಳೆಣಿಕೆಯ ಕೆಲವರಿಗೆ ಮಾತ್ರ ಸಾಧ್ಯವಾಗಿದ್ದಂತಹ ರೀತಿಯಲ್ಲಿ ಅವರು ಅಸಂಖ್ಯಾತ ಗಂಡಸರನ್ನು ಮತ್ತು ಹೆಂಗಸರನ್ನು ಕ್ರಿಯಾಶೀಲರನ್ನಾಗಿ ಮಾಡಿದರು. ಅದರೆ ಈ ಕ್ರಿಯಾಶೀಲಗೊಳಿಸುವಿಕೆಯಲ್ಲಿ ಎಲ್ಲೋ ಏನೋ ತಪ್ಪಾಗಿತ್ತು; ಅದು ಎಷ್ಟು ಸಾರ್ವತ್ರಿಕವಾಗಿ ಕಾಣುತ್ತಿತ್ತೋ ಅಷ್ಟು ವಾಸ್ತವದಲ್ಲಿ ಇರಲಿಲ್ಲ. ಭಾರತದ ಕೋಟ್ಯಂತರ ಜನಸಂಖ್ಯೆಯ ಕಾರಣದಿಂದಾಗಿ ಇಲ್ಲಿಯ ಘಟನಾವಳಿಗಳನ್ನು ಅವಲೋಕಿಸುವುದರದಲ್ಲಿ ಬಹಳ ದೊಡ್ಡ ದೋಷಗಳಿರಬಹುದು. ಒಂದು ಚಟುವಟಿಕೆ ಇಡೀ ಜನಸಮುದಾಯದ ನಡುವೆ ಹರಡದೇ ಇದ್ದರೂ, ಸಂಖ್ಯಾತ್ಮಕವಾಗಿ ಮುಖ್ಯವಾದ ಕೆಲವು ವರ್ಗಗಳಲ್ಲಿ ಚಲನಶೀಲತೆಯನ್ನು ಮೂಡಿಸಿದರೂ ಸಾಕು ಅದು ಎಷ್ಟು ಸಾರ್ವತ್ರಿಕವಾಗಿದೆಯೋ ಅದಕ್ಕಿಂತ ಹೆಚ್ಚು ಸಾರ್ವತ್ರಿಕವಾದಂತೆ ಕಂಡುಬರುವುದು.

ಭಾರತದ ಸ್ವಾತಂತ್ರ ಹೋರಾಟಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಂಡು ಜೈಲಿಗೆ ಹೋದವರು, ಸಣ್ಣ ಪ್ರಮಾಣದಲ್ಲಾದರೂ ಕೊಡುಗೆ ನೀಡಿದವರು, ಯಾವುದೇ ರೀತಿಯಲ್ಲಾದರೂ ತೊಂದರೆ ಅನುಭವಿಸಿದವರು, ಮತ್ತು ಸಭೆಗಳಲ್ಲಿ ಅಥವಾ ಸಮಾರಂಭಗಳಲ್ಲಿ ಭಾಗವಹಿಸುವ ಮೂಲಕ ಪರೋಕ್ಷವಾಗಿ ಪಾಲ್ಗೊಂಡವರ ಸಂಖ್ಯಾತ್ಮಕ ಮೌಲ್ಯಮಾಪನದಲ್ಲಿ ಎರಡು ಆತಂಕ ಹುಟ್ಟಿಸುವ ವಿಚಾರಗಳು ಕಂಡುಬರುತ್ತವೆ. ಸಕ್ರಿಯರಾಗಿ ಹೋರಾಟಗಳಲ್ಲಿ ಪಾಲ್ಗೊಂಡವರಲ್ಲಿ ಹೆಚ್ಚಿನವರು ಮೇಲ್‌ಜಾತಿಗೆ ಸೇರಿದವರು. ಪರೋಕ್ಷವಾಗಿ ಭಾಗವಹಿಸಿದವರೂ ಕೂಡ, ಹಿಂದುಳಿದ ವರ್ಗಗಳ ಕೆಲವು ಜಾತಿಯವರು ಕ್ರಿಯಾಶೀಲರಾಗಿ ತೊಡಗಿದ ಕೆಲವು ಸಂದರ್ಭಗಳನ್ನು ಹೊರತುಪಡಿಸಿ, ಮಿಕ್ಕ ಸಂದರ್ಭಗಳಲ್ಲಿ ಬಹುಪಾಲು ಮೇಲ್‌ಜಾತಿಗೆ ಸೇರಿದವರೇ ಆಗಿದ್ದಾರೆ. ಇದು ಗಾಂಧೀಜಿಯವರನ್ನು ಮತ್ತು ಸ್ವಾತಂತ್ರ್ಯ ಹೋರಾಟವನ್ನು ಒಂದು ಶಾಪದಂತೆ ಕಾಡಿದ ಭಾರತದ ಪರಿಸ್ಥಿತಿಯ ಅನಿವಾರ್ಯ ದೌರ್ಬಲ್ಯ. ವಿಭಜನೆಯ ಮೊಟ್ಟಮೊದಲ ಕಾರಣವೇ ಇದು. ಇದು ಭಾರತದ ಕ್ರಾಂತಿಯ ಹಿಮ್ಮುಖ ಚಲನೆಗೆ, ಮಾನವ ಇತಿಹಾಸದಲ್ಲಿ ಎಂದೂ ಆಗಿರದ ರೀತಿಯಲ್ಲಿ ಕ್ರಾಂತಿಗೆ ವಿಶ್ವಾಸಘಾತ ಮಾಡಿದ್ದರ ಬಗೆಗಿನ ಒಂದು ಪಠ್ಯ ಪುಸ್ತಕದ ಚಿತ್ರಣ. ಈಬಗ್ಗೆ ಮುಂದೆ ಏನಾದರೂ ಹೇಳಬೇಕಾಗಿ ಬರಬಹುದು.



ನಾನು ಈ ಜಿಜ್ಞಾಸೆಯನ್ನು ಮುಂದುವರೆಸುವ ಮೊದಲು, ಆಳುವವರು ಪ್ರಜೆಗಳ ಜೊತೆ ಗುರುತಿಸಿಕೊಳ್ಳದಿರುವುದು ಸಾರ್ವತ್ರಿಕವಾದ್ದು ಮತ್ತು ಅನನ್ಯವಾಗಿ ಅಥವಾ ವಿಶಿಷ್ಟವಾಗಿ ಭಾರತೀಯವಾದದ್ದು ಎನ್ನುವುದೇನೂ ಇದರಲ್ಲಿಲ್ಲ ಎನ್ನುವ ಅಭಿಪ್ರಾಯವನ್ನು ದೂರವಿಡಬೇಕು. ನಿಜ, ಆಳುವವರು ಪ್ರಜೆಗಳೊಂದಿಗೆ ಗುರುತಿಸಿಕೊಳ್ಳುವ ಪ್ರಕ್ರಿಯೆಯು ಎಲ್ಲೂ ಪರಿಪೂರ್ಣವಾಗಿಲ್ಲ. ಅದರೆ ಭಾರತದಲ್ಲಿರುವಷ್ಟರ ಮಟ್ಟಿಗೆ ಅದು ಬೇರೆಲ್ಲೂ ಅಪೂರ್ಣವೂ ಅಥವಾ ಗೈರೂ ಆಗಿಲ್ಲ ಎಂಬುದೂ ನಿಜವೇ. ಕೆಲವರು ಭಾರತದ ಜಾತಿಪದ್ಧತಿಯ ವಿಚಾರದಲ್ಲಿ ನಿರ್ದಿಷ್ಟವಾಗಿ ಭಾರತೀಯವೆನ್ನುವಂಥದ್ದೇನೂ ಇಲ್ಲ ಎಂದು ತೋರಿಸುವ ಪ್ರಯತ್ನ ಮಾಡುತ್ತಾರೆ. ಅದು ಸಂಪೂರ್ಣವಾಗಿ ತಪ್ಪು ಮತ್ತು ಅಪಾಯಕಾರಿಯಾದ ಪ್ರಯತ್ನ. ಡಿಸ್ರೇಲಿ ಮತ್ತು ಅವರಂತಹ ಇತರೆ ಯೂರೋಪಿಯನ್ನರು, ಇಡೀ ಪ್ರಪಂಚದಲ್ಲಿ, ಬಿಳಿಯ ಯೂರೋಪಿಯನ್ನರನ್ನೂ ಒಳಗೊಂಡು, ಬಡವ ಮತ್ತು ಶ್ರೀಮಂತ ಎಂಬ ಎರಡು ರಾಷ್ಟ್ರಗಳ ಬಗ್ಗೆ ಬರೆದಿದ್ದಾರೆ. ಯೂರೋಪಿನ ಶ್ರಮಿಕ ವರ್ಗ ಮತ್ತು ಮಧ್ಯಮ ವರ್ಗಗಳು ಬೇರ್ಪಡುವ ವಿದ್ಯಮಾನ ಮತ್ತು ಅವರ ನಡುವೆ ಇರುವ ವಿವಿಧ ಶ್ರೇಣಿಗಳೂ ಕೂಡ ಕಣ್ಣಿಗೆ ಕಾಣುವಂತಹವು. ಯೂರೋಪಿನ ಸಾಮಾಜಿಕ ಸ್ಥಿತಿಗೆ ತದ್ವಿರುದ್ಧವಾದ ವಿದ್ಯಮಾನವನ್ನು ಗುರುತಿಸದಿದ್ದರೆ ಅದು ಮೂರ್ಖತನವಾಗುತ್ತದೆ.

ಡಿಸ್ರೇಲಿ ಬರೆಯುವುದಕ್ಕೆ ಎಷ್ಟೋ ಮೊದಲು ಇಂಗ್ಲೆಂಡ್‌ನ ಒಬ್ಬಳು ಡಚೆಸ್, ತನ್ನ ಮೆಚ್ಚಿನ ಫಾಕ್ಸ್‌ಗೆ ಮತ ಹಾಕುವ ಪ್ರತಿಯೊಬ್ಬರಿಗೂ ಒಂದು ಚುಂಬನ ನೀಡುವುದಾಗಿ ಪ್ರಕಟಿಸಿದಳು. ಅವಳು ಕಟುಕರು, ಕಸಗುಡಿಸುವವರು, ಹೀಗೆ ಮತನೀಡಲು ಸಿದ್ಧರಿದ್ದ ಎಲ್ಲರನ್ನೂ ಚುಂಬಿಸಬೇಕಾಯಿತು. ಸಾಮಾಜಿಕ ಸಮಾನತೆಯ ಮೂರ್ತ ರೂಪವಾದ ಇಂತಹ ಘಟನೆ ಭಾರತದ ಇತಿಹಾಸದಲ್ಲಿ, ಕೊನೇ ಪಕ್ಷ ಸಾರ್ವಜನಿಕವಾಗಿ, ಎಂದೂ ನಡೆದಿಲ್ಲ. ನಿಜಕ್ಕೂ ಮುಖ್ಯವಾಗುವುದು ಇದುವೇ. ಮನುಷ್ಯ ಕುಲದಲ್ಲಿ ಇಷ್ಟೇ ಮುಖ್ಯವಾದ ಇತರ ಎಷ್ಟೋ ಘಟನೆಗಳು ನಡೆದಿರಬಹುದು. ನನಗೆ ನನ್ನ ದೇಶ ಮತ್ತು ಅದರ ಇತಿಹಾಸವನ್ನು ಹೀಯಾಳಿಸುವುದು ಇಷ್ಟವಿಲ್ಲ. ತಮ್ಮ ದೇಶವನ್ನು ಮತ್ತು ಅದರ ಇತಿಹಾಸವನ್ನು ನನ್ನಷ್ಟು ಇಷ್ಟಪಟ್ಟ ಬೇರೆ ಭಾರತೀಯರಿಲ್ಲ. ನಿಜವಾದ ದೇಶಪ್ರೇಮವೆಂದರೆ ನಿಜವಾದ ಇತಿಹಾಸ ಏನಿದೆ ಎಂದು ತಿಳಿದುಕೊಳ್ಳುವುದು ಮತ್ತು ಅಷ್ಟೇ ಸ್ಪಷ್ಟವಾಗಿ ಯಾವುದು ವಿಶಿಷ್ಟವಲ್ಲ ಎಂಬುದನ್ನು ಗುರುತಿಸಿ ಸ್ಪಷ್ಟವಾಗಿ ಅರಿತುಕೊಳ್ಳುವುದು. ಲಿಂಗಾಯತ ಪಂಥದ ಮಹಾದೇವಿ ಈ ಭೂಮಿಯ ಮೇಲೆ ಬದುಕಿದ ಅತ್ಯಂತ ಮಹಾನ್ ಮಹಿಳೆ. ಆಕೆ ಪುರುಷರ ಜೊತೆ ಮಹಿಳೆಯರ ಸಮಾನತೆ ಮತ್ತು ಸಮಾನ ಮೌಲ್ಯಕ್ಕಾಗಿ, ದೇವರ ದೃಷ್ಟಿಯಲ್ಲಿ ಏಕತೆ ಅಥವಾ ತನ್ನ ಕಲ್ಪನೆಗಳ ಈಡೇರಿಕೆಗಾಗಿ ಬಟ್ಟೆಗಳನ್ನು ತ್ಯಜಿಸಿ ಬತ್ತಲೆಯಾಗಿ ದೇಶದಾದ್ಯಂತ ಅಲೆದಾಡಿದಳು. ಇದು ಮಹಿಳೆ ಪುರುಷನ ಜೊತೆ ತನ್ನ ಸಮಾನ ಮೌಲ್ಯದ ಬಗ್ಗೆ ತೋರಿದ ಅತಿದೊಡ್ಡ ವರ್ತನೆ. ಆದರೆ ಇದೊಂದು ವೈಯಕ್ತಿಕ ವರ್ತನೆ. ಅದರಲ್ಲಿ ಸಾಮುದಾಯಿಕ ಮೌಲ್ಯ ಇರಲಿಲ್ಲ. ಏನೇ ಆದರೂ ಅದು ಇತರ ಸ್ತ್ರೀ ಪುರುಷರ ಜೀವನವನ್ನು ನೇರವಾಗಿ ಪ್ರವೇಶಿಸಲಿಲ್ಲ. ನಾನು ಬೇರೊಂದು ಕಡೆ, ಭಾರತದ ನೆಲವು ಆಧ್ಯಾತ್ಮಿಕ ಸಮಾನತೆಯಲ್ಲಿ ಅತ್ಯಂತ ಶ್ರೇಷ್ಠವಾದದ್ದು ಮತ್ತು ಮಹಾದೇವಿ ಅದಕ್ಕೊಂದು ಮಹೋನ್ನತ ಉದಾಹರಣೆಯೆಂದೂ, ಸಾಮಾಜಿಕ ಸಮಾನತೆಯ ವಿಷಯದಲ್ಲಿ ಯೂರೋಪ್‌ಗೆ ಬೇರೆ ಸಾಟಿಯಿಲ್ಲ ಮತ್ತು ಅದಕ್ಕೆ ಬ್ರಿಟಿಷ್ ಡಚೆಸ್ ಏನೂ ಕಡಿಮೆ ಮಹತ್ವದ ಸಂಕೇತವಲ್ಲ ಎಂದೂ ಹೇಳಿದ್ದೆ.

ತಮ್ಮ ಸಾವಿನ ಕೆಲವು ವರ್ಷಗಳ ಹಿಂದಿನವರೆಗೂ ಗಾಂಧೀಜಿಯವರಿಗೆ ಜಾತಿ ವ್ಯವಸ್ಥೆಯ ಪೂರ್ಣ ಪರಿಣಾಮಗಳ ಅರಿವು ಇದ್ದಂತೆ ಕಾಣುವುದಿಲ್ಲ. ಅದರ ಬಗ್ಗೆ ಒಂದು ರೀತಿಯ ರಮ್ಯ ಆದರ್ಶಮಯವಾದ ನಿಲುವನ್ನು ಹೊಂದಿ ಮುನ್ನಡೆದಿದ್ದರು. ಜಾತಿವ್ಯವಸ್ಥೆಯು ಮೂಲಭೂತವಾಗಿ ಒಂದು ಕೆಡುಕಲ್ಲವೇನೋ ಎಂಬಂತೆ ಅವರು ಅದರ ಮೇಲ್ಪದರದ ಕೆಡುಕುಗಳನ್ನು ತೊಡೆದುಹಾಕಲು ಪ್ರಯತ್ನಿಸಿದರು. ಸ್ವಾತಂತ್ರ್ಯ ಹೋರಾಟದ ಕೊನೆಯ ಹಂತದ ಹೊತ್ತಿಗೆ ಅಂದರೆ 1942ರ ಬಹಿರಂಗ ಬಂಡಾಯದ ಹೊತ್ತಿಗೆ ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಕೆಟ್ಟ ಪರಿಣಾಮಗಳನ್ನು ಅವರು ಗುರುತಿಸಿದರು. ಅವರು ತಮ್ಮ ಬದುಕಿನುದ್ದಕ್ಕೂ ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಯತ್ನಿಸುತ್ತಲೇ ಇದ್ದರು ಎಂಬುದು ನಿಜವೇ. ಅದೊಂದು ಸುಧಾರಕನ ಕಾರ್ಯವೇ ಹೊರತು ಕ್ರಾಂತಿಕಾರಿಯದ್ದಲ್ಲ. ಬಹಳ ಕಾಲ ಅವರು ಜಾತಿ ವ್ಯವಸ್ಥೆಯ ಕಲ್ಮಶಗಳನ್ನು ಶುದ್ಧಗೊಳಿಸಿ ಅದನ್ನು ಕಾಪಾಡಬಯಸಿದ್ದರು. ತಮ್ಮ ಸಾವಿಗೆ ಕೆಲವು ವರ್ಷಗಳ ಮೊದಲು ಜಾತಿಯ ವಿಚಾರದಲ್ಲೂ ಅವರೊಬ್ಬ ಕ್ರಾಂತಿಕಾರಿಯಾದಾಗ ಅವರ ನಿಲುವು ಬದಲಾಗಿತ್ತು. ಆದರೆ ಅದಾಗಲೇ ಬಹಳ ತಡವಾಗಿ ಹೋಗಿತ್ತು. ಅವರ ಹಿಂದಿನ ನಿಲುವಿನ ದೌರ್ಬಲ್ಯವು ರಾಷ್ಟ್ರೀಯತೆಯ ಚಳುವಳಿಯಲ್ಲಿ ಒಂದು ಮೂಲಭೂತವಾದ ಅಶಕ್ತತೆಯನ್ನು ಉಂಟುಮಾಡಿತ್ತು.

ತಮ್ಮ ಬದಲಾಗುತ್ತಿದ್ದ ವ್ಯಾಖ್ಯಾನಗಳಲ್ಲಿ ಗಾಂಧೀಜಿಯವರು ಬಹಳ ಕರುಣಾಜನಕವಾಗಿದ್ದಿರಬಹುದು. ಅವರ ಅಹಿಂಸಾತತ್ವವು ಒಮ್ಮೆ ಬ್ರಿಟಿಷರ ಯುದ್ಧದ ಪ್ರಯತ್ನಗಳಿಗೆ ಸಂಪೂರ್ಣವಾಗಿ ತಡೆಯೊಡ್ಡುವ ಕಡೆಗೆ ಅವರನ್ನು ಕೊಂಡೊಯ್ದರೆ ಮತ್ತೊಮ್ಮೆ ಅದು ಷರತ್ತುಬದ್ಧ ಸಹಕಾರಕ್ಕೆ ಕಾರಣವಾಗುತ್ತಿತ್ತು. ಅವರ ನಿಂದಕರು, ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ, ಗಾಂಧೀಜಿಯವರ ನಿಲುವುಗಳಲ್ಲಿ ಬದಲಾವಣೆಗಳಾಗುತ್ತಾ, ರಾಷ್ಟ್ರೀಯ ಚಳುವಳಿಗೆ ಶಕ್ತಿ ಸಂಚಯವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಶಕ್ತಿಗುಂದಿದಾಗ ಅವರು ತಮ್ಮ ಸತ್ಯ ಮತ್ತು ಅಹಿಂಸೆಯ ವ್ಯಾಖ್ಯಾನದಲ್ಲಿ ತುಸು ಹೆಚ್ಚು ದೃಢವಾಗುತ್ತಿದ್ದರು ಎಂಬುದನ್ನು ಕಂಡಿದ್ದರು. ಗಾಂಧೀಜಿಯವರದ್ದು ಆಷಾಡಭೂತಿತನವೆಂದು ಆರೋಪಿಸುವ, ನಾನು ಒಪ್ಪದ, ನೈತಿಕ ತೀರ್ಪನ್ನು ಬದಿಗೆ ಸರಿಸಿ ನೋಡುವುದಾದರೆ, ಅವರ ಬದಲಾಗುವ ಅಭಿಪ್ರಾಯಗಳ ಬಗ್ಗೆ ಸಾಕಷ್ಟು ಸಾಕ್ಷಿ ದೊರೆಯುತ್ತದೆ. ನನ್ನನ್ನು ಬಹಳವಾಗಿ ಕಾಡಿದ ಒಂದು ವಿಚಾರವೆಂದರೆ, ಬಹಿರಂಗ ಬಂಡಾಯಕ್ಕೆ ಕರೆಕೊಡುವ ಮುನ್ನಾದಿನ ಮತ್ತು ಆರು ತಿಂಗಳ ನಂತರದಲ್ಲಿ ಅವರು ಬ್ರಿಟಿಷ್ ವೈಸ್‌ರಾಯ್‌ರಿಗೆ ಬರೆದ ಪತ್ರದ ಧ್ವನಿ ಮತ್ತು ವಸ್ತುವಿನಲ್ಲಿಯ ವೈರುಧ್ಯ. ಹೋರಾಟದ ನಡುವೆ ಇರುವಾಗ ನಾವು ಪಕ್ಷದ ಸಮರ್ಥಕರಾಗಿರುವಾಗ ಈ ವೈರುಧ್ಯವು ಗಮನಕ್ಕೆ ಬರಲಿಲ್ಲ. ಆದರೆ ಕೆಲವು ವರ್ಷಗಳ ಹಿಂದೆ ಆ ಪತ್ರಗಳನ್ನು ಪುನಃ ಒಂದೇ ಬೀಸಿನಲ್ಲಿ ಓದಿದಾಗ ನನಗೆ ಖೇದವಾಯಿತು ಮತ್ತು ಮುಜುಗರವಾಯಿತು. ಮೊದಲನೆಯ ಪತ್ರವು ತನ್ನ ನಡೆ ಮತ್ತು ತನ್ನ ಜನಸಮುದಾಯದ ಬಗ್ಗೆ ಆತ್ಮವಿಶ್ವಾಸವುಳ್ಳ ಒಬ್ಬ ನಾಯಕನ ಪತ್ರವಾಗಿದ್ದರೆ, ಎರಡನೆಯದು ತನ್ನ ಗಂಡನಿಂದ ಏಟು ತಿಂದು ಶರಣಾದ ಹೆಂಗಸಿನ ಗೋಳಿನ ಪತ್ರ. ಈ ಸಾಕ್ಷಿಯ ಆಧಾರದಲ್ಲಿ ಗಾಂಧೀಜಿಯವರ ಮೇಲೆ ಆಷಾಡಭೂತಿತನವನ್ನು ಮತ್ತು ಇಬ್ಬಂದಿತನವನ್ನು ಆರೋಪಿಸುವುದು ಸುಲಭ. ಆದರೆ ವಿಚಾರ ಅದಕ್ಕಿಂತಲೂ ಆಳವಾದುದು.

ಗಾಂಧೀಜಿಯವರು ಸ್ವಲ್ಪಮಟ್ಟಿಗೆ ಅಸ್ಥಿರವಾದ ಅಧಿಕಾರಿಗಳ ಸೈನ್ಯದ ನಾಯಕರಂತಿದ್ದು ಈ ಅಧಿಕಾರಿಗಳ ಮೇಲೆ ಒಂದು ಸ್ಥಿರವಾದ ಆದರೆ ಅಷ್ಟೇನೂ ತೀಕ್ಷ್ಣವಲ್ಲದ, ಜಿಗುಟುತನ ಮತ್ತು ಕಷ್ಟವನ್ನು ನೀಸುವ ಜವಾಬ್ದಾರಿ ಹೊರಿಸಿದ್ದರು. ಅವರು ತಮ್ಮ ಅಧಿಕಾರಿಗಳನ್ನು ಕೊನೇ ಪಕ್ಷ ಅವರು ಚದುರಿಹೋಗದಂತೆ ಅಥವಾ ಕರಗಿಹೋಗದಂತೆ ಸಿದ್ಧ ಸ್ಥಿತಿಯಲ್ಲಿ ಇರಿಸಬೇಕಾಗಿತ್ತು. ಅವರ ದೌರ್ಬಲ್ಯವು, ರಾಷ್ಟ್ರೀಯ ಚಳುವಳಿಯ ದೌರ್ಬಲ್ಯವೂ ಆಗಿದ್ದು, ಇಂಥ ಮಾನಸಿಕ ಸ್ಥೈರ್ಯದ ಪರಿಸ್ಥಿತಿಯಿಂದ ಮೂಡಿದ್ದಾಗಿತ್ತು. ಹೋರಾಡುವ ಸೈನ್ಯ ಮತ್ತು ಅದರ ಸ್ಥೈರ್ಯದ ಈ ಪರಿಸ್ಥಿತಿ, ಕೊನೇಪಕ್ಷ ಅದರ ನಾಯಕತ್ವದ ಮನಸ್ಥೈರ್ಯ, ಪುರಾತನ ಮನಸ್ಥಿತಿ ಮತ್ತು ಜಾತಿ–ವ್ಯವಸ್ಥೆಯ ಅಭ್ಯಾಸಗಳಿಂದ ಪಡೆದುಕೊಂಡಂತಹದು. ಬಹುಶಃ ಗಾಂಧೀಜಿ ಇಂತಹ ಪರಿಸ್ಥಿತಿಯನ್ನು ಕೇವಲ ಒಂದೇ ಒಂದು ವಿಧದಲ್ಲಿ ಮೀರಿಕೊಳ್ಳಬಹುದು ಎಂದು ಯೋಚಿಸಿದ್ದರು. ಅವರು ಪ್ರತಿಯೊಂದು ಸೋಲಿಗೂ ಗೆಲುವಿನ ವೇಷತೊಡಿಸಿ ತೋರ್ಪಡಿಸಬೇಕಾಗಿತ್ತು. ಸೋಲಿನ ತೀವ್ರತೆಯನ್ನು ಕನಿಷ್ಟ ಮಟ್ಟಕ್ಕೆ ಇಳಿಸಬೇಕಾಗಿತ್ತು. ಪ್ರತಿಯೊಂದು ಸೋಲಿನ ನಂತರವೂ ಅವರು ತಮ್ಮ ಸೈನ್ಯ ಮತ್ತು ಅದರ ಸ್ಥೈರ್ಯವನ್ನು ಕಾಪಾಡಿ ಅದಕ್ಕೆ ಸಾಧ್ಯವಿದ್ದಷ್ಟೂ ಬೇಗ ಒಂದು ಸಮಾಧಾನದ ಸ್ಥಿತಿಯನ್ನು, ಅಥವಾ ಸ್ವಪ್ರೇರಿತ ಸಂಕಟ ಇಲ್ಲದ ಸ್ಥಿತಿಯನ್ನು ದೊರಕಿಸಿಕೊಡಬೇಕಾಗಿತ್ತು. ಹಿಂಸಾತ್ಮಕ ಯುದ್ಧಗಳ ದಂಡನಾಯಕರೂ ಸಹ ಅದನ್ನು ಮಾಡುತ್ತಾರೆಂದು ಯಾರಾದರೂ ಹೇಳಬಹುದು. ಈ ಹೋಲಿಕೆ ಸರಿಯಾದುದಲ್ಲ. ಯುದ್ಧದ ದಂಡನಾಯಕರು ಸದಾ ಯುದ್ಧ ಮಾಡುತ್ತಿರುವುದಿಲ್ಲ. ಅವರು ನಿವೃತ್ತರಾಗುತ್ತಾರೆ, ಪಲಾಯನ ಮಾಡುತ್ತಾರೆ, ಅಥವಾ ಮರುಹೊಂದಾಣಿಕೆ ಮಾಡಿಕೊಂಡು ಎದುರಾಳಿಯ ಮೇಲೆ ಹಿಂಬದಿಯಿಂದ ಆಕ್ರಮಣ ಮಾಡುತ್ತಾರೆ ಅಥವಾ ಇಂತಹದೇ ಇತರ ಕ್ರಮ ಕೈಗೊಳ್ಳುತ್ತಾರೆ. ಯುದ್ಧ ಮಾಡುವ ಸೈನ್ಯದ ಷರತ್ತುಬದ್ಧ ಅಥವಾ ಬೇರಾವ ರೀತಿಯ ಶರಣಾಗತಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅದನ್ನು ಗೆಲುವು ಎಂದು ತಪ್ಪು ತಿಳಿಯಲಾಗದು.

ಇಲ್ಲಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಪ್ರತಿಯೊಂದು ಸೋಲಿನ ನಂತರವೂ ಎಷ್ಟು ಸಾಧ್ಯವೋ ಅಷ್ಟು ಬೇಗ ಗಾಂಧೀಜಿಯವರು ಸಹಜ ಸ್ಥಿತಿಯನ್ನು ಪುನರ್‌ಸ್ಥಾಪಿಸಬೇಕಿತ್ತೇ? ಸೋಲಿನ ವಾಸ್ತವವನ್ನು ಭಾಗಶಃ ಗೆಲುವಿನ ಭಾವನೆಯೊಂದಿಗೆ ಬೆರೆಸುವುದಕ್ಕಾಗಿ ಅಹಿಂಸೆಯ ಆಕಸ್ಮಿಕ ಹುಸಿತರ್ಕವನ್ನು ಬಳಸಬೇಕಿತ್ತೇ? ಈ ಎರಡೂ ಪ್ರಶ್ನೆಗಳು ಪರಸ್ಪರ ಸಂಬಂಧ ಹೊಂದಿದ್ದರೂ ಅವು ಬೇರೆಯೇ. ಎರಡನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಲು ನನಗೆ ಹಿಂಜರಿಕೆ ಇಲ್ಲ. ಗಾಂಧೀಜಿಯವರು ನೀತಿ ಮತ್ತು ತತ್ವಗಳ ಸೈದ್ಧಾಂತಿಕ ನಿರೂಪಣೆಗಳನ್ನು ರಾಜಕೀಯ ಸಮಯಸಾಧಕತನದ ಪರಿಗಣನೆಗಳಿಂದ ಪ್ರತ್ಯೇಕವಾಗಿರಿಸಬೇಕಾಗಿತ್ತು. ತಮ್ಮ ಸೈನ್ಯವು ಸೋತಿತು ಅಥವಾ ಅದು ತನ್ನ ಗುರಿಯನ್ನು ತಲುಪಲು ಸೋತಿತು ಎಂಬುದನ್ನು ಅವರು ಕೊನೇ ಪಕ್ಷ ಆಂಶಿಕವಾಗಿಯಾದರೂ ಒಪ್ಪಿಕೊಳ್ಳಲು ಸಿದ್ಧರಿರಬೇಕಾಗಿತ್ತು. ಅವರಿಗದು ಸುಲಭ ಸಾಧ್ಯವಾಗಿತ್ತು. ಇಷ್ಟೆಲ್ಲ ಮಾಡಿದ ಮೇಲೂ ಅವರು ಇಂತಹ ತಾತ್ಕಾಲಿಕ ಸೋಲನ್ನು ಅನುಭವಿಸಬೇಕಾದ ಸಂದರ್ಭಗಳಲ್ಲಿ, ತಮ್ಮ ಜನರಲ್ಲಿ ಹೆಚ್ಚುತ್ತಿರುವ ನಿರ್ಭೀತಿಯನ್ನು ಎತ್ತಿತೋರಿಸಿ ಅಂತಿಮ ಗುರಿ ತಲುಪಲು ಪ್ರೇರೇಪಿಸಬಹುದಿತ್ತು. ಇಂತಹ ಕಾರ್ಯತಂತ್ರದಿಂದ ಚಳುವಳಿ ಅಥವಾ ಅಹಿಂಸೆಯು ದುರ್ಬಲಗೊಳ್ಳುತ್ತಿತ್ತು ಎಂದು ನನಗನಿಸುವುದಿಲ್ಲ. ಈ ತಂತ್ರವು ಅವರಿಗೆ ಇನ್ನೂ ಹೆಚ್ಚಿನ ಬಲವನ್ನು ನೀಡುತ್ತಿತ್ತು.

ಸಹಜ ಸ್ಥಿತಿಯನ್ನು ಪುನರ್‌ಸ್ಥಾಪಿಸುವುದಕ್ಕೆ ಸಂಬಂಧಿಸಿದ ಮೊದಲನೆಯ ಪ್ರಶ್ನೆಗೆ ಉತ್ತರಿಸುವುದು ತುಸು ಕಷ್ಟ. ಜಾತಿ ವ್ಯವಸ್ಥೆಯು ಭಾರತೀಯ ವ್ಯಕ್ತಿತ್ವಕ್ಕೆ ಕೆಲವು ಅಸಾಧಾರಣ ಸದ್ಗುಣಗಳನ್ನು ಮತ್ತು ದುರ್ಗುಣಗಳನ್ನೂ ನೀಡಿದೆ. ಸದ್ಗುಣಗಳು ಸ್ಪಷ್ಟವಾಗಿವೆ. ಜಾತಿವ್ಯವಸ್ಥೆಯು ರೂಪುಗೊಳಿಸಿದ ಈ ಭಾರತೀಯ ವ್ಯಕ್ತಿತ್ವವು ಬದಲಾವಣೆಗಳನ್ನು ಸುಲಭವಾಗಿ ಸ್ವೀಕರಿಸುವುದಿಲ್ಲ. ಹಾಗೆ ಒಪ್ಪಿಕೊಳ್ಳುವುದಕ್ಕೆ ಮೊದಲು ಅದನ್ನು ಮತ್ತೆ ಮತ್ತೆ ಪರೀಕ್ಷಿಸುತ್ತದೆ. ಬಹಳಷ್ಟು ಸಲ ಅದಕ್ಕೆ ಒಂದು ಮೇಲ್ಮೈ ಮೌನಸಮ್ಮತಿ ಮಾತ್ರ ನೀಡುತ್ತಾ ಮೂಲಭೂತ ನಿರಾಕರಣೆಯ ಮೂಲಕ ಉಸಿರುಗಟ್ಟಿಸುತ್ತದೆ. ಪ್ರಬಲವಾಗಿದ್ದ ಮತ್ತು ಉಚ್ಛ್ರಾಯದಲ್ಲಿದ್ದ ಕಾಲದಲ್ಲಿ ಇಂತಹ ವ್ಯಕ್ತಿತ್ವ ಒಂದು ವಿಲಕ್ಷಣ ರೀತಿಯ ನ್ಯಾಯಕ್ಕಾಗಿ ಶ್ರಮಿಸುತ್ತದೆ. ಮಿಕ್ಕೆಲ್ಲಾ ಕಾಲದಲ್ಲೂ ಅದು ಭದ್ರತೆ ಮತ್ತು ಅಸ್ಮಿತೆಯ ಪೋಷಣೆಗೆ ಶ್ರಮಿಸುತ್ತದೆ. ಆದರೆ, ದುರ್ಗುಣಗಳು ಹಲವು ಮತ್ತು ಆಳವಾದವು. ಇಡೀ ಜಗತ್ತಿನಲ್ಲೇ ಭಾರತೀಯ ವ್ಯಕ್ತಿತ್ವವು ಅತ್ಯಂತ ಹೆಚ್ಚು ಬಿರುಕು ಬಿಟ್ಟಿರುವಂತಹುದು. ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವಿನ ಗುರುತಿಸಿಕೊಳ್ಳುವಿಕೆಯ ನಷ್ಟವು ಒಂದು ಅವಾಸ್ತವಿಕ ಸ್ಥಿತಿಯನ್ನು ಉಂಟುಮಾಡಿದೆ. ಈ ಅವಾಸ್ತವಿಕ ಸ್ಥಿತಿ ಎಂಬುದು ಬಹು ದೊಡ್ಡ ಸುಳ್ಳಿನ, ಇಬ್ಬಗೆಯ ನಡವಳಿಕೆಯ, ಮನಸ್ಸಿನ ಸಹಜ ಭಾಗವೇ ಆಗಿರುವಂತಹ ಒತ್ತಡದ ಒಂದು ಸ್ಥಿತಿಯನ್ನು ನಿರ್ಮಿಸಿದೆ. ಇದೇ ಅವಾಸ್ತವಿಕತೆಯ ಸ್ಥಿತಿಯು ಒಂದು ಕ್ಷಣ ಬೆದರಿಸಿದರೆ, ದಬ್ಬಾಳಿಕೆ ಮಾಡಿದರೆ, ಹೆದರಿಸಿ ದಾಳಿ ನಡೆಸಿದರೆ, ಮರುಕ್ಷಣವೇ ಗೋಳುಗರೆಯುತ್ತಾ ಪುಸಲಾಯಿಸಲು ಸಿದ್ಧವಿರುವ ಒಂದು ಮನಸ್ಥಿತಿಯನ್ನು ಉಂಟುಮಾಡಿದೆ. ದೃಢಸಂಕಲ್ಪವಿಲ್ಲದ ಶೌರ್ಯ, ಸಂಪೂರ್ಣ ಶರಣಾಗತಿಯಿಲ್ಲದ

ಹೇಡಿತನ, ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಹಠಮಾರಿತನದ ಜೊತೆಗೇ, ಅದರ ದೀರ್ಘಕಾಲೀನತೆಗೆ ಅಥವಾ ಹೊಂದಿಕೊಳ್ಳುವ ಸಾಮರ್ಥ್ಯಕ್ಕೆ ಇಡೀ ಪ್ರಪಂಚದಲ್ಲೇ ಸರಿಸಮಾನರಾರಿಲ್ಲದ ಆಳುವ ವರ್ಗವನ್ನೂ ಹುಟ್ಟುಹಾಕಿದೆ. ಈ ಗುಣಸ್ವಭಾವವನ್ನು ಬದಲಾಯಿಸಲು ಗಾಂಧೀಜಿಯವರು ಏನೂ ಮಾಡಲಿಲ್ಲ, ಕೊನೇ ಪಕ್ಷ ಉದ್ದೇಶಪೂರ್ವಕ ಗುರಿಯನ್ನಿಟ್ಟುಕೊಂಡು ಗಣನೀಯವಾದ ಕಾಲಾವಧಿಯವರೆಗಾದರೂ ಏನೂ ಮಾಡಲಿಲ್ಲ. ಅದರಿಂದಾಗಿಯೇ ಅವರು ತಮ್ಮ ಸೋಲುಗಳನ್ನು ಬಹಳ ವೇಗದಿಂದ ನೇರ್ಪಡಿಸಬೇಕಾಗುತ್ತಿತ್ತು. ಈ ವಿಚಾರದಲ್ಲಿ ಅವರಿಗೆ ಬೇರೆ ಯಾವುದೇ ಮಾರ್ಗ ಇತ್ತು ಎಂದು ನನಗನ್ನಿಸುವುದಿಲ್ಲ. ಹೆಚ್ಚೆಂದರೆ, ಅವರು ತಮ್ಮ ಕಾರ್ಯತಂತ್ರವನ್ನು ಅಥವಾ ತಮ್ಮ ಸೋಲುಗಳನ್ನು ನೇರ್ಪಡಿಸಿಕೊಳ್ಳುವ ರೀತಿಯನ್ನು ಲಾಭದಾಯಕವಾಗಿ ಬದಲಾಯಿಸಿಕೊಳ್ಳಬಹುದಾಗಿತ್ತಷ್ಟೇ.

ಭಾರತವು ಆಕ್ರಮಣಕ್ಕೆ ತುತ್ತಾಗುತ್ತಿದ್ದುದು ಮತ್ತು ಪದೇಪದೇ ಶರಣಾಗುತ್ತಿದ್ದುದು ಒಗ್ಗಟ್ಟಿಲ್ಲದ್ದರ ಪರಿಣಾಮವಾಗಿ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಇಂತಹ ಒಗ್ಗಟ್ಟಿನ ಕೊರತೆಯು ಕಾಲಕಾಲಕ್ಕೆ ಜನರನ್ನು ಕಾಡಿದ್ದರೂ ಬೇರೆಲ್ಲರಿಗಿಂತಲೂ ಹೆಚ್ಚಾಗಿ ಭಾರತದ ಜನರೇ ಏಕೆ ಅದಕ್ಕೆ ತುತ್ತಾಗಿದ್ದಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಿಜಕ್ಕೂ ಅದು ಸಮಸ್ಯೆಯೇ ಅಲ್ಲ. ಭಾರತದ ಯುದ್ಧಗಳಲ್ಲಿ ಜನರು ಕಾಣಿಸಿಕೊಂಡೇ ಇಲ್ಲ, ಅಥವಾ ಗೌಣವಾಗಿ ಮಾತ್ರ ಕಾಣಿಸಿಕೊಂಡಿದ್ದಾರೆ. ಇಂದು ಯೂರೋಪ್ ಒಂದು ಸಂಪೂರ್ಣ ಯುದ್ಧಸನ್ನದ್ಧ ಸ್ಥಿತಿಗೆ ವಿಕಾಸ ಹೊಂದಿರುವ ಹಾಗೆ, ಭಾರತದ ಇತಿಹಾಸ ನೋಡಿದರೆ,ಾರತದ ಜನ ಸಂಪೂರ್ಣ ಯುದ್ಧರಹಿತ ಸ್ಥಿತಿಯೊಂದಕ್ಕೆ ವಿಕಾಸ ಹೊಂದುವಲ್ಲಿ ಯಶಸ್ವಿಯಾಗಿದ್ದಾರೆ. ಈ ಪರಿಕಲ್ಪನೆಗಳು ತುಲನಾತ್ಮಕವಾದುವು ಮತ್ತು ಇಡೀ ಚಿತ್ರಣವನ್ನು ಆವರಿಸುವ ಮಟ್ಟಕ್ಕೆ ಇವನ್ನು ಹಿಗ್ಗಿಸಬಾರದು. ಯುದ್ಧಪೂರ್ವದಲ್ಲಿ, ಯುದ್ಧಕಾಲದಲ್ಲಿ ಮತ್ತು ಯುದ್ಧಾನಂತರದ ರಾಜ್ಯಾಡಳಿತಗಳ ಬದಲಾವಣೆಗಳ ಮಧ್ಯೆಯೂ ಭಾರತದ ರೈತ ತನ್ನ ಭೂಮಿಯನ್ನು ಉಳುಮೆ ಮಾಡುತ್ತಲೇ ಇರುವ ಚಿತ್ರ ಸ್ಥಾಯಿಯಾದುದು. ಆದರೆ ಜಗತ್ತಿನ ಮಿಕ್ಕೆಲ್ಲ ಕಡೆ ಇಂತಹ ಚಿತ್ರಣವು ಇದೇ ಪ್ರಮಾಣದಲ್ಲಿ ಸತ್ಯವಲ್ಲ.

ಇಂಡಿಯಾದ ಜನರು, ಆಳಲು, ಯುದ್ಧ ಮಾಡಲು ಮತ್ತು ಇಂತಹ ವಿಚಾರಗಳ ಬಗ್ಗೆ ಆಲೋಚನೆ ಮಾಡಲು ಮತ್ತು ಅದಕ್ಕೆ ಪೂರಕವಾದ ಕೆಲಸಗಳನ್ನು ಮಾಡಲು ಆಯ್ದ ಕೆಲವು ಜಾತಿಗಳಿಗೆ ವಹಿಸಿಕೊಟ್ಟಿದ್ದಾರೆ. ಜನಸಮೂಹಕ್ಕೆ ಈ ವ್ಯವಹಾರಗಳಲ್ಲಿ ಯಾವ ಪಾತ್ರವೂ ಇಲ್ಲ. ಯಾವುದೇ ಒಂದು ಅಂಗವನ್ನು ಬಹುಕಾಲ ಬಳಸದೇ ಬಿಟ್ಟರೆ ಅದು ದುರ್ಬಲವಾಗುತ್ತದೆ. ಅಂತೆಯೇ ಈ ಜಾತಿ ವ್ಯವಸ್ಥೆಯು ರಾಜಕೀಯ ಉದ್ದೇಶಗಳಿಗಾಗಿ ಭಾರತದ ಜನಸಾಮಾನ್ಯರನ್ನು ದುರ್ಬಲಗೊಳಿಸಿದೆ. ವಿದೇಶೀ ದಾಳಿಗಳಿಗೆ ಭಾರತದ ಜನ ಶರಣಾಗುವುದರ ಹಿಂದಿನ ಮುಖ್ಯ ಕಾರಣ ಅನೈಕ್ಯತೆ ಎಂದು ಮಾತನಾಡುವಾಗ ಜನ ಅದನ್ನು ತಮ್ಮ ಮೇಲ್ಜಾತಿಯ ಅಥವಾ ಆಳುವ ವರ್ಗದ ಅನೈಕ್ಯತೆ ಎಂಬ ದೃಷ್ಟಿಯಿಂದ ನೋಡುತ್ತಾರೆ. ಅನೈಕ್ಯತೆ ಎಲ್ಲಿದೆ? ಸ್ಪಷ್ಟವಾಗಿ ಅದು ಇರುವುದು ಆಳುವ ವರ್ಗಗಳಲ್ಲಿ. ಭಾರತದ ಇತಿಹಾಸದ ದೃಷ್ಟಿಯಿಂದ ಜನಸಾಮಾನ್ಯರ ಅನೈಕ್ಯತೆಗೆ ಯಾವ ಮಹತ್ವವೂ ಇಲ್ಲ. ಏಕೆಂದರೆ ಜನಸಾಮಾನ್ಯರು ಎಂದೂ ರಾಜಕೀಯವಾಗಿ ಕ್ರಿಯಾಶೀಲರಾಗಿರಲಿಲ್ಲ. ಜನ ಸಾಮಾನ್ಯರು ಜಾತಿ ವ್ಯವಸ್ಥೆಯ ಶಾಪದಿಂದ ನರಳದೇ ಇದ್ದಿದ್ದರೆ, ಆಳುವ ವರ್ಗಗಳಲ್ಲಿ ಅನೈಕ್ಯತೆಯು ಎಷ್ಟು ಹಾನಿಯನ್ನುಂಟು ಮಾಡಿತೋ ಅಷ್ಟನ್ನು ಮಾಡುತ್ತಿರಲಿಲ್ಲ. ಭಾರತವು ಆಗಾಗ ಆಕ್ರಮಣಗಳಿಗೆ ಒಳಗಾಗಿದ್ದಕ್ಕೆ ಮತ್ತು ಶರಣಾಗಿದ್ದಕ್ಕೆ ಪ್ರಧಾನ ಕಾರಣ ಅನೈಕ್ಯತೆಯಲ್ಲ, ಜಾತಿವ್ಯವಸ್ಥೆ.

ಆಳ್ವಿಕೆಯನ್ನು ಮತ್ತು ರಾಜಕಾರಣವನ್ನು ಕೆಲವೇ ಆಯ್ದ ಜಾತಿಗಳ ಜನರಿಗೆ ಬಿಟ್ಟುಕೊಡುವ ವ್ಯವಸ್ಥೆ ಮತ್ತು ಮಧ್ಯಮ ವರ್ಗ ಹಾಗೂ ಜನಸಾಮಾನ್ಯರ ನಡುವಿನ ಅನುಭೂತಿಯ ಕೊರತೆ ಅಥವಾ ಸಂಬಂಧದ ಕೊಂಡಿಯಿಲ್ಲದ ಒಂದು ಸ್ಥಿತಿ ಸ್ವಾತಂತ್ರ್ಯ ಚಳುವಳಿಯ ಶಕ್ತಿಹೀನತೆಗೆ ಅನಿವಾರ್ಯ ಕಾರಣವಾಗಲೇಬೇಕಿತ್ತು. ಭಾರತದ ಜನಸಮುದಾಯ ಬಹಳ ಅಪರೂಪಕ್ಕೆ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಪೂರ್ಣ ಶಕ್ತಿಯೊಂದಿಗೆ ಎದ್ದುನಿಲ್ಲಲು ಸಾಧ್ಯವಾಗಿತ್ತು. ಅದರ ನಾಯಕರ ವರ್ತನೆ ಡೋಲಾಯಮಾನವಾಗಿರುತ್ತಿತ್ತು. ಸ್ವಾತಂತ್ರ್ಯ ಹೋರಾಟದ ಮೂಲದಲ್ಲೇ ಇದ್ದ ಇಂತಹ ದೌರ್ಬಲ್ಯವು, ಮುಂದಿನ ದುರದೃಷ್ಟಕ್ಕೆ ಅನಿವಾರ್ಯ ಕಾರಣವಾಗಿತ್ತು. ಅದು ತಂದಿದ್ದು ವಿಭಜನೆಯ ದುರದೃಷ್ಟವನ್ನು ಎನ್ನುವುದು ಆಶ್ಚರ್ಯದ ವಿಚಾರವೇ ಅಲ್ಲ. ಇಷ್ಟಕ್ಕೂ ವಿಭಜನೆ ಎಂದರೆ ಏನು? ಭಾರತದ ವಿಭಜನೆ ಒಂದು ಬಗೆಯ ಜಾತಿಗಳ ನಡುವೆ, ಮಧ್ಯಮ ವರ್ಗ ಮತ್ತು ಜನಸಾಮಾನ್ಯರ ಮಧ್ಯ ಸಂಬಂಧದ ಕೊಂಡಿಯಿಲ್ಲದಿರುವಿಕೆಯ ಕಾನೂನುಬದ್ಧ ದಾಖಲಾತಿ ಮಾತ್ರ. ಮೊಟ್ಟಮೊದಲಿಗೇ ಈ ಸಂಬಂಧಹೀನತೆಯು ಸಣ್ಣ ಮುಸ್ಲಿಂ ದಾಳಿಕೋರ ಗುಂಪುಗಳು ಹಿಂದೂ ಜನಸಮೂಹವನ್ನು ಆಕ್ರಮಿಸುವುದು ಸಾಧ್ಯವಾಗುವಂತೆ ಮಾಡಿತು. ಇದೇ ಸಂಬಂಧಹೀನತೆಯು ನಂತರ ಪಠಾಣ್ ಮುಸ್ಲಿಮರು ಟರ್ಕ್ ಮುಸ್ಲಿಮರಿಗೆ ವಶವಾಗುವಂತೆ ಮಾಡಿತು. ಹೀಗೇ ಮುಂದುವರಿದ ಅದು ಸದ್ಯಕ್ಕೆ ತಂದುಕೊಟ್ಟಿರುವುದು ದೇಶದ ವಿಭಜನೆಯ ಕಹಿಫಲವನ್ನು.

ಭಾರತದ ಸ್ವಾತಂತ್ರ್ಯ ಹೋರಾಟವು ಪ್ರಾರಂಭದಿಂದಲೇ ಒಂದು ನಿರ್ಧಾರಕ ಕಾರ್ಯಕ್ರಮವಾಗಿ, ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಹಿಂದುಳಿದ ಜಾತಿಗಳಿಗೆ ಆದ್ಯತಾ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನೀಡುವುದರ ಮೇಲೆ ಆಧರಿಸಿದ್ದಿದ್ದರೆ, ಹಿಂದುಗಳು, ಶೂದ್ರರು, ಹರಿಜನರು, ಅನ್ಸಾರ್ ಅಥವಾ ಮೋಮಿನ್ ಮುಸ್ಲಿಮರ ಜೊತೆ ಬೆರೆಯುತ್ತಿದ್ದರು. ಕೊನೇ ಪಕ್ಷ ಅವರು ರಾಜಕೀಯವಾಗಿ ಒಂದು ಏಕೀಕೃತ ದೇಶದ ಸ್ವಾತಂತ್ರಕ್ಕಾಗಿ ಒಗ್ಗಟ್ಟಾಗುತ್ತಿದ್ದರು. ಈ ಕಾರ್ಯತಂತ್ರ ಮತ್ತು ನೀತಿಗಳು ನಂತರದಲ್ಲಿ ಹಿಂದುಳಿದ ಮುಸ್ಲಿಮರ ಮೇಲೆ ಒಂದು ಪ್ರಚಾರಕ ತಂತ್ರವಾಗಿ, ಆಕ್ರಮಣಕಾರಿ ವಾಗಾಂಡಬರದ ಪ್ರಯೋಗವಾಗಿ ಬಳಕೆಯಾಯಿತು. ಆದ್ದರಿಂದ ಅದರ ಸೋಲು ಒಂದು ಪೂರ್ವ ನಿರ್ಧಾರಿತ ಸಮಾರೋಪವಾಗಿತ್ತು. ದೇಶವನ್ನು ವಿಭಜಿಸುವ ಗುರಿಯನ್ನು ಹೊಂದಿ ಯಶಸ್ವಿಯಾಗಿ ಅದನ್ನು ಸಾಧಿಸಿದ ಮುಸ್ಲಿಂ ಮತಾಂಧತೆಗೆ ಸಹಾಯಕವಾದ ಅತ್ಯುತ್ತಮವಾದ ವಾದವು ದೊರೆತದ್ದು ಹಿಂದೂ ಜಾತಿ ವ್ಯವಸ್ಥೆಯಿಂದ. ಈ ವಾದಕ್ಕೆ ವಿವರವಾದ ಸಾಕ್ಷಿಯೇನೂ ಬೇಕಾಗಿರಲಿಲ್ಲ. ಅದು ಪ್ರತಿಯೊಬ್ಬರ ದೃಷ್ಟಿಗೂ ಬೀಳುವಂತಿತ್ತು. ಅದು ನೇರವಾಗಿ ಗುರಿ ತಲುಪಿ ಅಲ್ಲಿ ಶಾಶ್ವತವಾಗಿ ಸ್ಥಾಪಿತವಾಯಿತು. ಇಂದಿಗೂ ಭಾರತದ ಒಂದು ಹಳ್ಳಿ ಎಂದರೆ ಅದು ಜಾತಿ ವ್ಯವಸ್ಥೆಗೆ ಅನುಗುಣವಾಗಿ ವಿಭಾಗಿಸಲ್ಪಟ್ಟ ಹಲವು ಭಾಗಗಳ ಒಂದು ಜೋಡಣೆ ಮಾತ್ರ. ಗಾಂಧೀಜಿ ಅಥವಾ ಬೇರೆ ಯಾರಿಗಾದರೂ ಈ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿತ್ತೇ ಎಂಬ ಪ್ರಶ್ನೆ ವ್ಯರ್ಥ. ಇತಿಹಾಸವನ್ನು ಕುರಿತು ಚಿಂತಿಸುವುದರಿಂದ ಬಹಳವೆಂದರೆ ಪರ್ಯಾಯಗಳನ್ನು ವಿಶ್ಲೇಷಿಸಿ ಪಟ್ಟಿಮಾಡಬಹುದಷ್ಟೆ ಅದೆಲ್ಲ ಸಾಧ್ಯವಿತ್ತೇ ಎಂಬುದನ್ನು ಖಚಿತವಾಗಿ ಹೇಳಲಾಗದು. ಇಂತಹ ವಿಶ್ಲೇಷಣೆ ಮತ್ತು ಊಹೆಗಳು ಬಹಳವೆಂದರೆ ಮನಸ್ಸನ್ನು ತುಸು ವಿಶಾಲಗೊಳಿಸಬಹುದು, ಅದು ಭವಿಷ್ಯದ ಭಾಗವಾಗಬಹುದೇ ಹೊರತು ಇತಿಹಾಸದ್ದಲ್ಲ.

ಸಿಹಿಯಾದ ಅತಿಭಾವುಕತೆ ಭಾರತದ ಸಾಮಾಜಿಕ ನಡವಳಿಕೆಯ ಒಂದು ಭಾಗ. ಈ ದೌರ್ಬಲ್ಯವು ಆಳುವ ವರ್ಗ ಮತ್ತು ಜನಸಮೂಹದ ನಡುವಿನ ಅನುಭೂತಿಯ ಕೊರತೆಯಿಂದ ಉಂಟಾಗುತ್ತದೆ. ಬಲಪ್ರಯೋಗದಿಂದ ಏನನ್ನು ಪಡೆಯಲು ಸಾಧ್ಯವಾಗಿಲ್ಲವೋ ಅದನ್ನು ಪ್ರಾರ್ಥನೆಯಿಂದ, ಪುಸಲಾವಣೆಯಿಂದ, ಉತ್ಪ್ರೇಕ್ಷೆಯ ಮಾತುಗಳಿಂದ ಪಡೆಯಲು ಪ್ರಯತ್ನಿಸಲಾಗುತ್ತದೆ. ಪ್ರಪಂಚದಲ್ಲಿ ಬೇರೆ ಯಾವ ಭಾಷೆಗಿಂತಲೂ ಹೆಚ್ಚು ಶ್ರೀಮಂತವಾದ ಭಾರತೀಯ ಭಾಷೆ ಸಂಪೂರ್ಣವಾಗಿ ಉತ್ಪ್ರೇಕ್ಷೆಯಿಂದ, ಸಿಹಿಯಾದ ಅತಿ ಭಾವುಕತೆಯ ಅಸಹನೀಯ ವ್ಯಾಧಿಯಿಂದ ನರಳುತ್ತದೆ. ಪ್ರತಿಯೊಂದನ್ನೂ ಪವಿತ್ರ ಆಚರಣೆಗಳ ರೂಪಕ್ಕೆ ಬದಲಾಯಿಸಲಾಗುತ್ತದೆ. ಸಕಲವೂ ಪವಿತ್ರವಾಗುತ್ತವೆ. ಪ್ರತಿಯೊಂದನ್ನೂ ಅಮೃತವನ್ನಾಗಿಸಲಾಗುತ್ತದೆ. ಪ್ರತಿಯೊಬ್ಬರೂ ಒಂದಲ್ಲ ಒಂದು ವಿಚಾರಕ್ಕೆ ಸಾಗರವಾಗುತ್ತಾರೆ, ವಿದ್ಯೆಯ ಸಾಗರ, ಔದಾರ್ಯದ ಸಾಗರ, ಧೈರ್ಯದ ಸಾಗರ ಹೀಗೆ. ಈ ರೀತಿಯಲ್ಲಿ ಪದಗಳು ಅರ್ಥ ಕಳೆದುಕೊಳ್ಳುತ್ತವೆ, ಗಾಂಧೀಜಿಯವರೂ ಇಂತಹ ಒಂದು ಕಲೆಯ ಬಲಿಪಶುವಾಗಿರುವುದಕ್ಕಿಂತ ಹೆಚ್ಚು ಅದರಲ್ಲಿ ಪರಿಣತರಂತೆ ಕಾಣಿಸಿದರೂ ಅವರು ಮತ್ತು ಸ್ವಾತಂತ್ರ್ಯ ಚಳುವಳಿಯೂ ಈ ರಾಷ್ಟ್ರೀಯ ವ್ಯಾಧಿಯ ಬಲಿಪಶುಗಳೇ ಇರಬೇಕು ಎಂಬ ಸಂಶಯ ನನಗಿದೆ. ಎಲ್ಲ ಬ್ರಿಟಿಷ್ ನಿರಂಕುಶಾಧಿಕಾರಿಗಳನ್ನೂ ಅವರು "ಪ್ರಿಯ ಸ್ನೇಹಿತನೇ" ಎಂದು ಸಂಬೋಧಿಸುತ್ತಿದ್ದುದು ಇದಕ್ಕೊಂದು ನಿದರ್ಶನ. ಕೈದ್ ಇ ಅಜಮ್ (ಮಹಾನ್ ನಾಯಕ) ಎಂಬುದರ ಬಗ್ಗೆ ಆಜಾದರು ಗಮನ ಸೆಳೆಯುವುದು ಇನ್ನೊಂದು ಉದಾಹರಣೆ. ಆಜಾದರು ಗಾಂಧೀಜಿಯವರು ಜಿನ್ನಾ ಅವರ ಹಿಂದೆ ಓಡುತ್ತಿದ್ದುದನ್ನು ಇಷ್ಟಪಡುತ್ತಿರಲಿಲ್ಲ. ನಾನೂ ಗಾಂಧೀಜಿಯವರು ಕೆಲವೊಮ್ಮೆ ಜಿನ್ನಾ ಅವರ ಹಿಂದೆ ಬಿದ್ದು ಮನವೊಲಿಸುವುದನ್ನು ಗಮನಿಸದೇ ಇರಲಾರದಾದೆ. ಏಕೆಂದರೆ ರಾಷ್ಟ್ರೀಯವಾದಿ ಮುಸ್ಲಿಮರು ಸೋಮಾರಿಗಳಾಗಿದ್ದು, ಅಂತಹ ರಾಜಕಾರಣಿಗಳ ನಡುವೆ ಜಿನ್ನಾ ಮಾತುಗಾರಿಕೆಯ ಮತ್ತು ಕುಶಲ ನಿರ್ವಹಣೆಯ ಹೀರೋಗಳ ರೀತಿಯ ಒಬ್ಬ ರಾಜಕುಮಾರನಾಗಿದ್ದರು. ಆದರೂ ಗಾಂಧೀಜಿಯವರು ಹೊಗಳಿಕೆಯ ಮೂಲಕ ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಪ್ರವೃತ್ತಿಯನ್ನು ತುಸು ಹೆಚ್ಚಾಗಿಯೇ ಹೊಂದಿದ್ದರು. ಅದರಿಂದ ಅವರು ಇಡೀ ಪ್ರಪಂಚವನ್ನೇ ದಾರಿತಪ್ಪಿಸಿದರು. ಹಾಗೆಯೇ ಸ್ವತಃ ತಮ್ಮ ನಡವಳಿಕೆಯೂ ವಿನಯಪೂರ್ವಕ ಸ್ನೇಹವೆಂಬ ತಪ್ಪುಗ್ರಹಿಕೆಗೆ ದಾರಿ ಮಾಡಿಕೊಟ್ಟರು.

ಸ್ವಾತಂತ್ರ್ಯ ಹೋರಾಟದ ಸ್ನೇಹಪೂರ್ವಕ ವಿನಯವಂತಿಕೆಯು ಅದರ ಸೂಕ್ತ ವಿಕಾಸಕ್ಕೆ ಈವರೆಗೂ ಅಡ್ಡಿಯಾಗಿದೆ. ಈ ರೀತಿಯ ಹೋರಾಟವು ಒಂದು ಹಿಂಸಾತ್ಮಕ ಹೋರಾಟಕ್ಕಿಂತ ಕಡಿಮೆ ಬೆಲೆ ತೆರುವಂತಹುದು ಅಥವಾ ಅದು ಹಿಂಸಾತ್ಮಕ ಹೋರಾಟದ ನಂತರ ಉಂಟಾಗಬಹುದಾದಂತಹ ನೋವು ಮತ್ತು ಅವ್ಯವಸ್ಥೆಗೆ ಕಾರಣವಾಗಿಲ್ಲ. ಅಲ್ಲದೆ ಅದು ಈ ಹಿಂದಿನ ಆದರ್ಶಗಳ ಮತ್ತು ಅಭ್ಯಾಸಗಳ ಮುಂದುವರಿಕೆಯನ್ನು ಸುಲಭಗೊಳಿಸಿತು ಎಂದೆಲ್ಲಾ ಭಾವಿಸಲಾಗಿದೆ. ಈ ಎಲ್ಲ ಊಹೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕು. ಅವುಗಳಲ್ಲಿ ಕೆಲವಂತೂ ಸ್ಪಷ್ಟವಾಗಿ ಅನುಚಿತವಾದವು. ಭೀಕರವಾದ ಮತ್ತು ಸಾಟಿಯಿಲ್ಲದಂತಹ ಬೆಲೆತೆತ್ತ ದೇಶವಿಭಜನೆಯ ಮುಂದೆ ನಮ್ಮ ಸ್ವಾತಂತ್ರ್ಯ ಹೋರಾಟದ ದಾರಿಯ ಒಟ್ಟಾರೆ ವೆಚ್ಚದ ಬಗ್ಗೆ ನಾನು ಮತ್ತೆ ಮತ್ತೆ ಒತ್ತಿಹೇಳಲೇಬೇಕು.

(ಕನ್ನಡಾನುವಾದ: ಎಂ. ರಾಜು)

# ನವಿಲುಗರಿ

## ನಾನು ಮಧ್ಯಮ



***

ಭಗವಾನ್ ಬುದ್ಧನ ಉವಾಚ
ಎಳೆಯದಿರು ವೀಣೆತಂತಿಯ ತುಂಡಾದೀತು
ಸಡಿಲಗೊಳಿಸದಿರು ಸ್ವರ ಹೊಮ್ಮಲಾರದು
ಅನುಸರಿಸು ಮಧ್ಯಮ ಮಾರ್ಗವನು
ಹೊಮ್ಮೀತು ಸುರಸುಂದರ ಗಾನ.

ಕೆಲವೊಮ್ಮೆ ವಿಶಾದ ಮತ್ತೆ ಕೆಲವೊಮ್ಮೆ ಸಂತಸ
ಬೆಳಕು ಕತ್ತಲೆಯ ಆಟ
ಬೇಕು ಎರಡೂ ದಂಡೆ ಬದುಕಿನ ನಾವೆಗೆ
ಪಯಣವದು ಎಲ್ಲಿಗೆ !

ಆ ದಡದಿಂದ ಈ ದಡಕೆ
ಈ ದಡದಿಂದ ಆ ದಡಕೆ
ಪಯಣ ನಿರಂತರ ಜೀವಕೆ
ನಿಲುಗಡೆಯದು ಎಂದಿಗೆ!

ಆ ದಡ ಈ ದಡ ತೊರೆದು
ನಿಲಬಹುದೆ ಮಧ್ಯಮ ದ್ವೀಪದಲಿ
ಹೊಂದಬಹುದೇ ಬುದ್ಧ ಭಗವಂತ
ಶಾಂತಿ ನೆಮ್ಮದಿಯ!

**–ಕಮಲಾ ಹಂಪನಾ**



## ತೇಲುವ ಮೋಡಗಳು

ತೂಗುವ ಮಾವಿನ ಗೊಂಚಲಿಗೆ
ಬಿರಿದ ಬೇವಿನ ಹಣ್ಣಿಗೆ
ಆ ನಾಡಿ ಗುಂಗಾಡಿ ಮುತ್ತುವ
ಕಾಲವಂತೂ ಇದಲ್ಲ

ಆದರೂ
ನಿನ್ನ ಮನೆಯ ಅಕ್ಷಾಂಶದಲ್ಲಿ
ಯಾಕಿಷ್ಟು ಪ್ರಶ್ನೆ ಬಿಗಿವ ಜೊಂಪು?
ಕಬ್ಬಿಣದ ತೂಕಡಿಕೆ?

ಜಗ್ಗಿದ ಕುಗ್ಗಿದ
ಯಾವುದೋ ಭಾವವೆಳೆ–
ನಿನ್ನ ಪುರಾತನ ಜತನದಿಂದ
ಯಾತನೆಯ ನೇಯ್ಗೆ
ಇಲ್ಲಿನ ಮಗ್ಗದೊಳಗೆ

ಗುರುತ್ವ ಶೂನ್ಯದ
ಈ ಕೊಂಡಿಯಲಿ
ತಬ್ಬಲಿಯ ನರಳಿಕೆ
ತಬ್ಬಿಬ್ಬುಗೊಳಿಸುತ್ತಲೆ ಪೊರೆವ
ಔಷಧಿಯ ಮತ್ತಿನಲಿ
ಕ್ಷೀಣವಾಗುತ್ತಿದೆ



ಹಕ್ಕಿಯ ಹಿಂಡಿನ ಹಿಂದೆ
ಮರೆಯಾಗುತ್ತಿವೆ
ನಿರಾಕಾರದ ಮೋಡಗಳು

**–ಆರ್. ಪವಿತ್ರಾ ಪ್ರಿಯಭಾಷಿಣಿ**



ರೇಖಾ ಚಿತ್ರಗಳು:
ವಿಜಯಶ್ರೀ ಹಾಲಾಡಿ



## ಅಂದವಿದೆ ಚೆಂದವಿದೆ...



ಅಂದವಿದೆ
ಚೆಂದವಿದೆ
ಮಕರಂದವಿದೆ
ಹೂವು ಹೂವಲೂ
ಚೆಲುವಿದೆ ಊರೂರಲೂ
ಕಾಲೂರಲು

ಗಾಳಿಯಿದೆ
ಮಳೆಯಿದೆ
ಮರಕು ನೆರಳಿದೆ

ಹೆದರಿ ಮುದುರಿ
ಪುಕ್ಕ ಹಕ್ಕಿ
ಆಕಾಶಕೆ ಹಾರಿದೆ

ಬದುಕಿದೆ
ಬವಣೆಯಲ್ಲೆ
ಅದು ನರಳಿದೆ

ಸತ್ತವರನೆ ಸಾಯಿಸಿ
ಸುಖಿಸಿ
ಮೂರಾಬಟ್ಟೆ
ಊರೆ ಬೆತ್ತಲಾಗಿದೆ

ಮಿಣುಕು ಮಿಂಚು
ಕೊಂಚ ಕೂಡ ಮಿಸುಗದಂತೆ
ಹಾಡುಹಗಲೆ ಕತ್ತಲಾಗಿದೆ
ಗಡ್ಡವಷ್ಟೆ ಬೆಳೆದು
ಬೆಳ್ಳಗಾಗಿದೆ
ಸಾರು ಕೂಡ ನೀರಿಗಿಂತ
ತೆಳ್ಳಗಾಗಿದೆ

**–ಎಚ್ ಪಟ್ಟಾಭಿರಾಮ ಸೋಮಯಾಜಿ**

## ಮೂರು ತಲೆಮಾರು

ನನ್ನಜ್ಜ ಸಾವುಕಾರನ ಮನೆಯ ಜೀತ ಮಾಡುತ್ತಾ
ಹಸು ಎಮ್ಮೆ ಕುರಿಗಳನು ಕಾದು
ಕೊಟ್ಟಿಗೆಯಲಿ ಕೂತು ಹಳಸಿದ್ದು ಉಣ್ಣುತ್ತಿದ್ದಾಗ
ಜಗತ್ತಿನಲ್ಲಿ ಎಲ್ಲವೂ ಸರಿಯಿತ್ತು

ನನ್ನಪ್ಪ
ಬೆವರ ಜೊತೆಗೆ ರಕ್ತವನೂ ಬಸಿಯುತ್ತಾ
ಎರಡೆಕರೆ ಹೊಲವ ಮಳೆಗೆ ಉತ್ತು
ಜೋಪಡಿಯ ಕಟ್ಟಿ ಬುಡ್ಡಿ ದೀಪ ಹಚ್ಚಿದಾಗ

ಜಗತ್ತಿನ ನೆಮ್ಮದಿ ಹೋಯಿತು
ನಾನು
ನಡೆದು ಶಾಲೆಗೆ ಹೋಗುತ್ತಾ
ಹಸಿವು ಬರಿಗಾಲುಗಳ ಮರೆತು
ಮಾತನಾಡಲು ಕಲಿತಾಗ
ಜಗತ್ತಿನ ಎಲ್ಲವೂ ಹಾಳಾಯಿತು



ನಾವು ದುಡಿಯತ್ತಲೇ ಇರಬೇಕಿತ್ತು
ಮಾತಾಡಲು ಕಲಿತದ್ದೇ ಮುಳುವಾಯಿತು

**–ಸಂತೋಷ್ ನಾಯಕ್ ಆರ್**

ನೆನಪು

# ಸಿದ್ಧಲಿಂಗಯ್ಯ ದೆಹಲಿಗೆ ಬಂದು ಹೋದ ಒಂದು ಪುರಾತನ ಪ್ರಸಂಗವು

–ಡಿ.ಎಸ್. ನಾಗಭೂಷಣ

ಚಿತ್ರಗಳು: ಬಿ.ಜಿ.ಗುಜ್ಜಾರಪ್ಪ



**ನಾ**ನು ೧೯೭೪ರ ಕೊನೆಯಿಂದ ೧೯೮೧ರ ಕೊನೆವರೆಗೆ ಸುಮಾರು ಎಂಟು ವರ್ಷಗಳ ಕಾಲ ದೆಹಲಿಯಲ್ಲಿದ್ದೆ. ಅಲ್ಲಿನ ಆಕಾಶವಾಣಿಯ ಅಖಿಲ ಭಾರತ ಸುದ್ದಿಸೇವಾ ವಿಭಾಗದ ಕನ್ನಡ ಘಟಕದಲ್ಲಿ ನನ್ನದು ಅನುವಾದಕ/ವಾರ್ತಾವಾಚಕನ ಕೆಲಸ. ಈ ಅವಧಿಯಲ್ಲಿ ನನ್ನ ಹಲವು ಬಂಧುಗಳು ಮತ್ತು ಗೆಳೆಯರು ದೆಹಲಿಗೆ ಬಂದು ನನ್ನ ಮನೆಯಲ್ಲಿದ್ದು ಹೋಗಿದ್ದಾರೆ. ಅವರಲ್ಲಿ ಕವಿ ಸಿದ್ಧಲಿಂಗಯ್ಯನವರ ಭೇಟಿ ಅವರ ವ್ಯಕ್ತಿತ್ವದಂತೆಯೇ ಅನನ್ಯವೂ ವಿಶಿಷ್ಟವೂ ಆಗಿ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ.

ಅದು ೧೯೭೭ ಅಥವಾ ೭೮ ಇರಬಹುದು. ಬಹುಶಃ ಹಿತವಾದ ಹವಾಮಾನ ಇರುವ ಮಾರ್ಚ್ ಅಥವಾ ಅಕ್ಟೋಬರ್ ಇರಬೇಕು. ಒಂದು ದಿನ ನನಗೆ ಸಮಾಜವಾದಿ ಮಿತ್ರ ಕಾಳೇಗೌಡ ನಾಗವಾರರಿಂದ ಒಂದು ಪತ್ರ ಬಂತು. ಅದರಲ್ಲಿ 'ಹೊಲೆಮಾದಿಗರ ಹಾಡು' ಕವಿ ಸಿದ್ಧಲಿಂಗಯ್ಯ ಆಕಾಶವಾಣಿಯ ಒಂದು ಹುದ್ದೆಗಾಗಿ ಯುಪಿಎಸ್‌ಸಿ ಸಂದರ್ಶನ ಎದುರಿಸಲು ದೆಹಲಿಗೆ ಬರುತ್ತಿರುವುದಾಗಿಯೂ, ಅವರಿಗೆ ಎರಡು ಮೂರು ದಿನದ ವಸತಿ ಒದಗಿಸಿ ಜೋಪಾನವಾಗಿ ನೋಡಿಕೊಂಡು ಕಳಿಸಿಕೊಡಬೇಕೆಂದು ಕೋರಿದ್ದರು. ಆ ಹೊತ್ತಿಗೆ ನಾನು 'ಹೊಲೆಮಾದಿಗರ ಹಾಡು' ಸಂಗ್ರಹವನ್ನು ಓದಿ ಸಿದ್ಧಲಿಂಗಯ್ಯನವರ ಅಭಿಮಾನಿಯಾಗಿದ್ದೆ. ಆದರೆ ಅವರನ್ನು ನೋಡಿರಲಿಲ್ಲ. ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ಸಮಾಜವಾದಿ ಯುವಜನ ಸಭಾದಲ್ಲಿ, ನಂತರದ ಬೂಸಾ ಚಳುವಳಿಯಲ್ಲಿ ಅವರ ಸಾಹಸಗಳ ಬಗ್ಗೆ ಕೇಳಿದ್ದೆ. ಈಗ ಅವರು ಸಿಪಿಎಂ ಪಕ್ಷ ಸೇರಿದ್ದಾರೆಂದೂ ತಿಳಿದಿತ್ತು. ಅವರೀಗ ನನ್ನ ಮನೆಗೇ ಬಂದು ಉಳಿಯುತ್ತಾರೆಂಬ ಸುದ್ದಿಯಿಂದ ರೋಮಾಂಚಿತನಾದೆ. ಆದರೆ ಅವರು ಬರುವ ನಿರ್ದಿಷ್ಟ ದಿನಾಂಕವನ್ನು ಕಾಳೇಗೌಡರು ತಿಳಿಸದೇ ಇದ್ದುದರಿಂದ ದಿನ ಕಳೆದಂತೆ ನನ್ನ ದಿನನಿತ್ಯದ ವ್ಯವಹಾರಗಳ ಮಧ್ಯೆ ಆ ರೋಮಾಂಚನದ ತೀವ್ರತೆ ಕಡಿಮೆ ಆಗತೊಡಗಿತ್ತು.

ಹೀಗಿರುವಾಗ ಒಂದು ದಿನ ಮಧ್ಯಾಹ್ನ ಸುಮಾರು ಒಂದು ಘಂಟೆಯ ಹೊತ್ತಿಗೆ ನಾನು ಕನ್ನಡ ವಾರ್ತಾವಿಭಾಗದ ಕೊಠಡಿಯಲ್ಲಿ ಕಾರ್ಯನಿರತನಾಗಿದ್ದಾಗ, ನಮ್ಮ ಪ್ರಸಾರಭವನದ ಸ್ವಾಗತ ಕಛೇರಿಯಿಂದ ಕರೆಯೊಂದು ಬಂತು. ನನ್ನನ್ನು ಕಾಣಲು ಕರ್ನಾಟಕದಿಂದ ಒಬ್ಬರು ಬಂದಿದ್ದಾರೆಂದೂ, ಬಂದು ಅವರನ್ನು ತುರ್ತಾಗಿ ಕಾಣಬೇಕೆಂದೂ ನನಗೆ ತಿಳಿಸಲಾಯಿತು. ಅಂದು ಮಧ್ಯಾಹ್ನ ೧.೧೦ರ ವಾರ್ತೆಗಳನ್ನು ನಾನೇ ಓದಬೇಕಾಗಿದ್ದುದರಿಂದ, ಬಂದಿರುವವರು ಸಿದ್ಧಲಿಂಗಯ್ಯನವರೆಂದೇ ಊಹಿಸಿದೆನಾದರೂ ತುರ್ತೇನೆಂದು ಗೊತ್ತಾಗದೆ ನಾನು ಸ್ವಲ್ಪ ಅವಸರದಲ್ಲಿ ಸಾಕಷ್ಟು ದೂರವೇ ಇದ್ದ ಸ್ವಾಗತ ಕಛೇರಿಯತ್ತ ಓಡಿದೆ. ಅಲ್ಲಿ ಹೋಗಿ ನೋಡಿದರೆ ಕರೆ ಮಾಡಿದ ಸ್ವಾಗತಕಾರ ಸಹಾಯಕ ಎಲ್ಲೋ ಎದ್ದುಹೋಗಿದ್ದ. ಸ್ವಾಗತ ಕೊಠಡಿ ತುಂಬ ಇದ್ದ ಜನರತ್ತ ಒಮ್ಮೆ ಕಣ್ಣು ಹಾಯಿಸಿ ನೋಡಿದರೆ ನನ್ನ ಕಲ್ಪನೆಯ ಸಿದ್ಧಲಿಂಗಯ್ಯನವರಂತೆ ಕಾಣುವ ಆಸಾಮಿ ಅಲ್ಲಿ ಯಾರೂ ಇರಲಿಲ್ಲ. ಆಗಲೇ ಸಮಯ ಒಂದು ಘಂಟೆ ಆಗುತ್ತಿದ್ದುದರಿಂದ ನಾನು ವಾರ್ತೆಗಳಿದ್ದ ಹಾಳೆಗಳನ್ನು ಹಿಡಿದು ಸ್ಟುಡಿಯೋದತ್ತ ಧಾವಿಸಿದೆ. ವಾರ್ತೆಗಳನ್ನು ಓದಿ ನಮ್ಮ ವಿಭಾಗದ ಕೊಠಡಿಗೆ ಹೋಗಿ ಹಾಳೆಗಳ ಕಟ್ಟನ್ನು ಕಡತ ಮಾಡುತ್ತಿರುವಂತೆಯೇ ಸ್ವಾಗತ ಕೊಠಡಿಯಿಂದ ಮತ್ತೊಂದು ಕರೆ ಬಂತು. ಈಗ ಸಿದ್ಧಲಿಂಗಯ್ಯನವರೇ ಮಾತನಾಡುತ್ತಿದ್ದರು. ಅವರು 'ಬೇಗ ಬನ್ನಿ ಸಾರ್!' ಎಂದಷ್ಟೇ ಹೇಳಿ ಫೋನ್ ಇಟ್ಟುಬಿಟ್ಟರು. ಅವರ ಆ ಮಾತಿನಲ್ಲಿ ಬೇಗ ಬರದಿದ್ದರೆ ಆಗುವ ಅನಾಹುತಕ್ಕೆ ತಾವು ಹೊಣೆಯಲ್ಲ ಎಂಬ ದನಿಯೂ ಇದ್ದಂತಿತ್ತು. ಮೊದಲೇ 'ಇಕ್ರಲಾ ವದೀರ್ಲ...' ಎಂದು ಅಬ್ಬರಿಸಿರುವ ಕವಿ! ಏನೂ ಗೊತ್ತಾಗದೆ ನಾನು ಸ್ವಲ್ಪ ಗಾಬರಿಯಿಂದಲೇ ನನ್ನ ಉಳಿದ ಔಪಚಾರಿಕತೆಗಳನ್ನು ನನ್ನ ಸಹೋದ್ಯೋಗಿಯೊಬ್ಬರಿಗೆ ಒಪ್ಪಿಸಿ ಮತ್ತೆ ಸ್ವಾಗತ ಕಛೇರಿಯತ್ತ ಧಾವಿಸಿದೆ. ನಾನು ಹೋದ ಕೂಡಲೇ ಸ್ವಾಗತ ಸಹಾಯಕ 'ವೋ ಹೈ ಆಪ್‌ಕಾ ಮೆಹಮಾನ್' ಎಂದು ಕುರ್ಚಿಯೊಂದರಲ್ಲಿ ಗುಬ್ಬಚ್ಚಿಯಂತೆ ಮುದುರಿ ಕೂತಿದ್ದ ಪ್ರೌಢಶಾಲಾ ವಿದ್ಯಾರ್ಥಿಯಂತಿದ್ದ ಹುಡುಗನೊಬ್ಬನ್ನು ಬೊಟ್ಟು ಮಾಡಿ ತೋರಿಸಿದ. ನನ್ನ ಕಲ್ಪನೆಯೆಲ್ಲ ವೇಗವಾಗಿ ವಿಸರ್ಜನೆಯಾಗುವ ಗೊಂದಲದಲ್ಲಿ ನಾನಿರುವಾಗಲೇ ಆ ಬಾಲಕ 'ನಾಗಭೂಷಣ್‌ರಾ ಸಾರ್? ನಾನು ಸಿದ್ಧಲಿಂಗಯ್ಯ' ಎಂದು ನನ್ನತ್ತ ಬಂದಾಗ ನಾನು ನಿಜವಾಗಿ ಸುಸ್ತಾಗಿದ್ದೆ. ನಾನು ಕ್ರಾಂತಿ ಕವಿ ಸಿದ್ಧಲಿಂಗಯ್ಯನವರನ್ನು ಕಲ್ಪಿಸಿಕೊಂಡಿದ್ದುದೇ ಬೇರೆ ರೀತಿ, ಎತ್ತರದ ಪೈಲ್ವಾನ ಥರ, ದಪ್ಪ ಮೀಸೆಯ ಬಿರುಗಣ್ಣುಗಳ ಯುವಕನನ್ನು. ಇಲ್ಲಿ ನೋಡಿದರೆ ಚಿಗುರು ಮೀಸೆ ಗಡ್ಡಗಳ ಹದಿಹರೆಯದ ಪೋರ!



ನನಗೆ ಎದೆ ಸ್ವಲ್ಪ ಹಗುರಾದಂತಾಗಿ ಸಿದ್ಧಲಿಂಗಯ್ಯ ಅವರ ಕೈಹಿಡಿದು ಕಛೇರಿಯ ಹೊರಗೆ ಕರೆದುಕೊಂಡು ಹೋಗುತ್ತಿದ್ದಂತೆ ಅವರು ನನ್ನ ಜುಬ್ಬಾ ಜಗ್ಗಿ ಆತಂಕದಿಂದ 'ಸ್ವಲ್ಪ ಅರ್ಜೆಂಟ್ ಸಾ..' ಎಂದು ತನ್ನ ಬಲಗೈನ ಮಧ್ಯದೆರಡು ಬೆರಳುಗಳನ್ನು ಮಡಚಿ ತುರ್ತು ಅಗತ್ಯ ಸೂಚನೆ ನೀಡಿದರು. ಪರಿಸ್ಥಿತಿಯ ಅಪಾಯವನ್ನರಿತ ನಾನು ಹತ್ತಿರದಲ್ಲೆಲ್ಲೂ ಶೌಚಗೃಹವಿಲ್ಲದುದು ಗೊತ್ತಾಗಿ ಅರೆಕ್ಷಣ ಗಾಬರಿಯಾದೆ. ಶೌಚಗೃಹ ಹತ್ತಿರದಲ್ಲಿದ್ದುದು ಪ್ರಸಾರ ಭವನ ಕಟ್ಟಡದ ಒಳಗೆ. ಒಳಗೆ ಹೋಗಬೇಕಾದರೆ ಕಾರಣ ಬರೆದು ಒಪ್ಪಿಸಿ ಪಾಸ್ ಪಡೆಯಬೇಕು. ಇವರ ಸ್ಥಿತಿ ನೋಡಿದರೆ ಚಿಂತಾಜನಕವಾಗಿದ್ದಂತಿದೆ. ನಾನು ಕೂಡಲೇ ಕಟ್ಟಡದ ಮುಖ್ಯ ದ್ವಾರದಲ್ಲಿದ್ದ ನನ್ನ ಪರಿಚಿತ ಕಾವಲು ಸಿಬ್ಬಂದಿಗೆ ಪರಿಸ್ಥಿತಿ ವಿವರಿಸಿದ ಕೂಡಲೇ ಆತ ನಾನು ಈವರೆಗೆ ನೋಡದಿದ್ದ, ಆ ಬಾಗಿಲ ಹಿಂಬದಿಯಲ್ಲೇ ಇದ್ದ ಒಂದು ಸಣ್ಣ ಶೌಚಾಲಯದತ್ತ ಬೊಟ್ಟು ಮಾಡಿದ. ಸಿದ್ಧಲಿಂಗಯ್ಯ ತಮ್ಮ ಹೆಗಲು ಚೀಲವನ್ನು ನನ್ನತ್ತ ಎಸೆದು ಆ ಶೌಚ ಗೃಹವನ್ನು ಹೊಕ್ಕರು. ಐದು ನಿಮಿಷಗಳ ನಂತರ ಅಂಗಿಯಲ್ಲಿ ಕೈ ಒರೆಸಿಕೊಳ್ಳುತ್ತಾ ಹೊರಬಂದು ಮುಖವರಳಿಸುತ್ತಾ, 'ಸದ್ಯ ಬಾಂಬ್ ಅಲ್ಲಿ ಬಿದ್ದು ಆಕಾಶವಾಣಿ ಹೆಡಾಫೀಸ್ ಮುಂದೆ ಕ್ರಾಂತಿಯಾಗುವುದು ತಪ್ಪಿತು ಸಾರ್!' ಎಂದು ನನ್ನ ಪಾಲಿನ ತಮ್ಮ ಮೊದಲ ಜೋಕ್ ಹೊಡೆದರು! ನಾನು 'ಅದರ ಕೀರ್ತಿ ಈ ದ್ವಾರಪಾಲಕನಿಗೆ ಸಲ್ಲಬೇಕು' ಎಂದಾಗ ಅವರು ಆ ದ್ವಾರಪಾಲಕನ ಬಳಿ ಹೋಗಿ ಆತನ ಕೈಹಿಡಿದು ಕುಲುಕಿ 'ತ್ಯಾಂಕ್ಯೂ' ಎಂದರು. ಆತ ಇದೆಲ್ಲ ಏನೆಂದು ಗೊತ್ತಾಗದೆ ನನ್ನತ್ತ ಪಿಳಿಪಿಳಿ ಕಣ್ಣು ಬಿಡುತ್ತಾ ನಸುನಕ್ಕ.. ಸಿದ್ಧಲಿಂಗಯ್ಯ ಅಲ್ಲಿಂದ ನನ್ನ ಬಳಿ ಧಾವಿಸಿ, 'ಬಂಡಿ ಸುರಿದದ್ದು ಆಯಿತು ಸಾರ್! ಈಗ ಅರ್ಜೆಂಟಾಗಿ ಬಂಡಿ ಏರಿಸಬೇಕು ಸಾರ್!! ಬೆಳಿಗ್ಗೆ ರೈಲ್ವೇ ಸ್ಟೇಷನ್ ಹತ್ರ ಎರಡು ತಂಗಳು ಸಮೋಸ ತಿಂದು ಹೋಗಿದ್ದು... ಅದಕ್ಕೇ ಹೊಟ್ಟೆ ಹಿಂಗಾಗಿದ್ದು' ಎಂದರು. ಸಿದ್ಧಲಿಂಗಯ್ಯ ಈಗ ನನಗೆ ಬೆಂಕಿ ಕಾರುವ ಕ್ರಾಂತಿ ಕವಿ ಆಗಿರಲಿಲ್ಲ, ಮನಸ್ಸು ನಿರಾಳವಾಗಿ ಆ ಕ್ಷಣವೇ ನನ್ನ–ಅವರ ನಡುವಣ ಅಂತರ ಮಾಯವಾಗಿ ಅವರು ನನಗೆ ಆತ್ಮೀಯರಾದರು. ಮುಂದೆ ಎಂದೋ ಕಂಡುಕೊಂಡಂತೆ ನನ್ನ ಹಿರಿಯರು ಬಂದಿದ್ದುದು ಅವರ ಹಳ್ಳಿ ಮಂಚನಬೆಲೆಯ ಪಕ್ಕದಿಂದಲೇ! ಮಾಗಡಿ ಸನಿಹದ ಉಜ್ಜನಿಯಿಂದ. ಹಾಗಾಗಿಯೇ ಅವರ ಮತ್ತು ನನ್ನ ಕನ್ನಡದ ನುಡಿಗಟ್ಟು ಒಂದೇ ಆಗಿತ್ತು.

ನಾನು ಅವರು ಬೆಂಗಳೂರಿನಿಂದ ಇದೀಗ ತಾನೇ ರೈಲು ಇಳಿದು ನನ್ನಲ್ಲಿಗೆ ಬಂದಿದ್ದಾರೆ ಎಂದು ತಿಳಿದಿದ್ದರೆ ಇದೇನೋ ಬೇರೆ ಹೇಳುತ್ತಿದ್ದಾರೆ ಎಂದು ಗೊಂದಲಗೊಂಡು, 'ನೀವು ಡೆಲ್ಲಿಗೆ ಬಂದದ್ದು ಯಾವಾಗ ಸಿದ್ಲಿಂಗಯ್ನೋರೆ?' ಎಂದು ಕೇಳಿದೆ. ಅವರು 'ನಿನ್ನೆ ಸಾಯಂಕಾಲ ಬಂದೆ ಸಾರ್, ಸಾಯಂಕಾಲದ ಹೊತ್ತು ನೀವು ಸಿಗದಿದ್ದರೆ ರಾತ್ರಿ ಕಳೆಯೋದೆಲ್ಲಿ ಅಂತ ಯೋಚ್ನೆ ಮಾಡಿ, ನಂಗೆ ಮದ್ರಾಸ್‌ನಿಂದ ಜೊತೆಯಾಗಿದ್ದ ಒಬ್ರು ಸಾಬ್ರ ವ್ಯಾಪಾರಿ ಜೊತೆ ರೈಲ್ವೇಸ್ಟೇಷನ್ ಎದುರುಗಿನ ಒಂದು ಹೋಟೆಲ್ ಸೇರ್ಕಂಡಿದ್ದೆ ಸಾರ್. ಬೆಳಿಗ್ಗೆ ಹತ್ತೂವರೆಗೆ ಇಂಟರ್‌ವ್ಯೂ ಇದ್ದದ್ರಿಂದ ಎದ್ದು ಮಕ ತೊಳ್ಕೊಂಡಿದ್ದೆ.. ಅಲ್ಲೇ ಎರಡು ಸಮೋಸಾ ತಿಂದು ಯುಪಿಎಸ್ಸಿ ಕಡೆ ಬಸ್ ಹತ್ತಿಬಿಟ್ಟೆ ಸಾರ್!' ಎಂದರು.

ಹಾಗಾದರೆ ಇವರು ಎಲ್ಲ ಮುಗಿಸಿಕೊಂಡೇ ಬಂದಿದ್ದಾರೆ ಎಂದು ತಿಳಿದು ಅವರನ್ನು ನಮ್ಮ ಕಛೇರಿಯಿದ್ದ ಪಾರ್ಲಿಮೆಂಟ್ ಸ್ಟ್ರೀಟ್‌ನ ಒಂದು ರಸ್ತೆ ಆಚೆ ಇದ್ದ ಯುಎನ್‌ಐ ಕ್ಯಾಂಟೀನ್‌ನತ್ತ ಕರೆದುಕೊಂಡು ನಡೆದೆ. ದಾರಿಯಲ್ಲಿ ಕುತೂಹಲದಿಂದ 'ಇಂಟರ್‌ವ್ಯೂ ಹೇಗಾಯ್ತು?' ಎಂದು ಕೇಳಿದೆ.. ಅದಕ್ಕವರು 'ಈ ರೇಡಿಯೋ ಪಾಡಿಯೋ ನಮಗಲ್ಲ ಬಿಡಿ ಸಾರ್! ಇದೆಲ್ಲ ಬ್ರಾಂಬ್ರಿಗೇ ಸರಿ... ಹೋಗಿ ಬರೋ ಖರ್ಚು ಕೊಡ್ತಾರಲ್ಲಾ, ಡೆಲ್ಲಿ ನೋಡ್ಕೊಂಡ್ ಹೋಗಾಣಾಂತ ಬಂದೆ ಅಷ್ಟೇ ಸಾರ್' ಎಂದರು. ನಾನಾಗ 'ನಾನೇನು ಬ್ರಾಹ್ಮಣ ಅಲ್ಲರೀ...ಈಗ ಆಕಾಶವಾಣಿಯಲ್ಲಿ ಎಲ್ರೂ ಇದಾರೆ' ಎಂದೆ. ಅದಕ್ಕೆ ತಕ್ಷಣ ಸಿದ್ದಲಿಂಗಯ್ಯ 'ಅದ್ಕೇ ನೀವು ಫಸ್ಟು ರೆಸಿಪ್ಶನ್ ಆಫೀಸಿಗೆ ಬಂದಾಗ ಅದು ನೀವು ಅಂತ ಗೊತ್ತಾಗ್ಲಿಲ್ಲ. ನಾಗಭೂಷಣ್ ಅಂದರೆ ಬ್ರಾಮಿನ್, ಕೆಂಪಗೆ ಎತ್ತರವಾಗಿ ಕ್ರಾಪ್ ತೆಗೆದು ನೀಟಾಗಿರ್ತಾರೆ ಅಂದುಕೊಂಡ್ರೆ ನೀವು ಒಳ್ಳೆ ಸಾದು ಕಪ್ಪು, ಗಡ್ಡ ಬೇರೆ ಬಿಟಕೊಂಡು ಖಾದಿ ಜುಬ್ಬಾದಲ್ಲಿದೀರಿ!' ಎಂದು ನಕ್ಕರು. ನಾನೂ ಅವರನ್ನು ಕಲ್ಪಿಸಿಕೊಂಡಿದ್ದ ರೀತಿಯಿಂದಾಗಿ ಆಗ ಗುರುತಿಸದೇ ಹೋದ ಕಾರಣವನ್ನು ವಿವರಿಸಿದೆ. (ಈ ಪ್ರಸಂಗವನ್ನು ಸಿದ್ಧಲಿಂಗಯ್ಯ ತಮ್ಮ 'ಊರುಕೇರಿ'ಯ ಎರಡನೇ ಸಂಪುಟದಲ್ಲಿ ಸಂಕ್ಷಿಪ್ತವಾಗಿ ಬರೆದಿದ್ದಾರೆ.)

ನಂತರ ಸಿದ್ಧಲಿಂಗಯ್ಯ ನಾಟಕೀಯವಾಗಿ ದನಿ ತಗ್ಗಿಸಿ, 'ನಿಮಗೂ ಕಾಳೇಗೌಡರಿಗೂ

ಏನು ಸಂಬಂಧ ಸಾರ್?' ಎಂದರು. ನಾನು 'ಅಂತಹ ದೊಡ್ಡ ಸಂಬಂಧವೇನಿಲ್ಲ, ಸಮಾಜವಾದದ ಸಂಬಂಧ ಅಷ್ಟೆ, ಅವರನ್ನ ಒಂದೋ ಎರಡು ಬಾರಿನೋ ನೋಡಿರಬಹುದು ಅಷ್ಟೆ' ಎಂದೆ, ಅದಕ್ಕವರು, 'ಎರಡೇ ಸಲವಾದ್ರೂ ನಿಮ್ಮನ್ನ ಚೆನ್ನಾಗಿ ನೋಡವರೆ ಅವರು' ಎನ್ನುತ್ತಾ 'ಮಹಾ ಸೌಂದರ್ಯಾರಾಧಕರು ಅವರು ಸಾರ್, ನಿಮ್ಮನ್ನು ಯಾವಾಗಲೂ ಕಪ್ಪು ಸುಂದರ, ಬ್ಲ್ಯಾಕ್ ಬ್ಯೂಟಿ ಅಂತ ಕರೀತಿರ್ತಾರೆ ಸಾರ್' ಎಂದು ಸೇರಿಸಿದರು.



ನಾನು ಅದು ಅವರು ಲೋಹಿಯಾ ಅವರ ಸೌಂದರ್ಯ ಮತ್ತು ಮೈಬಣ್ಣ ಲೇಖನ ಓದಿದ ಹ್ಯಾಂಗ್‌ಓವರ್ ಇರಬೇಕು ಎಂದು ನಕ್ಕೆ. ಸಿದ್ದಲಿಂಗಯ್ಯ ಕೂಡಲೇ ಲೋಹಿಯಾ 'ಕುಳ್ಳರ ಬಗ್ಗೆ ಏನೂ ಬರೆದಿಲ್ವಾ ಸಾರ್? ಬರೆದಿದ್ರೆ ನಮ್ಮಂಥೋರು ಎದೆ ಸೆಟೆಸಿಕೊಂಡು ನಡೀಬೋದಿತ್ತು' ಎನ್ನುತ್ತಾ ಜೋರಾಗಿ ನಕ್ಕರು. ಅದಕ್ಕೆ ನಾನು 'ಲೋಹಿಯಾನೇ ಮಹಾಕುಳ್ಳರು ಸಿದ್ದಿಂಗಯ್ಯ' ಎಂದೆ. ಸಿದ್ದಲಿಂಗಯ್ಯ 'ಹೌದಾ ಸಾರ್? ನಮ್ಮ ಕುಲಕ್ಕೆ ಒಂದು ಪ್ಲಸ್ ಪಾಯಿಂಟ್, ನಾವೂ ತಲೆ ಎತ್ತಿ ನಡೀಬಹುದು ಬಿಡಿ ಸಾರ್' ಎಂದಾಗ ನಗುವ ಪಾಳಿ ನನ್ನದಾಯಿತು.

ಅಷ್ಟರಲ್ಲಿ ಯುಎನ್‌ಐ ಕ್ಯಾಂಟೀನು ಬಂದಿತ್ತು, ಅದು ಯುಎನ್‌ಐ ವಾರ್ತಾಸಂಸ್ಥೆಯ ಕಛೇರಿಯಿದ್ದ ಹಳೇ ಬಂಗಲೆಯೊಂದರ ಹಿಂಭಾಗದ ಗೋಡೆಗೆ ಐಯ್ಯರ್ ಕುಟುಂಬವೊಂದು ವಪ್ಪಾರ ಹಾಕಿಕೊಂಡು ನಾಲ್ಕಾರು ಜನ ಸಹಾಯಕರೊಂದಿಗೆ ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ನಡೆಸುತ್ತಿದ್ದ ದಕ್ಷಿಣ ಭಾರತೀಯ ತಿನಿಸುಗಳ ಹೊರಾಂಗಣ ಉಪಾಹಾರ ಸ್ಥಳ. ಅಲ್ಲಿಗೆ ಸುತ್ತಮುತ್ತಲ ಕಛೇರಿಗಳಿಂದಲ್ಲದೆ ಸಂಜೆಯ ಹೊತ್ತಿಗೆ ದೆಹಲಿಯ ಹಲವು ಜನ ಬುದ್ಧಿಜೀವಿಗಳು, ಲೇಖಕರು, ರಂಗನಟರು, ಪತ್ರಕರ್ತರು, ರಾಜಕಾರಣಿಗಳು ಅಲ್ಲಿಗೆ ದೋಸೆ–ವಡೆ ತಿನ್ನಲು ಬರುತ್ತಿದ್ದರು. ನಾವು ಕೆಲವು ಜನ ಸಮಾಜವಾದಿ ಮಿತ್ರರು ಸಂಜೆ ಸೇರಲು ಆಯ್ದುಕೊಳ್ಳುತ್ತಿದ್ದುದೂ ಇದರ ಆವರಣದ ಹುಲ್ಲುಗಾವಲನ್ನೇ. ಈ ಜಾಗ ನೋಡಿ ಸಿದ್ದಲಿಂಗಯ್ಯನವರಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಅಂದು ಅಲ್ಲಿಗೆ ರಾಷ್ಟ್ರೀಯ ಬುಕ್ ಟ್ರಸ್ಟ್‌ನ ಶಾ.ಬಾಲೂರಾವ್ ಕೂಡ ಬಂದಿದ್ದರು. ಸಿದ್ದಲಿಂಗಯ್ಯನವರಿಗೆ ಅವರನ್ನು ಪರಿಚಯ ಮಾಡಿಕೊಟ್ಟೆ. ಸಿದ್ದಲಿಂಗಯ್ಯ, ಅವರಿಗೆ ತಮ್ಮ ಕವನ ಸಂಕಲನದ ಪ್ರತಿಯೊಂದನ್ನು ನೀಡಿದರು. ಕವಿಯನ್ನು ಕಂಡು ಬಾಲೂರಾವ್ ಸಂತೋಷಪಟ್ಟು ಅವರನ್ನು ತಮ್ಮ ಕಛೇರಿಗೆ ಆಹ್ವಾನಿಸಿದರು.

ನಂತರ ಸಿದ್ದಲಿಂಗಯ್ಯ ಮತ್ತು ನಾನು ಹೊಟ್ಟೆ ತುಂಬ ತಿಂಡಿ ತಿಂದೆವು. ಅಂದಿಗೆ ನನ್ನ ಕೆಲಸದ ಎರಡು ಪಾಳಿಗಳೂ ಮುಗಿದಿದ್ದುದರಿಂದ 'ಸಿದ್ದಲಿಂಗಯ್ಯನವರೇ, ಇನ್ನು ಮನೆಗೆ ಹೋಗೋಣ... ನಡೀರಿ ಮೊದಲು ನಿಮ್ಮ ಹೋಟೆಲ್ ರೂಂ ಖಾಲಿ ಮಾಡಿಕೊಂಡು ಬರೋಣ' ಎಂದೆ. ಅದಕ್ಕವರು 'ರೂಂ ಬೆಳಿಗ್ಗೇನೇ ಖಾಲಿ ಮಾಡಿಕೊಂಡೇ ಇಂಟರ್‌ವ್ಯೂಗೆ ಹೋಗಿದ್ದು ಸಾರ್' ಎಂದು ಉತ್ತರಿಸಿದಾಗ ನಾನು ತಬ್ಬಿಬ್ಬಾದೆ.

'ಹಾಗಾದರೆ ನಿಮ್ಮ ಲಗ್ಗೇಜ್ ಎಲ್ಲಿ?'

'ಇಲ್ಲೇ ಐತಲ್ಲ ಸಾರ್ ನನ್ನ ಚೀಲ' ಎಂದು ತಮ್ಮ ಹೆಗಲು ಚೀಲ ತೋರಿಸಿ, 'ನಮ್ಮಂಥ ಕಾಮ್ರೇಡುಗಳಿಗೆ ಏನು ಬೇಕು ಸಾರ್? ಒಂದು ಜೊತೆ ಬಟ್ಟೆ ಮತ್ತು ಒಂದು ಟವಲ್, ಸೋಪು, ಟೂತ್ ಬ್ರಷ್' ಎಂದಾಗ ನಾನು ಪಿಳಿಪಿಳಿ ಕಣ್ಣು ಬಿಡುವುದರ ಹೊರತಾಗಿ ಮತ್ತೇನೂ ಮಾಡಲಾಗದೆ 'ಹಾಗಾದ್ರೆ ಮನೆ ಕಡೆ ಹೊರಡೋಣ' ಎಂದೆ. ಅದಕ್ಕವರು 'ಈಗ್ಲೇ ಮನೆಗೆ ಹೋಗಿ ಏನು ಮಾಡುವುದು? ಇವೊತ್ತು ಸ್ವಲ್ಪ ಡೆಲ್ಲಿ ತೋರಿಸ್ಬಿಡಿ ಸಾರ್' ಎಂದರು.

'ಡೆಲ್ಲಿ ಹಂಗೆ ತೋರ್‍ಸಕ್ಕಾಗಲ್ಲ. ತುಂಬಾ ದೊಡ್ಡದು ಊರು. ನಾಳೆ ಬೆಳಿಗ್ಗೆ ಡೆಲ್ಲಿ ಟೂರಿಸಂ ಬಸ್ ಹತ್ತಿಸ್ತೀನಿ, ಅವರು ಎಲ್ಲ ತೋರುಸ್ತಾರೆ, ಈಗ ನಡೀರಿ ಮನೆಗೆ'

'ಅಯ್ಯೋ ಸಾರ್! ನಾಳೆ ಬೆಂಗಳೂರಿಗೆ ಹೋಗಬೇಕು ಸಾರ್'

'ನಾಳೆನಾ? ಬೆಂಗಳೂರೇನು, ನೀವು ತುಮಕೂರಿಗೆ ಹೋದಂಗಾ? ಏನಷ್ಟು ಅವಸರ?'

'ಕ್ರಾಂತಿಯ ಅವಸರ ಸಾರ್!'

ನನಗೆ ನಗು ಬಂತು. 'ಬೆಳಿಗ್ಗೆ ತಾನೇ ಕ್ರಾಂತಿ ವಿಫಲವಾಗಿದೆ. ಇಷ್ಟು ಬೇಗ ಮತ್ತೊಂದು ಪ್ರಯತ್ನವಾ?' ಅವರೂ ನಕ್ಕರು. 'ಟಿಕೆಟ್ ಬುಕ್ ಆಗಿದೆಯಾ?' ನಾನು ಕೇಳಿದೆ.

'ಅದೆಲ್ಲ ಬೂರ್ಜ್ವಾಗಳಿಗೆ ಸಾರ್! ಬೆಂಗಳೂರು ದಿಕ್ಕಿನ ಕಡೆ ಹೋಗೋ ರೈಲುಗಳಿಗೆ ಹತ್ತತಾ ಹೋಗೋದು ಅಷ್ಟೇ ಸಾರ್'

ನನಗೆ ನಿಜವಾಗಿಯೂ ಗಾಬರಿಯಾಯಿತು. ಹಿಂದೊಮ್ಮೆ ಮದ್ರಾಸ್‌ನಿಂದ ಭೂಪಾಲ್‌ವರೆಗೆ ಹೀಗೇ ಕಾದಿರಿಸದ ಬೋಗಿಯಲ್ಲಿ ಹೋಗಿ ಪಟ್ಟ ಕಷ್ಟಗಳು ನೆನಪಾಗಿ 'ಬೇಡ ಸಿದ್ದಲಿಂಗಯ್ಯ, ನಿಮ್ಮ ಕ್ರಾಂತಿಯ ಕನಸೇ ಹಾರಿಹೋಗುವಷ್ಟು ಕಷ್ಟ. ಕರ್ನಾಟಕ ಭವನದ ಶೆಟ್ಟಿಗೆ ಹೇಳಿ ಇನ್ನೊಂದೆರಡು ದಿನಕ್ಕೆ ಟಿಕೆಟ್ ಬುಕ್ ಮಾಡಿಸಿಕೊಡುವೆ.'

'ಅಯ್ಯೋ ನೀವೇನೂ ಯೋಚಿಸ್ಬೇಡಿ ಸಾರ್, ನಾನು ಇಲ್ಲೀಗ್ ಬಂದದ್ದೂ ಹಂಗೇನೇ'

ನನಗೆ ಮುಂದೆ ಮಾತೇ ಹೊರಡದೆ 'ಈಗ ಮುಖ್ಯವಾಗಿ ಏನು ನೋಡ್ಬೇಕು ಹೇಳಿ?' ಎಂದೆ. ಅದಕ್ಕೆ ಸಿದ್ದಲಿಂಗಯ್ಯ,–

'ಡೆಲ್ಲಿ ಅಂದರೆ ಸಾಬರ ದರ್ಬಾರು ಜಾಸ್ತಿ ಇತ್ತು ಅಲ್ವಾ ಸಾರ್? ಅದನ್ನ ಇವೊತ್ತಿಗೆ ಏನು ನೋಡಬಹುದೋ ಅಷ್ಟನ್ನ ತೋರುಸ್ಬಿಡಿ ಸಾರ್ ಸಾಕು' ಎಂದರು ನಗುತ್ತಾ.

ನಾನು ಅಂದು ಬೆಳಗಿನ ಪಾಳಿಗಾಗಿ ನಾಲ್ಕೂವರೆಗೆ ಎದ್ದು, ನಂತರ ಮಧ್ಯಾಹ್ನದ ಪಾಳಿಯನ್ನು ಮಾಡಿ ಸುಸ್ತಾಗಿತ್ತು. ಕಣ್ಣುಗಳು ಭಾರವಾಗಿ ಎಳೆಯುತ್ತಿದ್ದವು. ತಕ್ಷಣ ಬಸ್ ಹಿಡಿದು ಓಡಾಡುವುದು ಅಸಾಧ್ಯವೆನಿಸತೊಡಗಿತ್ತು, ನನ್ನ ಅದೃಷ್ಟಕ್ಕೆ ಸರಿಯಾಗಿ ಅಷ್ಟುಹೊತ್ತಿಗೆ ಯುಎನ್‌ಐ ಕ್ಯಾಂಟೀನಿಗಾಗಿ ದವಸ–ತರಕಾರಿ ಮೂಟೆಗಳನ್ನು ಹೊತ್ತ ಅವರ ವರ್ತನೆಯ ಆಟೋ ಬಂದು ಅಲ್ಲಿ ನಿಂತಿತು. ಅದು ಮೂಟೆಗಳನ್ನು ಇಳಿಸುತ್ತಿದ್ದಂತೆ ನಾನು ನನಗೆ ಚೆನ್ನಾಗಿ ಪರಿಚಯವಿದ್ದ ಆ ಕ್ಯಾಂಟೀನಿನ ಕಿರಿಯ ಐಯ್ಯರ್‌ಗೆ ನನ್ನ ಕಷ್ಟ ಹೇಳಿ, ನಮ್ಮ ಮನೆ ಕುತುಬ್‌ಮೀನಾರ್‌ಗೆ ಹತ್ತಿರದ ಹೌಸ್‌ಕಾಸ್‌ನಲ್ಲಿದ್ದುದರಿಂದ ಹತ್ತಿರದ ಹುಮಾಯೂನ್ ಸಮಾಧಿ, ನಂತರ ಕೆಂಪುಕೋಟೆ ತೋರಿಸಿ ಕುತುಬ್‌ಮಿನಾರ್‌ಗೆ ಬಿಡಲು ಆಟೋ ಬಾಡಿಗೆಗೆ ಕೊಡಲು ಕೋರಿದೆ. ಐಯ್ಯರ್ ಕೂಡಲೇ ಆಟೋದವನನ್ನು (ಆತನೂ ತಮಿಳನೇ) ಕರೆದು ಬಾಡಿಗೆ ನಿಗದಿ ಮಾಡಿ ಹೊರಡು ಎಂದ. ಸಿದ್ದಲಿಂಗಯ್ಯನವರಿಗೆ ನನ್ನ ಕಷ್ಟ ವಿವರಿಸಿ, ಆಟೋ ಹುಡುಗನಿಗೆ ಸಿದ್ದಲಿಂಗಯ್ಯನವರನ್ನು ಎರಡೂ ಕಡೆ ಕರೆದೊಯ್ದು ತೋರಿಸಿ ಐದು ಗಂಟೆಯೊಳಗಾಗಿ ಇಲ್ಲಿಗೇ ಬರುವಂತೆ ಹೇಳಿದೆ. ಆಟೋ ಹೋದೊಡನೆ ನಾನು ಯುಎನ್‌ಐ ಕಟ್ಟಡದ ಮುಂದಿನ ಸೊಗಸಾದ ಹುಲ್ಲು ಹಾಸಿನ ಮೇಲೆ ಸಿದ್ದಲಿಂಗಯ್ಯನವರ ಚೀಲವನ್ನು ತಲೆದಿಂಬಾಗಿಸಿಕೊಂಡು ಒರಗಿ ಕಣ್ಮುಚ್ಚಿದೆ.

ಮತ್ತೆ ಕಣ್ಣು ತೆರೆದದ್ದು ಸಿದ್ದಲಿಂಗಯ್ಯ ಬಂದು ಎಚ್ಚರಿಸಿದಾಗಲೇ. ಆಟೋ ಹುಡುಗ ಒಂದೇ ಸಮನೆ ನಗುತ್ತಿದ್ದ, ಅವರಿಬ್ಬರೂ ಯಾವ ಭಾಷೆಯಲ್ಲಿ ಪರಸ್ಪರ ಮಾತಾಡಿಕೊಂಡರೋ ತಿಳಿಯದು. ಆ ಹುಡುಗ ತಮಿಳಿನಲ್ಲಿ 'ಒಳ್ಳೇ ಮಜಾ ಮನುಷ್ಯ ಇವರು' ಎಂದು ಖುಷಿಖುಷಿಯಾಗಿ ಅಯ್ಯರ್‌ಗೆ ಸಿದ್ದಲಿಂಗಯ್ಯನವರ ಗುಣಗಾನ ಮಾಡುತ್ತಿದ್ದ. ಆಗಲೇ ಹೊತ್ತಾಗಿದ್ದುದರಿಂದ ನಾವು ಆಟೋ ಏರಿ ಕುತುಬ್‌ಮಿನಾರ್ ಕಡೆ ಹೊರಟೆವು. ಸಿದ್ದಲಿಂಗಯ್ಯ 'ಈ ಸಾಬರು ಏನು ಕಟ್ಟಿದರೂ ದೊಡ್ಡದೇ ಕಟ್ತಾರಲ್ವ ಸಾರ್! ಸಮಾಧೀನೂ ಎಕರೆಗಟ್ಟಲೆ... ಕೋಟೆ ಗೋಡೆ ನೋಡುದ್ರೆ ಆನೆಗಾತ್ರ ದಪ್ಪ...' ಎಂದು ಬೆರಗುಗೊಂಡಿದ್ದರು. ನಾನು, 'ಕುತುಬ್‌ಮಿನಾರ್ ನೋಡಬನ್ನಿ, ಆಕಾಶಕ್ಕೆ ಗೋಪುರ ಕಟ್ಟಿದ್ದಾರೆ' ಎಂದು ಅವರ ಕುತೂಹಲ ಕೆರಳಿಸುವ ಮಾತಾಡುತ್ತಾ ನನ್ನ ಕುತೂಹಲದ ವಿಷಯಕ್ಕೆ ಬಂದೆ. ಅವರ ಇಂಟರ್‌ವ್ಯೂನಲ್ಲಿ ಏನೇನು ಪ್ರಶ್ನೆ ಕೇಳಿದರು ಮತ್ತು ಇವರೇನು ಉತ್ತರಕೊಟ್ಟರೆಂಬುದು ನನ್ನ ಕುತೂಹಲವಾಗಿತ್ತು. 'ಇಂಟರ್‌ವ್ಯೂ ವಿಷಯ ಹೇಳಲೇ ಇಲ್ಲವಲ್ಲ ಸಿದ್ದಲಿಂಗಯ್ಯನೋರೇ... ಏನೇನು ಪ್ರಶ್ನೆ ಕೇಳಿದ್ರು?' ಎಂದು ಕೇಳಿದೆ.

ಸಿದ್ದಲಿಂಗಯ್ಯ, 'ನೀವು ಮುಖ್ಯವಾಗಿ ಕೇಳೋ ರೇಡಿಯೋ ಕಾರ್ಯಕ್ರಮಗಳು ಯಾವುವು? ಅಂತ ಕೇಳಿದ್ರು ಸಾರ್, ನಾನು ನಮ್ಮ ಮನೇಲಿ ರೇಡಿಯೋ ಇಲ್ಲ ಅಂದೆ, ಅವರೆಲ್ಲ ಒಬ್ರನೊಬ್ರು ಕಣ್ಣುಬಿಟ್ಟು ನೋಡ್ಕೊಂಡು ಸುಮ್ನಾಗಿಬಿಟ್ರು. ಆಮೆಲೆ ಒಬ್ರು 'ನೀವು ಬೆಂಗಳೂರಿಂದ ಡೆಲ್ಲಿವರೆಗೆ ಬಂದ್ರಲ್ಲಾ, ಯಾವ ಯಾವ ನದಿ ದಾಟ್ಕಂಡು ಬಂದ್ರಿ?' ಅಂತ ಕೇಳುದ್ರು, ನಾನು ನೋಡ್ಲಿಲ್ಲ ಮಲಗುಬಿಟ್ಟಿದ್ದೆ ಅಂದೆ. ಅವರು ನಕ್ಕೂ ನಕ್ಕು, ಜೊತೆಗಿದ್ದ ಕನ್ನಡ ಎಕ್ಸ್‌ಪರ್ಟ್‌ಗೆ, ಅವರ್‍ಯಾರೋ ಡೆಲ್ಲಿ ಇಂಗ್ಲಿಷ್ ಪೇಪರ್‌ನೋರಂತೆ, ನೀವು ಪ್ರಶ್ನೆ ಕೇಳೀಂತ ಬಿಟ್ರು. ಅವರು 'ಏನಾದರೂ ಬರೆದಿದ್ದೀರಾ?' ಅಂತ ಕೇಳುದ್ರು, ನಾನು ಬ್ಯಾಗಿಂದ ನನ್ನ 'ಹೊಲೆಮಾದಿಗರ ಹಾಡು' ಪುಸ್ತಕಾನ ತೆಗೆದು ಅವರ ಕೈಗೆ ಕೊಟ್ಟೆ ನೋಡಿ ಸಾರ್, ಪಾಪ ಅವರು ಹಾಳೆ ತಿರುವ್ತಾ ತಿರುವ್ತಾ ಹಂಗೇ ಕೂತುಬಿಟ್ರು. ಆಮೇಲೆ ಏನೂ ಕೇಳದೆ ಹೋಗಿಬನ್ನಿ ಅಂದ್ರು ಸಾರ್!' ಎಂದು ಒಂದು ಕಳ್ಳಮುಗ್ಧ ನಗೆ ಬೀರಿದರು. ಆಟೋ ಹುಡುಗನಿಗೆ ಏನು ಅರ್ಥವಾಯಿತೋ, ಅವನೂ ನಗ್ತಾ ಇದ್ದ.

ಅಷ್ಟರಲ್ಲಿ ಕುತುಬ್‌ಮಿನಾರ್ ಬಂತು. ನಾವು ಇಳಿದೆವು. ಸಿದ್ದಲಿಂಗಯ್ಯ ಆ ಹುಡುಗನಿಗೆ ಪ್ರೀತಿಯಿಂದ ಹತ್ತು ರೂಪಾಯಿ ಭಕ್ಷೀಸು ನೀಡಿ ಕಳಿಸಿದರು. ಆಗಿನ್ನೂ ಕುತುಬ್‌ಮಿನಾರ್‌ನ ಮೂರನೇ ಹಂತದವರೆಗೆ ಜನರನ್ನು ಒಳಗೆ ಹತ್ತಿ ಇಳಿಯಲು ಬಿಡುತ್ತಿದ್ದರು. ಸಿದ್ದಲಿಂಗಯ್ಯ ಕೂಡ ಹೊರಟರು. ನಾನು ಹೋಗಲಿಲ್ಲ. ಅರ್ಧ ಘಂಟೆಯೊಳಗೆ ಅವರು ಬೆವರು ಸುರಿಸುತ್ತಾ, ಆದರೂ ಮುಖದ ಮೇಲೆ ಒಂಚೂರು ಸುಖದ ಮಿಂಚಿನೊಂದಿಗೆ ಹೊರಬಂದರು. 'ಹೇಗಿತ್ತು?' ಎಂದೆ. ಅವರು ಹುಸಿಮುನಿಸಿನಿಂದಲೇ, 'ಏನ್ ಈ ಡೆಲ್ಲಿ ಜನ ಸಾರ್! ಗಂಡಸರು ಹೆಂಗಸರು ಅನ್ನದೆ ಮೈಮೇಲೆ ಬಿದ್ದು ತಳ್ಳಾಡ್ತಾರೆ... ಆ ತಳ್ಳಾಟದಲ್ಲಿ ನಾನು ಇಳೀಲೇ ಇಲ್ಲ ಸಾರ್, ಅವರೇ ಎಲ್ಲ ತಳ್ಳಿಕೊಂಡು ಬಂದು ಹೊರಕ್ಕೆ ಬಿಸಾಡುದ್ರು' ಎಂದಾಗ ಅದರಲ್ಲಿ ಬೇಸರಕ್ಕಿಂತ ಆನಂದವೇ ಹೆಚ್ಚಿದ್ದಂತಿತ್ತು.

ನಂತರ ನಾವು ಸನಿಹದಲ್ಲೇ ಇದ್ದ ಎತ್ತರದ, ಕೆಳಗಿಂದ ಮೇಲಕ್ಕೆ ಸಣ್ಣದಾಗಿ ರೂಪುಗೊಳಿಸಿದ್ದ ಕಬ್ಬಿಣದ ಸ್ತಂಭದ ಕಡೆ ನಡೆದೆವು. ಅದೊಂದು ಐತಿಹಾಸಿಕ ಮಹತ್ವದ, ಭಾರತದಲ್ಲಿ ಕಬ್ಬಿಣದ ಕುಲುಮೆ ಪದ್ಧತಿ ಎಷ್ಟು ಪ್ರಾಚೀನ ಮತ್ತು ಕೌಶಲ್ಯಪೂರ್ಣವಾದದ್ದೆಂದು ಸೂಚಿಸುವ ಸ್ಮಾರಕ. ನಾನು ಸಿದ್ದಲಿಂಗಯ್ಯನವರಿಗೆ ಅದರ ಪ್ರತೀತಿ ತಿಳಿಸುತ್ತಾ ಅದನ್ನು ತಬ್ಬಿಕೊಂಡವರ ಎರಡೂ ಕೈಗಳು ಪರಸ್ಪರ ಕೂಡಿದರೆ ಅವರು ವಿಶೇಷ ಜನರಾಗಿರುತ್ತಾರೆ ಎನ್ನುತ್ತಾರೆ ಎಂದು ವಿವರಿಸಿದೆ. ಜೊತೆಗೆ, ನಾಲ್ಕಾರು ತಿಂಗಳ ಹಿಂದೆ ದೆಹಲಿಗೆ ಬಂದಿದ್ದ



ದೇವನೂರ ಮಹಾದೇವ ಅವರು ಇದನ್ನು ತಬ್ಬಿದಾಗ ಕೈಗಳು ಕೂಡಿದ್ದವು ಎಂದು ಸೇರಿಸಿದೆ. ಮಹಾದೇವ ಇವರಂತೆಯೇ ಒಂದು ಯುಪಿಎಸ್‌ಸಿ ಸಂದರ್ಶನಕ್ಕೆಂದೇ ಆಲನಹಳ್ಳಿ ಕೃಷ್ಣ ಅವರ ಜೊತೆ ಬಂದಿದ್ದರು. ಇದನ್ನು ಕೇಳಿ ಒಂದು ಕ್ಷಣ ಕಣ್ಣು ಮುಚ್ಚಿ ತೆಗೆದ ಅವರು 'ಮಹಾದೇವ ಅವರು ಬಿಡಿ ಸಾರ್, ಮಹಾತ್ಮರು' ಎನ್ನುತ್ತಾ ಒಮ್ಮೆ ಕಂಭವನ್ನು ಮೇಲಿಂದ ಕೆಳಗೆ ನೋಡಿ 'ಇದನ್ನ ತಲೆಕೆಳಗಾಗಿ ನಿಲ್ಸಿದ್ರೆ ನಾನೂ ಮಹಾತ್ಮ ಆಗಬಹುದು ಸಾರ್!' ಎಂದು ಒಂದು ಜೋಕ್ ಹೊಡೆಯುತ್ತಲೇ ಕಂಭವನ್ನು ತಬ್ಬಿ ನೋಡಿದರು. ನಂತರ 'ನಾವು ಕಮ್ಯುನಿಸ್ಟರು, ಇಂತಹ ಮೂಢ ನಂಬಿಕೆಗಳಿಗೆ ನಮ್ಮಲ್ಲಿ ಜಾಗವಿಲ್ಲ' ಎಂದು ಘೋಷಿಸಿದರು.

ಕತ್ತಲಾಗುತ್ತಾ ಬರುತ್ತಿತ್ತು. ಮನೆಗೆ ಹೋಗಿ ಈಗ ಅಡುಗೆ ಮಾಡುವುದು ರೇಜಿಗೆ ಎನಿಸಿತು. ಆಗ ನಾನು ನನ್ನ ಕೆಲಸದ ಪಾಳಿಯನ್ನವಲಂಬಿಸಿ ಬೆಳಿಗ್ಗೆ ತಿಂಡಿ, ರಾತ್ರಿ ಊಟ ತಯಾರಿಸಿಕೊಳ್ಳುತ್ತಿದ್ದೆ. ಹತ್ತಿರದ ಜೆಎನ್‌ಯುಗೆ ಹೋದರೆ ಅಲ್ಲಿನ ಮೆಸ್‌ನಲ್ಲಿ ಸ್ನೇಹಿತರ ಅತಿಥಿಯಾಗಿ ಊಟ ಮಾಡಿಬರಬಹುದೆಂದು, ಸಿದ್ಧಲಿಂಗಯ್ಯನವರಿಗೆ ಜೆನ್‌ಯು ಹೇಗೆ ಕಮ್ಯುನಿಸ್ಟರ ಕೋಟೆ ಎಂದು ವಿವರಿಸುತ್ತಾ ಅತ್ತ ಕಡೆ ಬಸ್ ಹತ್ತಿದೆವು.

ಅಲ್ಲಿಗೆ ಹೋಗಿ ಗೆಳೆಯ ಜಸ್ವೀರ್‌ರನ್ನು ವಿಚಾರಿಸಿದಾಗ ಅಂದು ಸಂಜೆ ಕರ್ನಾಟಕದ ಹಿರಿಯ ಸಮಾಜವಾದಿಯೊಬ್ಬರು ಬಂದಿದ್ದಾರೆಂದೂ, ಪ್ರಾಧ್ಯಾಪಕರೊಬ್ಬರ ಕ್ವಾರ್ಟರ್ಸ್‌ನಲ್ಲಿ ಪಾನಕೂಟದಲ್ಲಿ ಮಗ್ನರಾಗಿದ್ದಾರೆಂದೂ ತಿಳಿದು ಬಂತು. ಸಿದ್ಧಲಿಂಗಯ್ಯ ಚುರುಕಾದರು. ಅಲ್ಲಿಗೆ ಹೋಗಿ ಹಿರಿಯರನ್ನು ಮಾತಾಡಿಸಿಕೊಂಡು ಬರಬಹುದೆ? ಎಂದು ಕೇಳಿದರು. ನನಗೂ ಅವರನ್ನು ನೋಡುವ ಕುತೂಹಲವಿತ್ತಾದರೂ, ಈ ಗೆಳೆಯರೊಂದಿಗೆ ಅಲ್ಲಿಗೆ ಹೋದರೆ ಕೆಲಸ ಕೆಡುತ್ತದೆಂದು ನಾನು 'ಮನೆ ಸೇರಲು ಲೇಟಾಗುತ್ತೆ ಸಿದ್ಧಲಿಂಗಯ್ಯ, ಊಟ ಮಾಡಿ ಹೊರಟುಬಿಡೋಣ' ಎಂದರೆ ಅವರು ಬಿಡಬೇಕಲ್ಲ? 'ಸಮಾಜವಾದಿಗಳು ಅಂದ್ರೆ ನಮ್ಮ ಬ್ರದರ್ ಕಾಮ್ರೇಡ್‌ಗಳು ಸಾರ್, ಅಷ್ಟು ದೂರದಿಂದ ಬಂದವರೆ, ಒಂದು ನಿಮಿಷ ಮಾತಾಡಿಸಿಕೊಂಡು ಬಂದುಬಿಡೋಣ' ಎಂದು ನನ್ನನ್ನು ಪುಸಲಾಯಿಸತೊಡಗಿದರು. ಸಿದ್ಧಲಿಂಗಯ್ಯನವರ ಬಗ್ಗೆ 'ಹೆಚ್ಚು' ತಿಳಿಯದ ನನ್ನ ಗೆಳೆಯ 'ಒಂದು ನಿಮಿಷ ಹೋಗಿ ಬರೋಣ.. ಇಲ್ಲೇ ಹತ್ತಿರ' ಎಂದು ಹೊರಟೇಬಿಟ್ಟರು.

ಅಲ್ಲಿ ಹೋಗಿ ನೋಡಿದರೆ, ಪಾನ ಕಛೇರಿ ಥ್ರೀ ತೀನ್ ತಾಳ್ ಹಂತ ಮುಟ್ಟಿತ್ತು. ಅಲ್ಲಿದ್ದ ಕರ್ನಾಟಕದ ಸಮಾಜವಾದಿ ಅತಿಥಿ ಬಹು ವಿಚಾರವಂತರೂ, ವಾಗ್ಮಿಗಳೂ ಎಂದು ಹೆಸರಾದ ಎಸ್. ಎಸ್. ಕುಮುಟಾ ಅವರು. ಅವರು ನನ್ನ ಹೆಸರನ್ನು ಕೇಳಿದ್ದರು, ಇನ್ನು ಸಿದ್ಧಲಿಂಗಯ್ಯನವರನ್ನು ಕಂಡು ರೋಮಾಂಚನಗೊಂಡವರಂತೆ ಅವರನ್ನು ಬಿಗಿಯಾಗಿ ಆಲಂಗಿಸಿದರು. ತಮ್ಮ ಆತಿಥೇಯರಿಗೆ ತಮ್ಮ ಹೊಸ ಅತಿಥಿಯ ಮಹತ್ವವನ್ನು ಇಂಗ್ಲಿಷ್‌ನಲ್ಲಿ ವಿವರಿಸುತ್ತಾ, (ನಾನು ನೋಡಿದಂತೆ ಸಮಾಜವಾದಿಗಳ ಇಂಗ್ಲಿಷ್ ವಿರೋಧ ಪಾನಗೋಷ್ಠಿಗಳಲ್ಲಿ ತಲೆಕೆಳಗಾಗಿ ಅವರ ಇಂಗ್ಲಿಷ್ ಪರಿಣಿತಿ ತನ್ನ ಉತ್ತುಂಗ ಸ್ಥಿತಿ ಕಂಡುಕೊಳ್ಳುತ್ತದೆ! Wonderful! Fine! Beautiful! Non sense! Shut up, Get out ಮುಂತಾದ ಬಿಡಿಗಾಳು ಶಬ್ದಗಳಂತೂ ಕಾಂಗ್ರೆಸ್ ಕಡಲೆ ಬೀಜಗಳಂತೆ ಬಾಯ್ತುಂಬಾ, ಗೋಷ್ಠಿಯ ತುಂಬ ಸುಮ್ಮನೆ ಉರುಳಾಡುತ್ತವೆ!) ಎರಡು ಹೊಸ ಗ್ಲಾಸ್ ತರಲು ಹೇಳಿದರು. ನಾನು ಕಟ್ಟುನಿಟ್ಟಾಗಿ ಬೇಡವೆಂದು ಹೇಳಿದಾಗ ಸಿದ್ಧಲಿಂಗಯ್ಯ 'ಹಿರಿಯ ಸಮಾಜವಾದಿಗಳ ಆಕಸ್ಮಿಕ ಭೇಟಿಯಾಗಿದೆ, ಆ ನೆನಪಿಗೆ ಒಂದು ಪೆಗ್ ಇರಲಿ ಸಾರ್' ಎಂದು ಕೂತೇಬಿಟ್ಟರು. ಅದು ಒಂದು ಪೆಗ್‌ಗೇನೂ ನಿಲ್ಲಲಿಲ್ಲ, ನಾನು ಅಸಹಾಯಕನಾಗಿದ್ದೆ. ಆದರೆ ಒಂದು ಸಮಾಧಾನವೆಂದರೆ ನಮ್ಮ ಊಟ ಅಲ್ಲೇ ಆಯಿತಲ್ಲದೆ ನಾವು ನಮ್ಮ ಮನೆಗೆ ಹೋಗಲು ಆ ಆತಿಥೇಯ ಪ್ರಾಧ್ಯಾಪಕರು ಯಾರಿಗೋ ಫೋನ್ ಮಾಡಿ ನಾವು ಮನೆಗೆ ಹೋಗಲು ಆಟೋ ವ್ಯವಸ್ಥೆಯನ್ನೂ ಮಾಡಿದರು.



ಮನೆ ತಲುಪಿದ ನಮಗೆ ತಲೆ ನೆಲಕ್ಕೆ ಹಾಕಿದರೆ ಸಾಕೆನಿಸಿತ್ತು. ಆದರೂ ಆ ಸ್ಥಿತಿಯಲ್ಲೂ ಸಿದ್ಧಲಿಂಗಯ್ಯ ತಮ್ಮ ವರ್ಗಪ್ರಜ್ಞೆಯನ್ನು ಮರೆಯುತ್ತಾ ತಮಗೆ ಹಾಸಿಗೆ ಬೇಡವೆಂದು ಹಠ ಮಾಡಿ ನಾನು ಕೊಟ್ಟ ಹಾಸಿಗೆಯ ತಳಗಿನ ಜಮಖಾನಾ ಎಳೆದು ತಮ್ಮ ಉದ್ದನೆಯ ಟವಲನ್ನು ಮುಖಕ್ಕೆಳೆದುಕೊಂಡು ಮಲಗಿದರು. ಇಬ್ಬರಿಗೂ ಚೆನ್ನಾಗಿ ನಿದ್ದೆ ಬಂತು.

ನಾನು ಬೆಳಿಗ್ಗೆ ಏಳು ಗಂಟೆಗೆ ಎದ್ದಾಗ ಸಿದ್ಧಲಿಂಗಯ್ಯ ಕಾಣಲಿಲ್ಲ. ಬಾಗಿಲು ತೆಗೆದದ್ದನ್ನು ನೋಡಿ ಹೊರಗೆ ವಾಯುಸಂಚಾರಕ್ಕೆ ಹೋಗಿರಬಹುದೆಂದು ನಾನು ನನ್ನ ಕೆಲಸದ ಮಧ್ಯಾಹ್ನದ ಪಾಳಿಗೆ ಹೋಗಬೇಕಾದ್ದರಿಂದ ಸ್ನಾನಕ್ಕೆ ನೀರು ಕಾಯಿಸಿ ತಿಂಡಿ ತಯಾರಿಸುವ ಸಿದ್ಧತೆಯಲ್ಲಿ ತೊಡಗಿದೆ. ಸಿದ್ಧಲಿಂಗಯ್ಯ ಬಂದರು. ನನಗೆ ತೊಂದರೆ ಕೊಡಬಾರದೆಂದು ಬೆಳಗಿನ ಟೀಯನ್ನು ಹೊರಗೆ ಕುಡಿದು ಬಂದೆ ಎಂದರು. ನಾನು 'ನೀರು ಕಾದಿದೆ ಸ್ನಾನ ಮಾಡಿ' ಎಂದೆ. ಕೂಡಲೇ ಅವರು 'ಅದೆಲ್ಲ ಬೇಡ ಸಾರ್, ನಾನು ಬೆಂಗಳೂರಿಂದ ಸ್ನಾನ ಮಾಡಿಕೊಂಡೇ ಹೊರಟಿದ್ದು ಸಾರ್!' ಎನ್ನುತ್ತಾ 'ನಮ್ಮಂಥೋರು ದಿನಾ ಸ್ನಾನ ಮಾಡದನ್ನ ರೂಢಿ ಮಾಡಕಂಡರೆ ಸೌದೆ, ಸೀಮೆಎಣ್ಣೆ ಎಲ್ಲಿಂದ ಜೋಡಿಸಿಕೊಳ್ಳೋದು?' ಎಂಬ ಪ್ರಶ್ನೆಯನ್ನು ನನ್ನತ್ತ ಎಸೆದು 'ಮುಖ ತೊಳಕಂಡು ಹೊರಡ್ತೀನಿ ಸಾರ್' ಎಂಬ ಬಾಂಬ್ ಬೇರೆ ಹಾಕಿದರು. ಒಂದರ ಮೇಲೊಂದರಂತೆ ಬಿದ್ದ ಬಾಂಬುಗಳಿಂದ ತತ್ತರಿಸಿದ ನಾನು ಸಾವರಿಸಿಕೊಂಡು ಮುಖ ತೊಳೆದುಕೊಂಡು ಬಂದ ಅವರಿಗೆ 'ಅವಲಕ್ಕಿ ಉಪ್ಪಿಟ್ಟು ಮಾಡ್ತಾ ಇದೀನಿ. ಇಬ್ರೂ ತಿಂದು ಜೊತೆಯಲ್ಲಿ ಹೋಗೋಣ' ಎಂದರೆ 'ಬೇಡ ಬೇಡ ಸಾರ್... ಬೆಳಿಗ್ಗೆ ಎದ್ದು ಬಿಸಿ ಬಿಸಿ ತಿನ್ನೋದು ರೂಢಿ ಮಾಡಿಕೊಂಡ್ರೆ ನಮ್ಮಂತೋರಿಗೆ ಕಷ್ಟ... ಈಗ ಹೋಗಿ ನೋಡಿಕೊಂಡು ಬಂದ್ನಲ್ಲಾ, ಟೀ ಅಂಗಡಿಯೊಳಗೆ ರಾಶಿ ರಾಶಿ ನಿನ್ನೆ ರಾತ್ರೀದು ವೆರೈಟಿಗಳು ಇವೆ. ಬೆಳಿಗ್ಗೆ ತಂಗಳೇ ನಮಗೆ ಭೂಷಣ!' ಎಂದು ಘೋಷಿಸುತ್ತಾ, ಚೀಲವನ್ನು ಹೆಗಲಿಗೇರಿಸಿಕೊಂಡು 'ಬತ್ತೀನಿ ಸಾರ್!' ಎನ್ನುತ್ತಾ ಹೊರಟೇ ಬಿಟ್ಟರು. ನಾನು 'ಹೇಗೆ ಹೋಗ್ತೀರಾ ತಾಳಿ, ಈ ಕಡೆ ಆಟೋ ಬರಲಿ ಹತ್ತಿಸ್ತೀನಿ' ಎಂದರೆ 'ಬೇಡ ಸಾರ್! ಊರು ನೋಡ್ಕೊಂಡು ಹೋದ್ರೆ ಎಷ್ಟು ಮಹಾ ದೂರ! ಸಾಧ್ಯ ಆದರೆ ಇಂದಿರಾಗಾಂಧಿ ಮನೆ ತಾವಾಸಿ ಹೋಗ್ತೀನಿ' ಎಂದು ನಡೆದೇ ಬಿಟ್ಟರು. ನಿನ್ನೆ ಕುತುಬ್ ಮಿನಾರ್‌ಗೆ ಆಟೋದಲ್ಲಿ ಬರುವಾಗ ದೂರದಿಂದ ರಾಷ್ಟ್ರಪತಿ ಭವನವನ್ನೂ, ಇಂದಿರಾ ಗಾಂಧಿಯವರ ಮನೆಯ ದಿಕ್ಕನ್ನೂ ತೋರಿಸಿದ್ದೆ. ನಾನೀಗ ಮೂಕವಿಸ್ಮಿತನಾಗಿ ಮನೆ ಬಾಗಿಲವರೆಗೂ ಹೋಗಿ ಅವರು ಹೋಗುವುದನ್ನೇ ನೋಡುತ್ತಾ ಚಿಂತಿಸುತ್ತಾ ನಿಂತೆ. ನಮ್ಮ ಮನೆಯಿಂದ ರೈಲ್ವೇ ಸ್ಟೇಷನ್‌ಗೆ ಕನಿಷ್ಠ ೧೦–೧೨ ಮೈಲಿ ದೂರ!

ಒಂದು ವಾರ ನನಗೆ ಆತಂಕವೋ ಆತಂಕ. ಅಂತೂ ಒಂದು ದಿನ ಕಾಳೇಗೌಡರಿಂದ ಪತ್ರ ಬಂದು, ತಮ್ಮ ಗೆಳೆಯ ಸುಕ್ಷೇಮವಾಗಿ ಬೆಂಗಳೂರು ತಲುಪಿದ್ದಾರೆಂದು ತಿಳಿಸಿ, ಅದಕ್ಕಾಗಿ ನನಗೆ ವಂದನೆ ಹೇಳಿದ್ದರು!

***

ಆರೇಳು ತಿಂಗಳುಗಳ ನಂತರ ನಾನು ಬೆಂಗಳೂರಿಗೆ ಹೋಗಿದ್ದಾಗ ಒಂದು ಸಂಜೆ ಸೆಂಟ್ರಲ್ ಕಾಲೇಜ್ ಕ್ಯಾಂಪಸ್‌ನಲ್ಲಿ ಡಿ.ಆರ್. ನಾಗರಾಜ್ ಸಿಕ್ಕರು. ನಾನು ಇದನ್ನೆಲ್ಲ ಅವರಿಗೆ ಹೇಳಿದೆ. ಅವರು ಗಹಗಹಿಸಿ ನಕ್ಕು, 'ಅವರು ಹೇಳಿದ್ರಲ್ಲಿ ಅರ್ಧ 'ಕವಿ ಸಮಯ'ಗಳು ಗುರುಗಳೇ, 'ಥ್ರೋಡ್' ಜಾಸ್ತಿ, ಮಾತಿನ ಪರಿಣಾಮಕ್ಕೆ! ಕವಿಗಳು ಡೆಲ್ಲಿಗೆ ಹೊರಟಾಗ ನಾವಿಬ್ರೂ ಹೋಗಿ ರೈಲ್ವೆ ಪೋಲೀಸ್ ಆಫೀಸರ್ ಭರಣಿಯವರ ಮೂಲಕ ಹೋಗಿ ಬರೋಕ್ಕೆ ಜಿ.ಟಿ. ಎಕ್ಸ್‌ಪ್ರೆಸ್‌ನಲ್ಲಿ ಟಿಕೆಟ್ ಬುಕ್ ಮಾಡಿಸಿಕೊಂಡು ಬಂದಿದ್ವಿ' ಎನ್ನುತ್ತಿದ್ದಂತೆ ಎಲ್ಲಿಂದಲೋ ಗೊತ್ತಿಲ್ಲ ಅಲ್ಲಿ ನಮ್ಮೆದುರಿಗೆ ಸಿದ್ಧಲಿಂಗಯ್ಯ ಬಂದು ನಿಂತಿದ್ದರು! ನಾನು ಏನೂ ಮಾತಾಡದೆ ಸುಮ್ಮನೇ ಅವರನ್ನು ನೋಡುತ್ತಾ ನಿಂತೆ. ಒಂದು ನಿಮಿಷದ ನಂತರ ಇಬ್ಬರಿಗೂ ಎಲ್ಲ ಅರ್ಥವಾದಂತೆ ಜೋರಾಗಿ ನಕ್ಕೆವು!!

---

೧ನೇ ಪುಟದಿಂದ)

ನಾಯಕರೊಬ್ಬರ ದೂರವಾಣಿಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಸುದ್ದಿ ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ಹೊರಬೀಳುತ್ತಿದೆ. ಇದರಲ್ಲಿ ಬಹು ಮಹತ್ವದ ಸುದ್ದಿ ಎಂದರೆ ಅಯೋಧ್ಯೆ, ರಫೇಲ್ ಖರೀದಿ ಒಪ್ಪಂದ, ನ್ಯಾ. ಲೋಯಾ ಸಾವು, ಸಿಬಿಐ ನಿರ್ದೇಶಕರ ವರ್ಗಾವಣೆ ಮುಂತಾದ ಸೂಕ್ಷ್ಮ ವಿಷಯಗಳ ಬಗ್ಗೆ ತಮ್ಮ ನಿವೃತ್ತಿಗೆ ಮುಂಚೆ ಸರ್ಕಾರದ ಅನುಕೂಲಕ್ಕೆ ತಕ್ಕಂತೆ ಇದ್ದವುಗಳು ಎಂದು ಹೇಳಲಾಗುತ್ತಿರುವ ತೀರ್ಪುಗಳನ್ನು ಸರಸರನೆ ನೀಡುವುದರ ನೇತೃತ್ವ ವಹಿಸಿದ್ದ ಸರ್ವೋನ್ನತ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಬ್ಬರ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ನೀಡಿದ್ದ ಮಹಿಳೆಯೋರ್ವರ ದೂರವಾಣಿಯನ್ನು ಕದ್ದಾಲಿಸಲಾಗಿದೆ ಎಂಬುದು. ಇದು ರಾಷ್ಟ್ರದ ಅತ್ಯುನ್ನತ ಸ್ತರದ ನ್ಯಾಯದಾನದ ಪ್ರಕ್ರಿಯೆಯನ್ನು ಅನುಮಾನಾಸ್ಪದಗೊಳಿಸಿ ನಮ್ಮ ಪ್ರಜಾತಂತ್ರ ವ್ಯವಸ್ಥೆಯನ್ನೇ ಅಪಾಯಕ್ಕೀಡುಮಾಡಲಾಗಿದೆ ಎಂಬ ಆತಂಕವನ್ನು ವ್ಯಕ್ತಪಡಿಸಲಾಗುತ್ತಿದೆ. ಈ ಬಗ್ಗೆ ವಿಚಾರಣೆ ನಡೆಸುವಂತೆ ಸರ್ವೋನ್ನತ ನ್ಯಾಯಾಲಯಕ್ಕೆ ಸಂಸದರೊಬ್ಬರು ಅರ್ಜಿಯನ್ನೂ ಸಲ್ಲಿಸಿದ್ದಾರೆ.

ಅಮೆರಿಕಾದ ಅಧ್ಯಕ್ಷ ನಿಕ್ಸನ್ ಸರ್ಕಾರ ಅಧಿಕಾರ ತ್ಯಜಿಸುವಂತೆ ಮಾಡಿದ ವಾಟರ್‌ಗೇಟ್ ಹಗರಣವನ್ನು ಹೋಲುವ ಈ ಹಗರಣವನ್ನು ವಿರೋಧ ಪಕ್ಷಗಳು, ನಾಗರಿಕ ಸಮಾಜ ಮತ್ತು ಸರ್ವೋನ್ನತ ನ್ಯಾಯಾಲಯ ಹೇಗೆ ನಿರ್ವಹಿಸುವುದೋ ಕಾದು ನೋಡಬೇಕಿದೆ. ಇದೆಲ್ಲದರಿಂದ ಆತಂಕಗೊಂಡಂತಿರುವ ಸರ್ಕಾರ, ಇದು ಭಾರತದ ಪ್ರಜಾತಂತ್ರಕ್ಕೆ ಕಳಂಕ ಹಚ್ಚಲು ನಡೆದಿರುವ ಅಂತಾರಾಷ್ಟ್ರೀಯ ಪಿತೂರಿ ಎನ್ನುತ್ತಿದೆ. ಆದರೆ ಪೆಗಾಸಿಸ್ ಹಗರಣ ಭಾರತಕ್ಕಷ್ಟೇ ಸಂಬಂಧಿಸಿದ್ದಲ್ಲ, ಐರೋಪ್ಯ ರಾಷ್ಟ್ರಗಳೂ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳ ಸರ್ಕಾರಗಳೂ ಇದರಿಂದ ಇಕ್ಕಟಿಗೆ ಸಿಕ್ಕಿವೆ ಎಂಬುದನ್ನು ನಾವು ಗಮನಿಸಬೇಕು.

**–ಸಂಪಾದಕ**

# ನಮ್ಮ ವಿಶ್ವವಿದ್ಯಾಲಯಗಳಲ್ಲಿನ ವಿದ್ವತ್ತು-ಕನ್ನಡ ರಕ್ಷಣೆ-ಕನ್ನಡಿಗರ ರಕ್ಷಣೆ ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

## ನಮ್ಮ ವಿಶ್ವವಿದ್ಯಾನಿಲಯಗಳ ವಿದ್ವನ್ಮಣಿಗಳೂ, 'ಹೊಸ ಮನುಷ್ಯ'ವೂ

ನಮ್ಮ ಪತ್ರಿಕೆಯ ಚಂದಾದಾರರ ಪೈಕಿ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಮೇಷ್ಟ್ರುಗಳ ಸಂಖ್ಯೆ ತೀರಾ ಕಡಿಮೆ ಎಂದೇ ಹೇಳಬೇಕು. ಆದರೂ ಇವರಿಂದ ಕಳೆದ ಆರೇಳು ತಿಂಗಳುಗಳಿಂದ ನನಗೆ ವಿಪರೀತ ಬೇಡಿಕೆ. ಚಂದಾದಾರರಾಗಲು ಅಲ್ಲ. ಅವರ ಸಂಶೋಧನಾ/ವಿದ್ವತ್ ಲೇಖನಗಳನ್ನು ಪ್ರಕಟಿಸಲು. ಇದೇಕೆ ಇವರು ಎಂದೂ ಇಲ್ಲದ ಹಾಗೆ ಹೀಗೆ ಒಮ್ಮಿಂದೊಮ್ಮೆಗೇ ನನಗೆ ದುಂಬಾಲು ಬಿದ್ದಿದ್ದಾರೆಂದು ವಿಚಾರಿಸಿದಾಗ ಗೊತ್ತಾದದ್ದು, ನಮ್ಮ ಪತ್ರಿಕೆಯನ್ನು ರಾಷ್ಟ್ರದ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟವನ್ನು ನಿಯಂತ್ರಿಸುವ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (ಯುಜಿಸಿ) ಗುಣಮಟ್ಟದ ವಿದ್ವತ್ಪತ್ರಿಕೆಯೆಂದು ಮಾನ್ಯ ಮಾಡಿದ್ದು, ಇದರಲ್ಲಿ ಲೇಖನ ಪ್ರಕಟಿಸಿದ ಅಧ್ಯಾಪಕ ಮತ್ತು ಸಂಶೋಧನಾ ಸಹಾಯಕರಿಗೆ ಅವರ ವೃತ್ತಿಜೀವನಕ್ಕೆ ನೆರವಾಗುವ (ನೇಮಕಾತಿ, ಪದೋನ್ನತಿ, ಬಡ್ತಿ ಮುಂತಾದವು) ಶ್ರೇಯಾಂಕಗಳನ್ನು ನೀಡುತ್ತದೆಂಬುದು. 'ಯುಜಿಸಿ ಕೇರ್ ಲಿಸ್ಟ್' ಎಂದು ಕರೆಯಲಾಗುವ ಇಂತಹ ಪತ್ರಿಕೆಗಳ ಪಟ್ಟಿಗೆ ಅದ್ಯಾರು ನಮ್ಮ ಪತ್ರಿಕೆಯನ್ನು ಶಿಫಾರ್ಸು ಮಾಡಿದರೋ ತಿಳಿಯದು ಮತ್ತು ಈವರೆಗೆ ನಾನು ಆ ಪಟ್ಟಿಯನ್ನು ಕಣ್ಣಾರೆ ನೋಡಿಲ್ಲ. ಪ್ರತಿಕೆಗೆ ಈ ಗೌರವ ಸಂದಿರುವ ಬಗ್ಗೆ ನನಗೆ ಹೆಮ್ಮೆ ಇದೆಯಾದರೂ ಈ 'ಗಿರಾಕಿ'ಗಳ ಕಾಟ ಒಮ್ಮೊಮ್ಮೆ ತಡೆಯಲಾಗದಾದಾಗ ಈ ಗೌರವಕ್ಕೆ ಕಾರಣರಾದ ಆ ಅಜ್ಞಾತರನ್ನು ಶಪಿಸುವುದೂ ಉಂಟು!

ಅದೇನೇ ಇರಲಿ, ಲೇಖನ ಪ್ರಕಟಿಸಿ ಎಂದು ಪೀಡಿಸುವವರಿಗೆಲ್ಲ ನಾನು ಹೇಳುವುದು ಒಂದೇ ಉತ್ತರ: 'ನಮ್ಮ ಪತ್ರಿಕೆಯ ಪ್ರತಿ ಸಂಚಿಕೆಯೂ ಒಂದು ವಸ್ತುವಿನ ಸುತ್ತ ಪೂರ್ವ ನಿಯೋಜಿತವಾಗಿರುತ್ತಾದ್ದರಿಂದ ಆ ವಸ್ತುವಿನ ಬಗ್ಗೆ ನಾವೇ ಲೇಖನಗಳನ್ನು ಆಹ್ವಾನಿಸಿ ಬರೆಸುತ್ತೇವೆ, ಯಾರೂ ಲೇಖನ ಕಳಿಸುವ ಅಗತ್ಯವಿಲ್ಲ, ಕಥೆ-ಕವನ ಬರೆಯುತ್ತಿದ್ದರೆ ಕಳಿಸಿ, ಪರಿಶೀಲಿಸಿ ತಿಳಿಸುತ್ತೇವೆ'. ವಿಷಾದದ ಸಂಗತಿ ಎಂದರೆ ಇವರಲ್ಲಿ ಬಹುತೇಕರು ಪತ್ರಿಕೆಯನ್ನು ಕಣ್ಣೆತ್ತಿ ಕೂಡ ನೋಡಿದವರಲ್ಲ, ನೋಡಬಯಸುವವರೂ ಅಲ್ಲ. ಏಕೆಂದರೆ ಉನ್ನತಶಿಕ್ಷಣ ಲೋಕದಲ್ಲಿ 'ಕೆಲಸ' ಮಾಡುತ್ತಿರುವ/ ಮಾಡಬಯಸುವ ಇವರಿಗೆ ಕನ್ನಡ ಜ್ಞಾನ ಲೋಕದ ಕನಿಷ್ಠ ಕುತೂಹಲವಿದ್ದಿದ್ದರೆ, ಹತ್ತು ವರ್ಷಗಳಿಂದ ಪ್ರಕಟವಾಗುತ್ತಿರುವ ನಮ್ಮ ಪತ್ರಿಕೆಯನ್ನು ಗಮನಿಸುವುದು ಹೋಗಲಿ, ಹೆಸರನ್ನಾದರೂ ಕೇಳಿರಬೇಕಿತ್ತು. ನಮ್ಮ ವಿಶ್ವವಿದ್ಯಾಲಯಗಳು ಇಂದು ಯಾವ ಸ್ಥಿತಿ ಮುಟ್ಟಿವೆ ಎಂದರೆ, ನಮ್ಮ ಪತ್ರಿಕೆ ಯುಜಿಸಿ ಕೇರ್ ಲಿಸ್ಟ್‌ಗೆ ಸೇರಿದ ಮೇಲಾದರೂ ಅವುಗಳಲ್ಲಿನ ವಿದ್ವನ್ಮಣಿಗಳಾರೂ ತಮ್ಮ ವಿಶ್ವವಿದ್ಯಾಲಯಗಳ, ಕಾಲೇಜುಗಳ ಗ್ರಂಥಾಲಯಗಳಿಗೆ ಪತ್ರಿಕೆಯನ್ನು ತರಿಸಲು ಸೂಚಿಸುವ ಗೋಜಿಗೆ ಹೋಗಿಲ್ಲ. ಈವರೆಗೆ ಇಡೀ ರಾಜ್ಯದಲ್ಲಿ ನಮ್ಮ ಪತ್ರಿಕೆ ತರಿಸುತ್ತಿರುವುದು ಒಂದು ವಿಶ್ವವಿದ್ಯಾಲಯ ಮತ್ತು ಒಂದು ಖಾಸಗಿ ಕಾಲೇಜಿನ ಗ್ರಂಥಾಲಯಗಳು ಮಾತ್ರ!

ಇದನ್ನೆಲ್ಲ ನಾನು ದುಃಖದಿಂದಾಗಲೀ, ಬೇಸರದಿಂದಾಗಲೀ ಹೇಳುತ್ತಿಲ್ಲ. ಏಕೆಂದರೆ ಇಂದಿನ ಪ್ರಯೋಜನಬುದ್ಧಿ ಪ್ರಧಾನವಾದ ವಾಸ್ತವದ ಅರಿವು ನನಗಿದೆ. ಹಿಂದೆ-ವಿದ್ವತ್ತು ಮತ್ತು ಸಂಶೋಧನೆಗಳು ಕೇವಲ ವೈಯಕ್ತಿಕ ಸಂತೋಷದ ವಿಷಯಗಳಾಗಿದ್ದಾಗ-ಪ್ರತಿ ವಿಶ್ವವಿದ್ಯಾಲಯಕ್ಕೂ ಮುಖವಾಣಿಯಂತಿದ್ದ ಒಂದು ತನ್ನದೇ ವಿದ್ವತ್ಪತ್ರಿಕೆ ಇರುತ್ತಿತ್ತು. *ಪ್ರಬುದ್ಧ ಕರ್ನಾಟಕ, ಸಾಧನೆ* ಇಂಥವು. ಆದರೆ ಈಗ ಇಂತಹ ಒಂದರ ಹೆಸರೂ ಕೇಳಿ ಬರುತ್ತಿಲ್ಲ. ಇಂತಹ ಸಂದರ್ಭದಲ್ಲಿ ವಿದ್ವಾಂಸರು ಮತ್ತು ಸಂಶೋಧಕರಾದರೂ-ವಿಶೇಷವಾಗಿ ಕನ್ನಡದಲ್ಲಿ ಬರೆಯುವವರು-ತಮ್ಮ ಬರಹಗಳನ್ನು ಎಲ್ಲಿ ಪ್ರಕಟಿಸಬೇಕು? ಈ ಬಗ್ಗೆ ನಾನು ಗೌರವಿಸುವ ನಿವೃತ್ತ ಹಿರಿಯ ಪ್ರಾಧ್ಯಾಪಕರೊಂದಿಗೆ ಮಾತನಾಡುತ್ತಾ, ಯುಜಿಸಿಯಾದರೂ ಈ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು ಎಂದಾಗ ಅವರು ನನಗೆ ಬುದ್ಧಿ ಹೇಳಿದ್ದು ಹೀಗೆ: 'ಸುಮ್ಮನಿರಿ, ಅದೊಂದು ದೊಡ್ಡ ಬೌದ್ಧಿಕ ವಂಚನೆಯ ಪ್ರಸಂಗವಾದೀತು! ಇವೊತ್ತು ಹೊರಬರುತ್ತಿರುವ ಪಿಎಚ್‌ಡಿ ಪ್ರಬಂಧಗಳನ್ನು ನೋಡಿದ್ದೀರಾ? ಅವನ್ನು ವಿದ್ವತ್ತು-ಸಂಶೋಧನೆ ಎಂದು ಕರೆಯಲು ನಾಚಿಕೆಯಾಗುತ್ತದೆ...'.

ಇಂತಹ ಕಟು ವಾಸ್ತವದಲ್ಲೂ ನಮ್ಮ ಪತ್ರಿಕೆ ಹತ್ತು ವರ್ಷಗಳ ಕಾಲ ನಡೆದಿದೆ. ಕನ್ನಡದ ಉತ್ಕೃಷ್ಟ ಮನಸ್ಸುಗಳು ಇದನ್ನು ಓದುತ್ತಾ, ಇದರಲ್ಲಿ ಬರೆಯುತ್ತಾ ಪ್ರೋತ್ಸಾಹಿಸುತ್ತಿವೆ. ಅಷ್ಟು ಸಾಕು, ಇದು ಯುಜಿಸಿ ಕೇರ್ ಲಿಸ್ಟ್‌ನಲ್ಲಿರಲಿ, ಇಲ್ಲದಿರಲಿ ನಮಗೇನಂತೆ!

## ಅನ್ನದ ಭಾಷೆಯಾದರೂ ಕಲ್ಲು ತಪ್ಪಿದ್ದಲ್ಲ!

ಇತ್ತೀಚೆಗೆ ಕನ್ನಡ ಕಾಲೇಜು ಅಧ್ಯಾಪಕರೊಬ್ಬರಿಂದ ನನಗೆ ಸುದೀರ್ಘ ಪತ್ರವೊಂದು ಬಂತು. ಅದರಲ್ಲಿ ಕನ್ನಡದ ಸ್ಥಿತಿ ದಿನೇ ದಿನೇ ಚಿಂತಾಜನಕವಾಗುತ್ತಿದೆಯೆಂದೂ, ಇದಕ್ಕೆ ಮುಖ್ಯ ಕಾರಣ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಕಾಣೆಯಾಗುತ್ತಿರುವುದೇ ಕಾರಣವೆಂದೂ, ಈ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಲು ಕನ್ನಡ ಶಿಕ್ಷಣ ಮಾಧ್ಯಮದ ಮಹತ್ವದ ಬಗ್ಗೆ ತಾವು ಮತ್ತು ತಮ್ಮ ಗೆಳೆಯರೊಬ್ಬರು ಸೇರಿ ಪುಸ್ತಕವೊಂದನ್ನು ಸಂಪಾದಿಸುತ್ತಿದ್ದು ಅದಕ್ಕಾಗಿ ಲೇಖನವೊಂದನ್ನು ತುರ್ತಾಗಿ ಕಳಿಸಿಕೊಡಬೇಕೆಂದು ಕೋರಿದ್ದರು. ನನಗೆ 'ಊರೆಲ್ಲ ಕೊಳ್ಳೆಯಾದ ಮೇಲೆ ಊರ ಬಾಗಿಲು ಹಾಕಿಕೊಂಡರು' ಎಂಬ ಗಾದೆ ನೆನಪಾಗಿ, ಕನ್ನಡ ಶಿಕ್ಷಣ ಮಾಧ್ಯಮದ ಕಥೆ ನಮ್ಮ ಸರ್ವೋನ್ನತ ನ್ಯಾಯಾಲಯದ ತೀರ್ಪನ್ನೇ ದೇವವಾಣಿ ಎಂದು ಕನ್ನಡ ಸರ್ಕಾರ ಮತ್ತು ಜನ ತೀರ್ಮಾನಿಸಿ ತೆಪ್ಪಗಾಗಿ ಅದು ಮುಗಿದ ಅಧ್ಯಾಯವೆನಿಸಿರುವಾಗ ಇವರಿಗೇಕೆ ಈಗ ಇದ್ದಕ್ಕಿದ್ದಂತೆ ಈ ಜಾಗೃತಿಯ ತುರ್ತು ಒಂಟಾಗಿದೆ ಎಂದು ಯೋಚಿಸಿ ಅವರ ಸುದೀರ್ಘ ಪತ್ರವನ್ನು ಇನ್ನೊಮ್ಮೆ ಓದಿ ನೋಡಿದೆ, ಈಗ ಈ ತುರ್ತಿನ ಮರ್ಮ ಅರ್ಥವಾಯಿತು.

ಕಾಂಗ್ರೆಸ್‌ಮುಕ್ತ ನವಭಾರತ ನಿರ್ಮಾಣದ ಕಾರ್ಯಸೂಚಿಯ ಅಂಗವಾಗಿ ಈಗ ಜಾರಿಗೆ ತರಲಾಗುತ್ತಿರುವ ನವ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ 'ಸಾಧ್ಯವಾದಷ್ಟೂ ಮಟ್ಟಿಗೆ' ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಇದ್ದರೆ ಒಳ್ಳೆಯದೆಂದು ಹೇಳುತ್ತಲೇ ಸರ್ಕಾರ ಅದನ್ನು 'ಸಾಧ್ಯವಾದಷ್ಟೂ ಅಸಾಧ್ಯವಾಗುವಂತಹ' ಆರ್ಥಿಕ-ಸಾಮಾಜಿಕ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತಿರುವ ಕಾರ್ಯಕ್ರಮಕ್ಕೆ ಅನುಸಾರವಾಗಿ ಪದವಿ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷಾ ಶಿಕ್ಷಣವನ್ನು 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವಿನಂತಿದೆಯೆಂದು ಭಾವಿಸಿ ಅದನ್ನು ಒಂದು ವರ್ಷಕ್ಕೆ ಸೀಮಿತಗೊಳಿಸುವ ಪ್ರಯತ್ನಗಳು ನಡೆಸಿದೆ. ಈ ಬಗ್ಗೆ ಈ ಪತ್ರ ಆತಂಕ ವ್ಯಕ್ತಪಡಿಸುತ್ತಾ ಭಾಷಾ ಶಿಕ್ಷಣವು ವ್ಯಕ್ತಿತ್ವ ನಿರ್ಮಾಣದಲ್ಲಿ ಎಷ್ಟು ಮುಖ್ಯ ಎಂಬುದನ್ನು ವಿವರಿಸಲಾಗಿತ್ತು. ಭಾಷಾ ಶಿಕ್ಷಣದ ಮಹತ್ವವನ್ನು ಪುರಾತನ ಕಾಲದಿಂದಲೂ ಹೇಳಲಾಗುತ್ತಿದೆಯಾದರೂ ಈಗ ಈ ಪತ್ರದಲ್ಲಿ ಅದಕ್ಕೆ ಮಹತ್ವ ಒದಗಿ ಬಂದಿರುವುದೇಕೆ ಎಂದು ನೋಡಿದಾಗ ಪ್ರಾದೇಶಿಕ ಭಾಷಾ ಅಧ್ಯಾಪಕರ ಹುದ್ದೆ/ವೃತ್ತಿಗಳಿಗೇ ಅಪಾಯ ಒದಗಿರುವುದೇ ಕಾರಣವೆಂದು ಗೊತ್ತಾಯಿತು. ಅಂದರೆ ಅವರ ಅನ್ನಕ್ಕೇ ಕಲ್ಲು ಬೀಳಲಾರಂಭಿಸಿದೆ! ತಕ್ಷಣ ನನಗೆ ಹತ್ತು ವರ್ಷಗಳ ಹಿಂದೆ ದಲಿತರ, ಹಿಂದುಳಿದವರ, ಬಡವರ ಉದ್ಧಾರಕ್ಕಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಶಿಕ್ಷಣದ ಪರವಾಗಿ ಹೋರಾಟ ಆರಂಭಿಸಿದ್ದ, ಹಲವು ಕನ್ನಡ ಮೇಷ್ಟ್ರುಗಳೂ ಸೇರಿದ್ದ 'ಪ್ರಗತಿಪರ ಚಿಂತಕ'ರು ಹೇಳುತ್ತಿದ್ದ 'ಕನ್ನಡ ಅನ್ನದ ಭಾಷೆಯಲ್ಲ' ಎಂಬ ಮಾತು ಈಗ ಈ ರೂಪದಲ್ಲಿ ನಿಜವಾಗುತ್ತಿರುವುದನ್ನು ಕಂಡು ಬೆಚ್ಚಿಬೀಳುವಂತಾಯಿತು!

ಪ್ರಯೋಜನಬುದ್ಧಿ, ಬುದ್ಧಿ ಕಲಿಸುವುದೇ ಹೀಗೆ. ಒಂದು ಕಡೆ ಕಣ್ಣು ಹೊಡೆದು ಮಲಗಿಸಿ ಇನ್ನೊಂದು ಕಡೆಯಿಂದ ಸುತ್ತಿ ಬಂದು ಮುಖಕ್ಕೇ ಹೊಡೆಯುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಸಮಯಕ್ಕೆ, ಒಂದೊಂದು ಕಡೆಗೆ. ಫಲಾನುಭವಿಗಳು ಕಾಯಬೇಕಷ್ಟೆ. ಕನ್ನಡ ಮಾಧ್ಯಮ ಶಿಕ್ಷಣಕ್ಕೆ ಮಾರಣಾಂತಿಕ ಪೆಟ್ಟು ಕೊಡುವಂತಿದ್ದ ಆ 'ಪ್ರಗತಿಪರ ಚಿಂತಕ'ರ ಆ ಅಂದಿನ ಇಂಗ್ಲಿಷ್ ಮಾಧ್ಯಮ ಹೋರಾಟದ ವಿರುದ್ಧ ಸಾಕಷ್ಟು ಬರೆದ, ವಾದಿಸಿದ ಮತ್ತು ಆ ಹಿನ್ನಲೆಯಲ್ಲಿ, ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಸರ್ಕಾರ ನೀಡಿದ ರಾಜ್ಯೋತ್ಸವ ಪ್ರಶಸ್ತಿಯನ್ನೂ ನಿರಾಕರಿಸಿದ್ದ ನಾನು ಹೆಚ್ಚೇನೂ ಹೇಳದೆ ಕನ್ನಡ ಮೇಷ್ಟ್ರುಗಳ ಅನ್ನ ರಕ್ಷಣೆಯ ಪ್ರಯತ್ನದ ಪುಣ್ಯವಾದರೂ ಸಿಗಲಿ ಎಂದು ಆ ಅಧ್ಯಾಪಕರು ಸಂಪಾದಿಸ ಬಯಸಿದ್ದ ಪುಸ್ತಕಕ್ಕೆ ಹಿಂದೆ ಬರೆದ ನನ್ನ ಎರಡು ಲೇಖನಗಳನ್ನು ಕಳಿಸಿಕೊಟ್ಟೆ.

## ರಾಷ್ಟ್ರೀಯತೆಯ ಕಡಲುಬ್ಬರದ ಪವಿತ್ರ ಸ್ನಾನದ ನಂತರ

ಇನ್ನು ಕಳೆದ ಕೆಲವು ವರ್ಷಗಳಲ್ಲಿ ಎದ್ದಿರುವ ರಾಷ್ಟ್ರೀಯತೆಯ ಕಡಲುಬ್ಬರದ ಹೆಬ್ಬಲೆಗಳಲ್ಲಿ ಮುಳುಗಿ ಪವಿತ್ರ ಸ್ನಾನ ಮಾಡಿ ಧನ್ಯತೆಯಿಂದ ಕಣ್ಣು ಬಿಡುತ್ತಿರುವ ಕನ್ನಡಿಗರು ತಮ್ಮ ಅನ್ನದ ದಾರಿಗಳೇ ಮೊಟಕಾಗುತ್ತಿರುವುದನ್ನು ಕಂಡು ಕಂಗಾಲಾಗುತ್ತಿರುವಂತಿದೆ. ಕೇಂದ್ರ ಸರ್ಕಾರದ ಹುದ್ದೆಗಳ ನೇಮಕಾತಿ, ಪ್ರವೇಶ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಿ ಎಂದು ಕೂಗಾಡತೊಡಗಿದ್ದಾರೆ. ಕೇಂದ್ರ ಸರ್ಕಾರ ಮೊದಲಿದ್ದ ಪ್ರಾಂತೀಯ ನೇಮಕಾತಿ ಮತ್ತು ಪ್ರವೇಶ ಪರೀಕ್ಷೆಗಳನ್ನು ರಾಷ್ಟ್ರೀಯಗೊಳಿಸಿ ಹಿಂದಿ-ಇಂಗ್ಲಿಷ್‌ಗಳಲ್ಲಿ ನಡೆಸಲಾರಂಭಿಸಿದ್ದು, ಇವನ್ನು ಕನ್ನಡದಲ್ಲಿ ನಡೆಸಿದರೆ ಕನ್ನಡಿಗರಿಗೆ ನ್ಯಾಯ ಸಿಕ್ಕೀತು ಎಂಬುದು ಬೆಪ್ಪು ಕನ್ನಡಿಗರ ಭಾವನೆ. ಶಿಕ್ಷಣವನ್ನೇ ಇಂಗ್ಲೀಷೀಕರಿಸಿ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸುವ ಮೂಲಕ ಕನ್ನಡಿಗರ ಉದ್ಯೋಗಾವಕಾಶಗಳನ್ನು ರಕ್ಷಿಸುವ ಹುಂಬ ಪ್ರಯತ್ನವಿದು.

ಬ್ಯಾಂಕು, ಅಂಚೆ ಕಛೇರಿ ಇತ್ಯಾದಿ ಜನಬಳಕೆಯ ಕಛೇರಿಗಳಲ್ಲಿದ್ದ ಕನ್ನಡ ಅರ್ಜಿ ನಮೂನೆಗಳು ಏಕೆ ಕಾಣೆಯಾದವು ಯೋಚಿಸಿ. ನಮ್ಮ ಶಿಕ್ಷಣ ಇಂಗ್ಲಿಷ್‌ಮಯವಾಗುತ್ತಿದ್ದಂತೆ ನಾವೇ ಅವನ್ನು ಬಳಸುವುದನ್ನು ನಿಲ್ಲಿಸಿದೆವು. ಈಗ ಕನ್ನಡ ಮಕ್ಕಳಿಗೆ ಕನ್ನಡ ಓದಲು ಬರೆಯಲು ಕಷ್ಟವೆನ್ನಿಸುವಂತಹ ಶಿಕ್ಷಣ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟು ಕನ್ನಡದಲ್ಲಿ ಪರೀಕ್ಷೆ ನಡೆಸಿ ಎಂದು ಕೇಳುವುದು ಮತ್ತೆ ಅದೇ ಹಳೆಯ ಗಾದೆ ಹೊಸ ಅರ್ಥರೂಪ ತಾಳಿ ಮುಖಕ್ಕೆ ಹೊಡೆದಂತಾಗುತ್ತದೆ: 'ಹೊಟ್ಟೆಗೆ ಹಿಟ್ಟು ಕೊಡದಿದ್ದರೂ ಜುಟ್ಟಿಗೆ ಮಲ್ಲಿಗೆಯನ್ನಾದರೂ ಕೊಡಿರಪ್ಪಾ!' ಇಂದು ಕನ್ನಡಿಗರು ನಿಜವಾಗಿ ಆಗ್ರಹಿಸಬೇಕಾದದ್ದು ಪ್ರಾಂತೀಯ ಭಾಷೆಯ ಜ್ಞಾನವನ್ನು ಕಡ್ಡಾಯ ಮಾಡಿದ್ದ ಹಳೆಯ ಪ್ರಾಂತೀಯ ನೇಮಕಾತಿ ವ್ಯವಸ್ಥೆಯನ್ನು ಮತ್ತು ಪ್ರವೇಶ ಪರೀಕ್ಷೆಗಳನ್ನು.

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಸುವರ್ಣಮುಖಿ** (ಸಿದ್ಧರಬೆಟ್ಟ ಆಸುಪಾಸಿನ ಅಧ್ಯಯನ) ಲೇ: **ಡಾ. ಸಿದ್ಧಲಿಂಗಯ್ಯ ಹೊಲತಾಳು** ಪ್ರ: **ಸ್ಟೂಡೆಂಟ್ ಬುಕ್ ಕಂಪನಿ**, ತುಮಕೂರು (೯೪೪೯೩೦೭೦೧೧) ಪು: **೪೬೪** ಬೆ: **ರೂ. ೪೦೦/–**

### ಒಂದು ವಿಶಿಷ್ಟ ಸ್ಥಳ ಸಂಕಥನ



ಸಿದ್ಧಗಂಗಯ್ಯ ಹೊಲತಾಳು ಅವರ ಸುವರ್ಣಮುಖಿ ಒಂದು ಕಾಲ್ನಡಿಗೆಯ ಪ್ರವಾಸ ಸಂಕಥನ. ಸಿದ್ಧರಬೆಟ್ಟದ ಸುತ್ತಣ ಊರುಗಳು, ಅಲ್ಲಿನ ಜನಬದುಕಿನ ಸಮೀಕ್ಷೆ ಇಲ್ಲಿದೆ. ಶೈಕ್ಷಣಿಕ ದೃಷ್ಟಿಗಳಿಗೆ ಮೀರಿದ ಸಾಮಾಜಿಕ ವಿವರಗಳಿರುವ ನಿರ್ದಿಷ್ಟ ಕಾಲ ಸ್ಥಳಗಳ ಅಡ್ಡಕೊಯ್ತವಿದು. ೨೦೧೫–೨೦೧೮ ನಡುವಣ ಕಾಲ ಮತ್ತು ಸಿದ್ಧರಬೆಟ್ಟ ಸೀಮೆಯ ಸ್ಥಳಸಂಕಥನ ಇಲ್ಲಿದೆ. ಇದರೊಂದಿಗೆ ಲೇಖಕರ ಬಾಲ್ಯದಿಂದ ಅಧ್ಯಾಪನ ನಿವೃತ್ತಿವರೆಗಿನ ಆತ್ಮಚರಿತ್ರೆ ಪ್ರಾದೇಶಿಕ ಸಂಕಥನದೊಂದಿಗೆ ಇಲ್ಲಿ ಬೆರೆತುಕೊಂಡಿದೆ. ೨೦೦–೩೦೦ ವರ್ಷಗಳಷ್ಟು ಹಿಂದಿನ ಕೆಲ ಪ್ರಾಕೃತಿಕ, ಚಾರಿತ್ರಿಕ ವಿವರಗಳೂ ಇಲ್ಲುಂಟು. ಇಲ್ಲಿ ವಿಶ್ಲೇಷಣೆ ಕಡಿಮೆ; ವರದಿ ಹೆಚ್ಚು. ಹಳ್ಳಿಗಳ ಬಗ್ಗೆ ಏನೂ ತಿಳಿಯದ ಪ್ಯಾಟೆ ಹೈಕಳು ಅಗತ್ಯವಾಗಿ ಓದಬೇಕಾದ ಪುಸ್ತಕವಿದು.

ಸಿದ್ಧರಬೆಟ್ಟದ ಸುತ್ತಣ ತರಿ–ಖುಷ್ಕಿ ಬೇಸಾಯ: ತೋಟಗಾರಿಕೆ, ಪುಷ್ಪೋದ್ಯಮ, ಕೋಳಿಸಾಕಾಣಿಕೆ, ಗಣಿಗಾರಿಕೆ, ಕುರಿ–ಮೇಕೆಸಾಕಾಣಿಕೆ, ಕೈಕಸುಬುಗಳು, ಶಾಲೆಗಳು, ಪುರಾತತ್ವ ವಿವರ ಇತ್ಯಾದಿಗಳು ಇಲ್ಲಿವೆ. ಹೆಚ್ಚಿನದಾಗಿ ತೋಟಗಾರಿಕೆಯ ಕಥನಕ್ಕೆ ಇಲ್ಲಿ ಆದ್ಯತೆ ನೀಡಲಾಗಿದೆ. ತೋಟಗಾರಿಕೆಯಿಂದ ತಿಂಗಳಿಗೆ ಸರಾಸರಿ ಕನಿಷ್ಟ ಐವತ್ತು ಸಾವಿರ ಆದಾಯ ಗಳಿಸಬಹುದು ಎಂಬುದಕ್ಕೆ ಹಲವಾರು ನಿದರ್ಶನಗಳು ಇಲ್ಲಿವೆ. ಹಲವಾರು ತೋಟಗಳ ನೇರ ಪರಿಚಯವೂ ಇಲ್ಲುಂಟು. ಹಾಗಾಗಿ ಇದನ್ನು ಕೃಷಿ, ತೋಟಗಾರಿಕಾ ಕೈಪಿಡಿ ಎಂತಲೂ ಕರೆಯಬಹುದು. ಯಾವ ಸೀಸನ್ನಿನಲ್ಲಿ ಯಾವ ಹೂವು ಎಲ್ಲಿ ಕಾಣಸಿಗುತ್ತದೆ? ಯಾವಾಗ ಸೊಗಡವರೆ ಸಿಗುತ್ತದೆ? ಜಲಪಾತ ನೋಡಲು ಯಾವಾಗ ಬರಬೇಕು? ಇತ್ಯಾದಿ ಮಾಹಿತಿಯನ್ನು ಇಲ್ಲಿ ನೀಡಿರುವುದರಿಂದ ಇದೊಂದು ಸ್ಥಳೀಯ ಇಕೊ ಅಗ್ರಿ ಟೂರಿಸ್ಟ್ ಗೈಡ್ ರೀತಿಯಲ್ಲು ಇದೆ.

ಯಾವ ಪ್ರದೇಶದಲ್ಲಿ ಅಡಿಕೆ, ತೆಂಗು, ಹುಣಸೆ ಸೂಕ್ತ? ಯಾವ ಭಾಗದಲ್ಲಿ ಕಾಡುಮರಗಳು ಸೂಕ್ತ? ಎಲ್ಲೆಲ್ಲಿ ಗಿಡಮೂಲಿಕೆ ವನ ಮಾಡಬಹುದು? ನಗರದಿಂದ ನಿವೃತ್ತ ಜೀವನ ನಡೆಸಲು ಬರುವವರು, ವಾರಾಂತ್ಯ ತೋಟಗಾರರು ಹೇಗೆ ಕೃಷಿಯಲ್ಲಿ ತೊಡಗಿಕೊಳ್ಳಬಹುದು? ಮಾರುಕಟ್ಟೆ ಹೇಗಿದೆ? ಗ್ರಾಮೀಣ ಆರ್ಥಿಕತೆ ಮತ್ತು ಬದುಕಿನ ಸಂಬಂಧಗಳು ಹೇಗಿವೆ? ಇತ್ಯಾದಿ ಮಾಹಿತಿ ಕೂಡ ಈ ಕೃತಿಯಲ್ಲಿ ಸಿಗುತ್ತವೆ. ಮತ್ತೆ ಮತ್ತೆ ಜಲಸಂವರ್ಧನೆ, ಸೆಂಬೇನೀರು, ತಲಪುರಿಗೆ, ಜಲಸಾಕ್ಷರತೆ ಮಾತುಗಳು ಇಲ್ಲಿ ಬರುತ್ತವೆ. ಎಲ್ಲೆಲ್ಲಿ ನೀರಿನ ಸಹಜ ಸೆಲೆಗಳಿವೆ; ಎಲ್ಲೆಲ್ಲಿ ಯಾವ್ಯಾವ ರೀತಿಯಲ್ಲಿ ನೀರನ್ನು ಸಂರಕ್ಷಿಸಿ, ಸಂವರ್ಧಿಸಿ ನಿರಂತರ ಕಾಪಾಡಿಕೊಳ್ಳಬೇಕು ಎಂಬ ಸಲಹೆಗಳೂ ಇಲ್ಲಿವೆ. ಜಲಸಾಕ್ಷರತೆಯನ್ನು ಮೂಡಿಸುವ ಕೆಲಸವೂ ಈ ಕೃತಿಯಲ್ಲಿದೆ.

ಈ ಕಥನದಲ್ಲಿ ತೌಲನಿಕ ವಿವರಗಳ ಜೊತೆ ಸಾಮಾಜಿಕ ಬದಲಾವಣೆಗಳನ್ನು ಹಿಡಿದಿಡುವ ಕೆಲಸವನ್ನೂ ಮಾಡಲಾಗಿದೆ. ಹಾಗೆಯೆ ತಮ್ಮ ತಿರುಗಾಟದ ಮತ್ತು ಬದುಕಿನ ಅನುಭವದ ಮೂಲಕ ಹತ್ತಾರು ಸಲಹೆಗಳನ್ನೂ ಸಿ.ಹೊ. ನೀಡಿದ್ದಾರೆ. ಬೇಸಾಯದಲ್ಲಿ ಅಂತರಬೆಳೆ ಬೆಳೆಯುವ ಹಾಗೆ ತೋಟಗಾರಿಕೆಯಲ್ಲೂ ಮಾವು, ಹುಣಸೆ, ಹಲಸು, ನುಗ್ಗೆ, ಸೀಬೆ, ಸಪೋಟ, ನೇರಳೆ ಇತ್ಯಾದಿ ಮಿಶ್ರಮರವಳಿ ಪದ್ಧತಿ ಇರುವ ಬಗ್ಗೆ ಹಾಗೂ ಮೀನುಕೃಷಿ, ಜೇನುಕೃಶಿ, ಕುಕ್ಕಟೋದ್ಯಮ, ಪುಷ್ಪೋದ್ಯಮ, ಮೊಲ ಸಾಕಾಣಿಕೆ, ಹೈನುಗಾರಿಕೆ, ಕುರಿಮೇಕೆ ಸಾಕಾಣಿಕೆ ಹೀಗೆ ಹತ್ತಾರು ಕೃಷಿಪೂರಕ ಉದ್ಯಮಗಳು ಜಾರಿಯಲ್ಲಿರುವ ಬಗ್ಗೆಯು ಚರ್ಚಿಸಲಾಗಿದೆ.

ಈ ಕೃತಿಯಲ್ಲಿ ಯಾವುದೆ ಚೌಕಟ್ಟುಗಳಿಲ್ಲ. ತಿರುಗಾಟದ ದಾರಿಯೆ ಇದರ ಚೌಕಟ್ಟು. ಯಾವುದು ಹೇಳಬೇಕು ಯಾವುದನ್ನು ಹೇಳಬಾರದು ಎಂಬ ಆಯ್ಕೆಗಳೂ ಇಲ್ಲ; ವರ್ಗೀಕರಣಗಳೂ ಇಲ್ಲ. 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಎಂಬಂತೆ ತಾವು ಕಂಡದ್ದನ್ನೆಲ್ಲ ಹೊಲತಾಳರು ನಿರೂಪಿಸುತ್ತ ಹೋಗಿದ್ದಾರೆ. ಇನ್ನಷ್ಟು ವಿವರಗಳು ಬೇಕೆನ್ನಿಸಿದೆಡೆ ವಿವರಗಳು ಇಲ್ಲದ ಹೋಲ್ದಾಲಿದು. ನಿರೂಪಣೆ, ವರದಿ, ಸಂಭಾಷಣೆ, ಭಾಷಣ ಎಲ್ಲವೂ ಇಲ್ಲಿವೆ. ಆದರು 'ಏನಣ್ಣೋ ಯಾರ್ಯಾರನ್ನೊ ಹೇಳಿದ್ದಿ ನಮ್ ಬಗ್ಗೆನೆ ಹೇಳಿಲ್ವಲ್ಲಣ್ಣೋ?' ಎಂದು ಯಾರಾದರೂ ಕೇಳಿಯಾರು ಎಂಬ ಮುಲಾಜಿಗೆ ಬಿದ್ದು, ನಿಷ್ಠುರತೆಯು ಇಲ್ಲದೆ ಕೃತಿ ತುಂಬಾ ವಿಸ್ತಾರವಾಗಿದೆ.

ದೊಡ್ಡಮ್ಮ, ಕಾವಲಮ್ಮ, ಗೊಲ್ಲಾಳಮ್ಮ (೩೬೫), ನೇಗಲಾಲದಮ್ಮ, ಮೂಗನಳ್ಳಿಯಮ್ಮ, ಚೆನ್ನಪಟ್ಟಣದಮ್ಮ (೪೦೬) ಹೀಗೆ ಹತ್ತಾರು ದೇವತೆಯರ ಉಲ್ಲೇಖ ಇಲ್ಲಿದೆ. ಇವರೆಲ್ಲ ಶಾಕ್ತರೋ, ಸಿದ್ಧಮಹಿಳೆಯರೊ ಹೆಚ್ಚಿನ ಅಧ್ಯಯನ ಆಗಬೇಕಿದೆ. ಜನಪದ ಹಾಡುಗಾತಿಯರಾದ ದೊಡ್ಡಕ್ಕ, ಪುಟ್ಟನರಸಮ್ಮ, ಲಕ್ಷ್ಮೀದೇವಮ್ಮ, ಗಂಗಕ್ಕ ಮುಂತಾದವರ ಪ್ರಸ್ತಾಪವಿದೆ. ಆದರೆ ಜನಪದ ಸಾಹಿತ್ಯದ ಸೊಗಡಿನ ಪ್ರಸ್ತಾಪವಿಲ್ಲ.

ನೂರಾರು ಹಲಸಿನ ಖಾದ್ಯ ತಯಾರಿಸುವ ಮಂಜಮ್ಮ (೧೪೯), ಕುರಿಮೇಕೆ ಸಾಕಾಣಿಕೆ ರತ್ನಮ್ಮ (೩೮೫), ಹೈನುಗಾರಿಕೆಯ ರಾಜೇಶ್ವರಿ (೨೯೬), ಕಲ್ಲುಬಾವಿ ತೋಟದ ಈರಜ್ಜಿ (೨೯೮), ಸಹಕಾರಿ ಬೇಸಾಯದ ಮುಯ್ಯಾಳು ದೊಡ್ಡಮಣಿ (೧೯೨), ಗ್ರಾಮಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಿ (೩೯೩) ಮೊದಲಾದ ಹಲವು ಮಹಿಳಾ ಸಾಧಕಿಯರ ವಿವರಗಳು ಇಲ್ಲಿವೆ. ಆದರೆ ಇಡಿ ಪ್ರದೇಶ ಪುರುಶಪ್ರಧಾನ ಆಗಿರುವ ಹಾಗೆಯೆ ಇಲ್ಲಿನ ಸಮೀಕ್ಷೆ ಇದೆ. ಹೊಲತಾಳರು ಇಲ್ಲಿನ ಮಹಿಳಾ ಸಾಧನೆ ಬಗ್ಗೆ ಇನ್ನಷ್ಟು ಫೋಕಸ್ ಮಾಡಬಹುದಿತ್ತು.

ಇಲ್ಲೆಲ್ಲ ಹತ್ತಾರು ಬಗೆಯ ಪ್ರಾದೇಶಿಕ ಪದಗಳ ಬಳಕೆ ಇದೆ. ಉದಾಹರಣೆಗೆ ಪಣೆಗಾರ, ಶ್ಯಡೆಗಿಡ, ಮಜರೆ ಗ್ರಾಮ, ಸೆಂಬೇನೀರು, ತಲಪುರಿಗೆ ಇತ್ಯಾದಿ. ಇವೆಲ್ಲ ಸ್ಥಳೀಯರಿಗೆ ಪರಿಚಿತ. ಆದರೆ ಇತರರಿಗೆ ಅವುಗಳ ಅರ್ಥವಿವರ ಅಗತ್ಯವಿದೆ. ಹಾಗಾಗಿ ಅನುಬಂಧವಾಗಿ ಪರಿಭಾಷಾ ಕೋಶ ಇದ್ದರೆ ಚೆನ್ನಿತ್ತು.

ಈ ಪುಸ್ತಕವನ್ನು ಓದಿದ ನಂತರ ನಗರಿಗರಿಗೆ ನಾವೂ ಒಂದು ತೋಟ ಮಾಡೋಣ ಅನ್ನಿಸಬಹುದು. ಆದರೆ ತೋಟಗಾರಿಕೆ, ಹೈನುಗಾರಿಕೆಯನ್ನೆ ಮುಖ್ಯವಾಗಿ ಬಣ್ಣಿಸುವ ಇದು ಒಂದು ರಮ್ಯವಾದ ಬರವಣಿಗೆ. ಬೆಳೆದ ತೋಟ ಕಣ್ಣಿಗೆ ಕಂಡಾಗ ವರ್ಣಿಸುವುದು, ವಾರ್ಷಿಕ ಉತ್ಪತ್ತಿ ಕುರಿತು ವರದಿ ನೀಡುವುದು ಮೇಲ್ನೋಟಕ್ಕೆ ರಮ್ಯವಾಗಿಯೆ ಕಾಣುತ್ತದೆ. ಆದರೆ ತೋಟದ ಹಿಂದಿನ ಶ್ರಮ, ಸಂಗೋಪನೆ, ಉತ್ಪತ್ತಿ, ಮಾರುಕಟ್ಟೆ ಸಮಸ್ಯೆಗಳನ್ನೆಲ್ಲ ಇಲ್ಲಿ ಚರ್ಚಿಸಿರುವುದೆ ಕಡಿಮೆ. ಹೊರಗಿನವರಿಗೆ ಒಳಗಿನ ಬವಣೆ ಕಾಣದು. ಒಳಗಿದ್ದೂ ಹೊಲತಾಳರು ಈ ಕೃತಿಯಲ್ಲಿ ಹೊರಗಣವರ ಹಾಗೆಯೆ ಕಾಣುತ್ತಾರೆ.

**–ರಾಮಲಿಂಗಪ್ಪ ಟಿ.. ಬೇಗೂರು**

ಪು: **ದಿ ಡೈರಿ ಆಫ್ ಎ ಯಂಗ್ ಗರ್ಲ್** ಲೇ: **ಆ್ಯನ್ ಫ್ರಾಂಕ್** ಕನ್ನಡಕ್ಕೆ: **ನಾಗರೇಖಾ ಗಾಂವಕರ್** ಪ್ರ: **ನೆಲೆ ಪ್ರಕಾಶನ ಸಂಸ್ಥೆ**, ಸಿಂದಗಿ (೯೪೮೧೦೮೨೫೧೮) ಪು: **೩೮೪** ಬೆ: **ರೂ. ೩೨೦/–**

### ಆ್ಯನ್ ಎಂಬ ಕೌತುಕ ಮತ್ತು ಸಾಕ್ಷಿಪ್ರಜ್ಞೆ




**ಈ** ಪುಸ್ತಕವನ್ನು ಓದಿ ಮುಗಿಸಿದ ಮೇಲೆ ಸುಧಾರಿಸಿಕೊಳ್ಳಲೇ ಕೆಲವು ಘಳಿಗೆಗಳು ಬೇಕಾಗುತ್ತದೆ. ಈಗಾಗಲೇ ಜಗತ್ತಿನ ಎಪ್ಪತ್ತು ಭಾಷೆಗಳಿಗೆ ಅನುವಾದವಾಗಿರುವ ಇದನ್ನು ಬರೆದ ಆ್ಯನ್ ಫ್ರಾಂಕ್ ಬದುಕಿದ್ದರೆ ಆಕೆಗೆ ತೊಂಬತ್ತೆರಡು ವರ್ಷ ಆಗಿರುತ್ತಿತ್ತು. ವಿಶೇಷವೆಂದರೆ, ತೊಂಬತ್ತೆರಡು ವರ್ಷ ಬದುಕಿದವರಿಗೂ ಇರುತ್ತದೆಂದು ನಿರೀಕ್ಷಿಸಲು ಬಾರದ ಅಪಾರ ಪ್ರಬುದ್ಧತೆಯನ್ನು ಆಕೆ ಕೇವಲ ಹದಿಮೂರರಿಂದ ಹದಿನೈದನೇ ವಯಸ್ಸಿನಲ್ಲಿ ತೋರುತ್ತಾಳೆ. 'ದಿ ಡೈರಿ ಆಫ್ ದಿ ಯಂಗ್ ಗರ್ಲ್' ಕೃತಿಯನ್ನು ಜಗತ್ತಿನ ಅಚ್ಚರಿ ಎಂದು ಪರಿಗಣಿಸಬಹುದು. ಇದು ತೆರೆದು ತೋರುವ ಸಂಗತಿಗಳು ಒಂದೆರಡಲ್ಲ. ನಾಜಿಗಳಿಂದ ತಪ್ಪಿಸಿಕೊಂಡು ಎರಡು ವರ್ಷ ಇಲಿಗಳು ಬಿಲದಲ್ಲಿದ್ದಂತೆ ಗುಪ್ತವಾಸ ಅನುಭವಿಸಿದ ಎಂಟುಜನರ ಬದುಕಿನ ವಿವರ ಇಲ್ಲಿದೆ. ಆದರಿದು ಕೇವಲ ನಾಝಿಗಳ ಕ್ರೌರ್ಯವನ್ನು ಮಾತ್ರ ನಮಗೆ ತೋರಿಸುವುದಿಲ್ಲ. ಜೊತೆಗೇ ನಮ್ಮ ನಮ್ಮ ಅಂತರಂಗವನ್ನೇ ಮಗುಚಿ ಹಾಕಿಬಿಡುತ್ತದೆ. ಮನುಕುಲದ ಬದುಕಿನ ಗುರಿ ಏನು? ಎಂಬ ತಾತ್ವಿಕ ಪ್ರಶ್ನೆಗಳನ್ನು ಎತ್ತುತ್ತದೆ. ಒಂದೆಡೆ ದ್ವೇಷದ ಪರಾಕಾಷ್ಠೆಯಲ್ಲಿ ಜಗತ್ತು ಮುಳುಗಿದ್ದರೆ, ಇನ್ನೊಂದೆಡೆ ಆ ದ್ವೇಷದ ಸಮಾನ ಫಲಾನುಭವಿಗಳು ಜೀವ ಉಳಿಸಿಕೊಳ್ಳುವ ಒಂದೇ ಉದ್ದೇಶದಲ್ಲಿ ಜೊತೆಗೇ ಬದುಕುತ್ತಿರುವಾಗಲೂ ಇರುವ ಹೊಂದಾಣಿಕೆಯ ಹಿಂಸೆಯನ್ನೂ ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತದೆ. ಈ ಎರಡೂ ಮಗ್ಗುಲನ್ನು ಹೊಂದಿರುವುದೇ ಈ ಕೃತಿಯ ಅನನ್ಯತೆ ಮತ್ತು ಮಹತ್ವವಾಗಿದೆ. ಮನುಷ್ಯರು ಪರಸ್ಪರರನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ, ಪರಸ್ಪರರನ್ನು ನಿಯಂತ್ರಿಸಲು ಪ್ರಯತ್ನಿಸುವುದರ ಪರಿಣಾಮವಾಗಿ ಅನಾವಶ್ಯಕ ಜಗಳ, ಅವಮಾನ, ಕಿರಿಕಿರಿಯಾಗುವುದನ್ನು ಈ ಚಿಕ್ಕ ಬಾಲೆ ಖಚಿತವಾಗಿ ಗುರುತಿಸುತ್ತಾಳೆ. 'ದೊಡ್ಡವರ' ಮೂರ್ಖ ನಿಲುವುಗಳ ಬಗೆಗೆ ಅವಳಿಗೆ ತೀವ್ರ ಆಕ್ಷೇಪಣೆಗಳಿವೆ. "ದೊಡ್ಡವರು ಬಹಳ ಮೂರ್ಖ ಮತ್ತು ತಿಳಿಗೇಡಿಗಳು ಇರುತ್ತಾರೆಯೇ?" ಎನ್ನುತ್ತಾ ಮುಂದುವರಿಸುವ ಆಕೆ, "ಕೇವಲ ಪ್ರೇಮ ಮತ್ತು ಭಕ್ತಿ, ಶ್ರದ್ಧೆ ಮಾತ್ರ ಪೀಟರ್, ಮಾರ್ಗೋಟ್, ಎಲಿವೊಸನ್ ಮತ್ತು ನನ್ನನ್ನು ಈ ನಾಲ್ಕು ಜನರನ್ನು ಕಾಪಾಡಬಲ್ಲದು. ಆದರೆ ಅದು ನಮಗ್ಯಾರಿಗೂ ಇಲ್ಲಿ ಸಿಗದು. ಯಾರೂ ಕೂಡಾ, ವಿಶೇಷವಾಗಿ ಇಲ್ಲಿರುವ "ಮೂಢ ಸರ್ವಜ್ಞರು" ನಮ್ಮನ್ನು

ಅರ್ಥಮಾಡಿಕೊಳ್ಳರು. ಯಾಕೆಂದರೆ ನಮ್ಮನ್ನಿವರು ಬಹಳ ಸಂವೇದನಾಶೀಲರೆಂದು, ವಿಚಾರಗಳಲ್ಲಿ ಅವರೆಲ್ಲರಿಗಿಂತ ಬಹಳ ಮುಂದುವರೆದವರೆಂದು, ಇವರುಗಳು ಎಂದಿಗೂ ತಮ್ಮ ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲಾರರು." (ಪು:೨೧೧) ಈ ಮಾತುಗಳನ್ನು ಕೇವಲ ವೈಯಕ್ತಿಕ ನೆಲೆಯಲ್ಲಷ್ಟೇ ಗುರುತಿಸದೆ, ಸಾಮುದಾಯಿಕ ನೆಲೆಯಿಂದಲೂ ಗುರುತಿಸಿದರೆ, ಇಡೀ ಜಗತ್ತಿನಲ್ಲಿ ನಡೆದು ಹೋದ, ನಡೆಸಲು ಪ್ರಯತ್ನಿಸುತ್ತಿರುವ ಎಲ್ಲಾ ಹಿಂಸಾಮೂಲದ ಅಧಿಕಾರ ರಾಜಕಾರಣದ ಹಿಂದಿನ ಕ್ಷುಲ್ಲಕತೆಯನ್ನು ಅರಿಯಬಹುದು. ಮತ್ತು ಎಲ್ಲ ವಿಘಟನೆಗಳ ಹಿಂದಿರುವ ಕಾರಣಗಳನ್ನು ಅರಿಯಬಹುದು. ಲೋಕದ ವ್ಯವಹಾರಗಳಿಂದ ದೂರವಿದ್ದೂ, ಕೇವಲ ಕಿಟಕಿಯಿಂದ ನೋಡಿದ ದೃಶ್ಯದಲ್ಲೇ ಅವಳು ಹೆಂಗಸರ ಕುರಿತು ಆಡುವ ಮಾತುಗಳು ಅಚ್ಚರಿ ಹುಟ್ಟಿಸುತ್ತದೆ: "ನಿಧಾನಕ್ಕೆ ನಾನು ಒಂದೇ ನೋಟದಲ್ಲಿ ಹೆಂಗಸರನ್ನು ತಿಳಿದುಕೊಳ್ಳುವುದನ್ನು ಕಲಿತೆ. ಬಟಾಟೆಯಂತೆ ಊದಿಕೊಂಡವರನ್ನು, ಕೆಂಪು ಅಥವಾ ಹಸಿರು ಕೋಟು ಧರಿಸಿರುವವರನ್ನು, ತುಳಿತಕ್ಕೊಳಗಾದ ಹಿಮ್ಮಡಿಯವರನ್ನು ಮತ್ತು ತಮ್ಮ ತೋಳುಗಳಲ್ಲಿ ಬ್ಯಾಗುಗಳನ್ನು ಹೊತ್ತ ಹೆಣ್ಣುಗಳನ್ನು ತಿಳಿದುಕೊಳ್ಳುವುದನ್ನು ಕಲಿತೆ. ಅವರ ಮುಖಗಳು ಅವರವರ ಗಂಡಂದಿರ ಮನೋಧರ್ಮಕ್ಕೆ ಅನುಗುಣವಾಗಿ ಒಂದೋ ಕ್ರೂರವಾಗಿ ಕಾಣುತ್ತಿದ್ದವು, ಇಲ್ಲ ಕರುಣಾಪೂರಿತವಾಗಿದ್ದವು." ಇಂತಹ ಸೂಕ್ಷ್ಮ ನೋಟವೊಂದು ಸಮಾಜಕ್ಕೆ ಸಾಧ್ಯವಾಗುವುದೇ ಆದರೆ, ಆ ಸಮಾಜದ ರಾಚನಿಕ ವ್ಯವಸ್ಥೆಯ ಸ್ವರೂಪವೇ ಭಿನ್ನವಾಗುವುದರಲ್ಲಿ ಸಂಶಯವಿಲ್ಲ.

ವ್ಯಕ್ತಿನೆಲೆಯಲ್ಲಿ ಹುಟ್ಟುವ ಇಲ್ಲಿನ ಚಿಂತನೆಗಳು ಸಾಮುದಾಯಿಕ ನೆಲೆಯಲ್ಲಿ ವಿಸ್ತರಿಸುವುದು ಮತ್ತು ಒಂದರೊಡನೊಂದು ಹೊಂದಿರುವ ಸಂಬಂಧವನ್ನು ತನಗರಿವಿಲ್ಲದೇ ಓದುಗರಿಗೆ ತೋರುವುದು ಈ ಕೃತಿಯ ಹೆಗ್ಗಳಿಕೆ. ಆ್ಯನ್ ತನ್ನ ಮತ್ತು ಪೀಟರ್‌ನ ನಡುವೆ ಅರಳಿದ ಪ್ರೇಮದ ಕುರಿತು ತನ್ನ ಪೋಷಕರು ಹೇಗೆ ಯೋಚಿಸಬೇಕು ಎಂದು ಬಯಸುತ್ತಾಳೋ ಅದೇ ರೀತಿಯ ನಿಲುವನ್ನು ಯಹೂದಿಗಳ ಕುರಿತು ಸಮಾಜವು ಹೊಂದಿರಬೇಕು ಎಂದು ಭಾವಿಸುತ್ತಾಳೆ. ಅಂದರೆ, ತನ್ನ ಗುಪ್ತವಾಸದ ಬದುಕಿನಲ್ಲಿನ ಎಲ್ಲ ಏಕಾಂಗಿತನ, ಸಿಟ್ಟು, ಸೆಡವುಗಳನ್ನು ಮತ್ತೆ ಮತ್ತೆ ಪುನರ್ ಪರಿಶೀಲಿಸುತ್ತಾ ಅದನ್ನು ಬದುಕಿನೆಡೆಗಿನ ಆಶಾವಾದಕ್ಕೆ ತಿರುಗಿಸಿಕೊಳ್ಳುತ್ತಾ, ಅದನ್ನೂ ತಮಾಷೆಯ ಸಂಗತಿಯಾಗಿ ನಿರೂಪಿಸುತ್ತಾ ಮುನ್ನಡೆಯುವ ಆಕೆ, ನಾಲ್ಕು ಜನರು ಒಟ್ಟಿಗೆ ಇರುವಾಗ ಇದೆಲ್ಲ ಸಹಜ ಎಂದು ಹೇಳುತ್ತಲೇ, ನಮ್ಮನ್ನೂ ಯೋಚಿಸುವಂತೆ ಮಾಡುತ್ತಲೇ, ಸಮಾಜದಲ್ಲಿರುವ ಯಾವುದೇ ಒಂದು ಸಮುದಾಯ ಎಲ್ಲರಂತೆ ತಪ್ಪು ಒಪ್ಪುಗಳನ್ನು ಮಾಡುತ್ತದಲ್ಲವೇ? ಹಾಗಿದ್ದ ಮೇಲೆ ಯಹೂದಿಗಳೆಡೆಗೆ ಮಾತ್ರ ಯಾಕೆ ಅಸಹನೆ? ಎಂದು ಪ್ರಶ್ನಿಸುತ್ತಾಳೆ. "ಜರ್ಮನ್‌ರ ದಯೆಯಲ್ಲಿ ಬದುಕುತ್ತಿರುವ ಯಾವುದೇ ವ್ಯಕ್ತಿ ಆತ ಯಹೂದಿಯಾಗಿರಬಹುದು ಅಥವಾ ಕ್ರೈಸ್ತನಾಗಿರಬಹುದು, ಹಾಗೆಂದು ಆತ ಸದಾ ಸುಮ್ಮನೇ ಬದುಕಲು ಸಾಧ್ಯವೇ? ಎಲ್ಲವನ್ನೂ ಸಹಿಸುತ್ತಾ, ಮೂಕವಾಗಿ ಇರುವುದು. ಇದಂತೂ ಪ್ರತ್ಯಕ್ಷವಾಗಿ ಅಸಾಧ್ಯದ ಮಾತೆಂಬುದು ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹಾಗಿದ್ದ ಮೇಲೆ ಜನರೇಕೆ ಯಹೂದಿಗಳು ಹೀಗೆ ಇರಬೇಕೆಂದು ಬಯಸುತ್ತಾರೆ?"(೩೧೩) ಈ ಮಾತನ್ನು ಭಾರತೀಯ ಮುಸ್ಲಿಮರ ಬಗೆಗೆ, ಪ್ಯಾಲೆಸ್ಟೈನರ ಬಗೆಗೆ ಅಥವಾ ಜಗತ್ತಿನ ಯಾವುದೇ ಅಲ್ಪಸಂಖ್ಯಾತರ ಬಗೆಗೂ ಕೇಳಿಕೊಳ್ಳಬೇಕಿದೆ.

ಅತ್ಯಂತ ಖಚಿತ ರಾಜಕೀಯ ನೋಟ ಆಕೆಗಿದೆ. ದೊಡ್ಡ ಜನರು, ರಾಜಕಾರಣಿಗಳು, ಬಂಡವಾಳಶಾಹಿಗಳಷ್ಟೇ ಸಾಮಾನ್ಯ ವ್ಯಕ್ತಿಗಳೂ ಯುದ್ಧಾಪರಾಧಿಗಳು ಎನ್ನುವ ಆಕೆ ಮನುಕುಲದ ನಾಶ ಮತ್ತು ಮರುಕಟ್ಟುವಿಕೆಗಳ ಬಗ್ಗೆ ಮಾತಾಡುತ್ತಾಳೆ. ತಾನು ಬರಹಗಾರಳಾಗಿ ಸತ್ತ ಮೇಲೂ ಬದುಕಬೇಕೆಂದು ಕನಸಿದ, ಗುಪ್ತವಾಸದ ಯಾತನೆಯನ್ನು ಭವಿಷ್ಯದ ಕನಸಿನಲ್ಲಿ ಸಹಿಸಿದರೂ ಯಾತನಾಶಿಬಿರದಲ್ಲಿ ಕೊನೆಯಾದ ಈ ಪ್ರತಿಭೆ ಇಂದಿಗೂ ತನ್ನ ಡೈರಿಯ ಬರಹದಿಂದ ಜಗತ್ತನ್ನು ಪೊರೆಯಬಲ್ಲಳು, ಓದಿ ಅರಿತಲ್ಲಿ!

ಕೃತಿಯನ್ನು ಸಶಕ್ತವಾಗಿ ಕನ್ನಡಕ್ಕೆ ತಂದ ನಾಗರೇಖಾರಿಗೆ ಧನ್ಯವಾದಗಳು.

**–ಸಬಿತಾ ಬನ್ನಾಡಿ**

ಪು: **ಗಿಣಿ ಬಿಸ್ಕತ್ತು** (ಕಾದಂಬರಿ) ಲೇ: **ಆಲೂರು ದೊಡ್ಡನಿಂಗಪ್ಪ** ಪ್ರ: **ಪಂಪ ಪ್ರಕಾಶನ**, ಮೈಸೂರು (೯೮೬೫೫೪೯೪೨೫) ಪು: **೧೬೩** ಬೆ: **ರೂ, ೧೫೦/–**

## ಬಾಲಲೀಲಾ ವಿನೋದ ಪ್ರಸಂಗಗಳ ಹರಿದ ಹಚ್ಚಡ

ಇದು ಈಗಾಗಲೇ ಮೂರು ಕವನ ಸಂಕಲನಗಳನ್ನು ಪ್ರಕಟಿಸಿ ಕವಿಯಾಗಿ ಗುರುತಿಸಲ್ಪಟ್ಟಿರುವ ಆಲೂರು ದೊಡ್ಡ ನಿಂಗಪ್ಪನವರ ಬಾಲಲೀಲಾ ಪ್ರಸಂಗಗಳ ಸಂಗ್ರಹ. ಕೊನೆಯಲ್ಲಿ ಕುಡಿಮೀಸೆಯ ಯುವಕನ ಒಂದು ಪ್ರೇಮ ಪ್ರಸಂಗ ದಾಖಲಾಗಿರುವುದಾದರೂ ಈ ಸಂಗ್ರಹ ಮುಖ್ಯವಾಗಿ ಬಾಲ್ಯದ ನೆನಪುಗಳ ಸಂಗ್ರಹವೇ ಆಗಿದೆ, ತುಮಕೂರು ಜಿಲ್ಲೆಯ ತಿಪಟೂರಿನ ಬಳಿಯ ಆಲೂರಿನ ಸುತ್ತಮುತ್ತಲ ಹಳೇಪಾಳ್ಯ, ಅಣ್ಣಾಪುರ, ಸಾರ್ಥವಳ್ಳಿ ಇತ್ಯಾದಿ ಊರುಗಳ ವ್ಯಾಪ್ತಿಯಲ್ಲಿನ ತಮ್ಮ ವಿವಿಧ ಬಾಲ ಚಟುವಟಿಕೆಗಳ ನಿರೂಪಣೆಯ ಮೂಲಕ ಲೇಖಕರು ಕಟ್ಟಿಕೊಡುವ ಈ ಪ್ರಸಂಗಗಳು ಕುಗ್ರಾಮವೊಂದರ ಒಂದು ಬಡ ಕುಟುಂಬದ ಕಷ್ಟ ಸುಖಗಳು, ಆ ಕುಟುಂಬದ ಬಾಲಕನೊಬ್ಬ ತನ್ನ ಬಾಳು ಕಟ್ಟಿಕೊಳ್ಳಲು



ಪಡುವ ಪಡಿಪಾಟಲುಗಳನ್ನು ಒಳಗೊಂಡಿದ್ದು, ಒಂದು ಕಾಲದ ಒಂದು ಗ್ರಾಮಜೀವನದ ಹಲವು ಮಗ್ಗಲುಗಳನ್ನೂ ನಮಗೆ ಪರಿಚಯಿಸುತ್ತದೆ. ಇದೇನೂ ಬಹು ಹಿಂದಿನ ಕಾಲಕ್ಕೆ ಸೇರಿದ ಗ್ರಾಮಜೀವನದ ನೆನಪುಗಳಲ್ಲ. ಎಪ್ಪತ್ತು ಎಂಭತ್ತರ ದಶಕದವು. ಆದರೂ ಎಷ್ಟು ದೂರದವು ಅನ್ನಿಸಿ ಕಳೆದ ಮುವ್ವತ್ತು ವರ್ಷಗಳಲ್ಲಿ ಬದುಕು ಎಷ್ಟು ವೇಗವಾಗಿ ಮತ್ತು ತೀವ್ರವಾಗಿ ಬದಲಾಗಿದೆ ಎಂದು ಆಶ್ಚರ್ಯವಾಗುತ್ತದೆ.

ತಮ್ಮ ತಂದೆ–ತಾಯಿಯನ್ನು ತಮ್ಮ ತಾತ ಮನೆಯಿಂದ ಹೊರಹಾಕಿದಾಗ ಈ ಮಡಿವಾಳ ದಂಪತಿಗಳಿಗೆ ಕುಂಬಾರ ಕುಟುಂಬವೊಂದು ವಸತಿ ಕಲ್ಪಿಸಿಕೊಡುವ ಮತ್ತು ತಮ್ಮ ತಾಯಿಗೆ ದಿನಗಟ್ಟಲೆ ಹೆರಿಗೆ ನೋವನ್ನನುಭವಿಸಿದರೂ ಹೆರಿಗೆಯಾಗದೆ ಕೊನೆಗೆ ಗಾಡಿ ಕಟ್ಟಿಕೊಂಡು ತಿಪಟೂರಿನ ಆಸ್ಪತ್ರೆಗೆ ಹೋದಾಗ ಅಲ್ಲಿ ತಾವು ಹುಟ್ಟಿದ ಘಟನೆಯ ವಿವರದೊಂದಿಗೇ ಆರಂಭವಾಗುವ ಈ ಕೃತಿ ನಂತರದಲ್ಲೇ ತನ್ನ ಕತ್ತೆ ಸವಾರಿ ಮತ್ತು ತನ್ನ ಕುಟುಂಬದ ಕತ್ತೆ ಮೇಯಿಸುವ ಕಸುಬಿನ ವಿವರಗಳಿಗೆ ಜಿಗಿದು ಕುತೂಹಲ ಹುಟ್ಟಿಸುತ್ತದಾದರೂ, ಮುಂದೆ ಈ ಕೃತಿಯಲ್ಲಿ ಎಲ್ಲಿಯೂ ಒಂದು ಕತ್ತೆಯಾಗಲೀ ಅಥವಾ ಕತ್ತೆ ಮೇಯಿಸಿದ ನೆನಪಾಗಲೀ ಅಥವಾ ಆ ನಿರೂಪಣೆಯಲ್ಲಿದ್ದ ಹಲವು ನೆಂಟರಿಷ್ಟರ ಪಾತ್ರಗಳಾಗಲೀ, ಕಾಣದೆ ಈ ಕೃತಿಯ ಸ್ವರೂಪದ ಬಗ್ಗೆ ಗೊಂದಲ ಉಂಟಾಗುತ್ತದೆ. ಇದನ್ನು ಲೇಖಕರು ಕಾದಂಬರಿ ಎಂದು ಕರೆದಿರುವರಾದರೂ, ಇದರ ರಚನೆಯ ಯಾವ ಸ್ತರದಲ್ಲೂ ಇದು ಕಾದಂಬರಿಯಾಗಿರದೆ ಕೆಲ ಬಿಡಿ ನೆನಪುಗಳನ್ನು ಸೇರಿಸಿ ಹೊಲೆದ ಹರಕಲು ಹಚ್ಚಡ ಮಾತ್ರವೆನಿಸುತ್ತದೆ. ಬಹುಶಃ ತಮ್ಮ ಬಾಲ್ಯ ಸಹಜ ಕುತೂಹಲ ಹುಟ್ಟಿಸಿ ಮನಸ್ಸಿನಲ್ಲಿ ಚಿತ್ರಗಳಾಗಿ ಅಚ್ಚೊತ್ತಿದ ನೆನಪುಗಳನ್ನು–ಉದಾ: ಹುಡುಗಿಯೊಬ್ಬಳು ಋತುಮತಿಯಾದಾಗ ನೆರೆಹೊರೆಯ ಹೆಂಗಸರ ತಾರಾಟ, ನಂತರ ನಡೆಸುವ ಔಪಚಾರಿಕತೆಗಳು– ಇಲ್ಲಿ ದಾಖಲಿಸಿದ್ದಾರೆ. ಹಾಗಾಗಿಯೇ ಇಲ್ಲಿನ ನೆನಪುಗಳು ಮುಖ್ಯ ಅಮುಖ್ಯಗಳ ಭೇದವಿಲ್ಲ, ವಿವರಗಳೊಂದಿಗೆ ಚಿತ್ರವತ್ತಾಗಿವೆ. ಆದರೆ ಇವೆಲ್ಲ ಸೇರಿ ಇಲ್ಲಿ ನಿರೂಪಿತವಾಗಿರುವ ಬದುಕು ಇಲ್ಲಿ ಮುಖ್ಯವಾಗಿ ಬರುವ ಲೇಖಕರ ತಂದೆ ತಾಯಿಯದ್ದೂ ಸೇರಿ ಯಾವ ಪಾತ್ರವೂ ಸ್ಫುಟವಾಗಿ ಮೂಡಿ ಬರದಷ್ಟು ಬಹು ಸ್ಥೂಲವಾಗಿದ್ದು, ಅದರಿಂದ ಓದುಗರ ಮನಸ್ಸಿಗೆ ತಾಕಬಹುದಾದ ಮಹತ್ವವೆನಿಸುವ ಯಾವುದೇ 'ಧ್ವನಿ' ಹೊರಡದೆ ನಿರಾಶೆಯಾಗುತ್ತದೆ.

ಹಾಗೆಂದ ಮಾತ್ರಕ್ಕೆ ಈ ಹರಕಲು ಹಚ್ಚಡದ ತುಂಡು ಬಟ್ಟೆಗಳ ಬಣ್ಣಗಳು ನಮ್ಮನ್ನು ಸೆಳೆಯದೆ ಇರವು. ಧೋ ಎಂದು ಮಳೆ ಸುರಿದಾಗ ಮನೆಯೆಲ್ಲ ಸೋರಿ ಆ ಮಣ್ಣಿನ ಗೋಡೆ ಸೀಗೆ ಛಾವಣಿಯ ಮನೆ ಬಿದ್ದೇ ಹೋಗುವ ಆತಂಕದಲ್ಲಿ ಇಡೀ ಕುಟುಂಬ ಪಡುವ ಪಾಡು, ಬಾಲಕ ತನ್ನ ಮುಗ್ಧತೆಯಲ್ಲಿ ಊರ ಹಿರಿಯರಿಗೆ ತನ್ನಪ್ಪ ತೋಟಗಳಿಂದ ಕಾಯಿ ಕದ್ದು ಮನೆಯಲ್ಲಿ ಮುಚ್ಚಿಟ್ಟಿದ್ದನ್ನು ಹೇಳುವ ಪ್ರಸಂಗ, ಸಣ್ಣಪುಟ್ಟ ಆಸೆ ಈಡೇರಿಸಿಕೊಳ್ಳಲು ತಾನೂ ಹೀಗೆ ಕಾಯಿ ಕದಿಯಲು ಹಾಕುವ ಹೊಂಚುಗಳು, ಊಟಕ್ಕಾಗಿ ವಿವಿಧೆಡೆ ಮೀನು ಹಿಡಿಯಲು ಪಡುವ ಭಂಗ, ತಂದೆ ತಾಯಿಗಳೊಂದಿಗೆ ಕೂಲಿಗಾಗಿ ಪರೂರಿಗೆ ಬಂದು ಮಳೆಗಾಲದ ರಾತ್ರಿಗಳಲ್ಲಿ ತಲೆ ಮೇಲೆ ಸೂರಿಲ್ಲದೆ ಅಲೆಯುವ ಅನುಭವ, ಲೇಖಕನ ಬಾಡೂಟದ ಪ್ರೀತಿ, ಶಾಲೆಗೆ ಹೋಗಲು ಇಷ್ಟಪಡದೆ ಅನುಭವಿಸುವ ಶಿಕ್ಷೆಗಳ ವೈವಿಧ್ಯ ಇತ್ಯಾದಿಗಳು ಸಾಕಷ್ಟು ಸ್ವಾರಸ್ಯಕರವಾಗಿಯೇ ಮೂಡಿವೆ. ಅದರಲ್ಲೂ ಊರ ಜಾತ್ರೆಯ ದಿನ ಕೊಬ್ಬಿದ ಹಂದಿಯೊಂದನ್ನು ಮಾಂಸಕ್ಕಾಗಿ ಕೊಲ್ಲುವ ವಿಧಾನದ ಸವಿವರವಾದ ನಿರೂಪಣೆ ಮತ್ತು ಅದರಲ್ಲಿನ ಪಾಲಿಗಾಗಿ ತನ್ನ ತಂಗಿಯೊಂದಿಗೆ ಬಂದು ಕಾಯುವಲ್ಲಿನ ತಹತಹ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ, ಪಾಲನ್ನು ಮನೆಗೆ ತರುತ್ತಿರುವಾಗಲೇ ಆ ಹಸಿ ಮಾಂಸದ ತುಂಡನ್ನು ತಿನ್ನುವ ಘಾತುಕ ಅವಸರ, ನಂತರ ಜ್ವರವೇರಿ ಪಡುವ ಪಾಡು ಅವುಗಳ ಜೀವಂತ ವರ್ಣನೆಗಾಗಿ ನೆನಪಿನಲ್ಲಿ ಉಳಿಯುತ್ತವೆ. ಆದರೆ ಕೆಲಸ ಹುಡುಕಿಕೊಂಡು ಮತ್ತು ಸಿನಿಮಾ ಸೇರುವ ಹುಚ್ಚಿನಿಂದ ನಡೆಸುವ ತಿಪಟೂರು ಮತ್ತು ಬೆಂಗಳೂರು ಪ್ರವಾಸಗಳ ಹಾಗೂ ಮೊದಲ ಬಾರಿಗೆ ಮಗ್ಗ ಕಲಿಯಲು ಹೋದ ಮೊದಲ ಸಂದರ್ಭಕ್ಕೆ ಹೋಲಿಸಿದಂತೆ ಎರಡನೆಯ ಸಂದರ್ಭದ ವಿವರಗಳು ಒಣ ಒಣವೆನಿಸಿ ಬೇಸರ ಹುಟ್ಟಿಸುತ್ತವೆ. ಆದರೆ ಲೇಖಕರಲ್ಲಿ ತಡವಾಗಿ ಹುಟ್ಟಿದ ಅಕ್ಷರ ಪ್ರೀತಿಯ ಪ್ರತಿಫಲವಾಗಿ ಹುಡುಗಿಯೊಬ್ಬಳ 'ಸ್ನೇಹ'ಕ್ಕೆ 'ಸಿಲುಕುವ' ಪ್ರಸಂಗ ಸಾಕಷ್ಟು ನವಿರಾಗಿ ನಿರೂಪಿತವಾಗಿ ಕೃತಿಗೆ ಒಂದು ಭಾವುಕ ಅಂತ್ಯ ಒದಗಿಸಿದೆ. ಈ ಎಲ್ಲ ನೆನಪುಗಳ ಒಂದು ವಿಶಿಷ್ಟತೆ ಎಂದರೆ ಎಲ್ಲೂ ಇವು ಬಡತನವನ್ನು ವೈಭವೀಕರಿಸಿ ಸಹಾನುಭೂತಿ ಗಿಟ್ಟಿಸುವ ಪ್ರಯತ್ನ ಮಾಡದೆ ಬರವಣಿಗೆ ಘನತೆಯನ್ನು ಕಾಪಾಡಿಕೊಂಡಿರುವುದು. ಅದಕ್ಕೆ ತಕ್ಕಂತೆಯೇ ಬಾಲ್ಯದ ಕಷ್ಟ–ಪಡಿಪಾಟಲುಗಳ ನೆನಪುಗಳ ಮಧ್ಯೆ ನಾಲಿಗೆ ಮೇಲೆ ಒಂದು ಸಿಹಿ ರುಚಿಯಾಗಿ ಉಳಿದಿರುವ ಗಿಣಿ ಬಿಸ್ಕತ್ತು ಈ ಪುಸ್ತಕದ ಶೀರ್ಷಿಕೆಯ ಗೌರವ ಪಡೆದಿದೆ.

ಒಟ್ಟಾರೆ ಈ ಕೃತಿಯನ್ನು ಓದಿದಾಗ ದೊಡ್ಡ ನಿಂಗಪ್ಪನವರು ತಮ್ಮ ಗದ್ಯ ಬರವಣಿಗಾಗಿ ಇನ್ನಷ್ಟು ಕಾಯಬೇಕಿದೆ ಎನ್ನಿಸದಿರದು.

**–ಡಿ.ಎಸ್. ನಾಗಭೂಷಣ**

ಪು: **ಕೌಬಾಯ್ಸ್ ಮತ್ತು ಕಾಮ ಪುರಾಣ** (ಕವನಗಳು) ಲೇ: **ಪ್ರತಿಭಾ ನಂದಕುಮಾರ್** ಪ್ರ : **ಅಂಕಿತ,** ಬೆಂಗಳೂರು(೦೮೦–೨೬೬೧೭೧೦೦) ಪು:೧೧೪ ಬೆ:ರೂ. ೧೨೦/–

## ಹೊಸ ಕಾಲದ ಹೊಸ ಕವಿತೆಗಳು



**ದ**ಣಿವರಿಯದಂತೆ ಕಾವ್ಯ ಬರೆಯುತ್ತಾ ಬಂದಿರುವ ಪ್ರತಿಭಾ ಅವರ ಹೊಸ ಸಂಕಲನ 'ಕೌಬಾಯ್ಸ್ ಮತ್ತು ಕಾಮಪುರಾಣ'. ಎಂದಿನಂತೆ ಪ್ರತಿಭಾ ತಮ್ಮ ಕಾವ್ಯದ ಗತ್ತು ಮತ್ತು ಸತ್ವಗಳನ್ನು ಬಿಟ್ಟುಕೊಡದೆ ಪದ್ಯಗಳನ್ನು ಬರೆದಿದ್ದಾರೆ. ಸಾಮಾನ್ಯವಾಗಿ ಪ್ರತಿಭಾ ಅವರ ಕಾವ್ಯದ ಧಾಟಿ ಮಾತಿನದು. ಅರ್ಥದ ಮಥನ ಎನ್ನುವುದು ಅವರಿಗೆ ಮಾತು ಮಾತು ಮಥಿಸಿ ಬರಬೇಕೆನ್ನುವುದು ಈ ಅರ್ಥದಲ್ಲಿ. ಮಾತಿನ ಭಾವಗೀತ ಅವರದಲ್ಲ. ವಚನದ ಶೈಲಿಯಲ್ಲಿ ಅವರ ಕವಿತೆಗಳು ವಿಚಾರದ ಕಿಡಿ ಹೊಂದಿವೆ.

ಈ ಸಂಗ್ರಹದಲ್ಲಿ ಹೊಸ ಅವತಾರದಲ್ಲಿ ಬರುತ್ತಿರುವ ಫ್ಯಾಸಿಸಂ ಅನ್ನು ಕೇಂದ್ರೀಕರಿಸುವ ಕವಿತೆಗಳು ಬಹುಸಂಖ್ಯೆಯಲ್ಲಿ ಇವೆ. ಪ್ರತಿಭಾ ಅವರ ಈ ಹಿಂದಿನ ಕವಿತೆಗಳಲ್ಲಿದ್ದಂತೆಯೇ ವಿಧಿನಿಷೇಧಗಳು, ಸ್ವಾತಂತ್ರ್ಯವನ್ನು ಹತ್ತಿಕ್ಕುವ ಧೋರಣೆ, ಬಹುದನಿಗಳನ್ನು ಮುಚ್ಚಿಹಾಕುವ ಪ್ರಯತ್ನಗಳನ್ನು ಕಾವ್ಯ ಖಂಡಿಸಬೇಕು ಎಂಬ ನಿಲುವು ಇಲ್ಲಿ ಇನ್ನಷ್ಟು ಖಚಿತವಾಗಿದೆ. ಹಾಲು ಕೊಡುವ ಗೋವು, ತಿನ್ನುವ ಮಾಂಸ, ಹಾಕಿಕೊಳ್ಳುವ ಬಟ್ಟೆ ಇಂತಹ ಸಣ್ಣದಾದ ದಿನನಿತ್ಯದ ಸಂಗತಿಗಳೂ ರಾಜಕೀಯೀಕರಣಗೊಳ್ಳುವುದನ್ನು ಪ್ರತಿಭಾ ಅವರ ಕವಿತೆಗಳು ಎಳೆಎಳೆಯಾಗಿ ಬಿಚ್ಚಿಡುತ್ತವೆ. ಇಲ್ಲಿನ ಕವಿತೆಗಳಲ್ಲಿ ಹಿಟ್ಲರ್‌ನ ಪ್ರಸ್ತಾಪವಾಗುವುದು ಆನುಷಂಗಿಕವೇನೂ ಅಲ್ಲ. ಇಲ್ಲಿನ 'ಡಿಟೆಂಷನ್ ಕ್ಯಾಂಪಿನಲ್ಲಿ ಹಿಟ್ಲರ್‌ನ ಮರಣ', 'ಹಿಟ್ಲರ್‌ನ ರಾತ್ರಿಗಳು', 'ಚಕ್ರವ್ಯೂಹ' ಮುಂತಾದ ಕವಿತೆಗಳಲ್ಲಿ ಹಿಟ್ಲರ್‌ನ ಧೋರಣೆಗಳನ್ನು ಸಮಕಾಲೀನಗೊಳಿಸಿಕೊಳ್ಳುತ್ತವೆ. ನೆಲೆಗೊಳ್ಳುತ್ತಿರುವ ಈ ಫ್ಯಾಸಿಸ್ಟ್ ಮನೋಭಾವವನ್ನೂ ನ್ಯಾಯಗಳನ್ನೇ ನಿಯಂತ್ರಿಸುತ್ತಾ ತಮ್ಮಿಷ್ಟದಂತೆ ಬಳಸುವ ಧೋರಣೆಯನ್ನೂ ಕವಿತೆ ಖಂಡಿಸಬೇಕು ಎನ್ನುವುದು ಪ್ರತಿಭಾ ಅವರ ನಿಲುವು. ಈ ಸಂಕಲನದ ಶೀರ್ಷಿಕೆಯ ಕವಿತೆಯಾದ 'ಕೌಬಾಯ್ಸ್ ಮತ್ತು ಕಾಮಪುರಾಣ'ವು ಮಾನಭಂಗವನ್ನು ತಮಗನುಕೂಲವಾಗುವಂತೆ ಸಮರ್ಥಿಸಿಕೊಳ್ಳುವುದನ್ನು ಛೇಡಿಸುತ್ತದೆ. ಆಧುನಿಕೋತ್ತರ ಸಮಾಜಗಳಲ್ಲಿ ಕಾಮವು ತನ್ನೆಲ್ಲ ಸತ್ವವನ್ನು ಕಳೆದುಕೊಂಡು ಹೀನವಾಗಿದೆ. ಮಠಾಧೀಶರೂ ರಾಜಕಾರಣಿಗಳೂ ಕಾಮಪುರಾಣದಲ್ಲಿ ಸಕ್ರಿಯವಾಗಿದ್ದಾರೆ :**'ಡಿಲೀಟ್ ಆಗುತ್ತದೆ ಶ್ರೀಗಳ ಆಶ್ರಮದ/ಹಿಂದಿನ ಕಾಂಡೋಂಗಳ ರಾಶಿರಾಶಿ'**(ಕೌಬಾಯ್ಸ್ ಮತ್ತು ಕಾಮಪುರಾಣ) ಹಾಗು **'ಕಾಮಕ್ಕೂ ಇಲ್ಲಿ ಗುಪ್ತ ಕ್ಯಾಮೆರಾದ ವ್ಯಥೆ'**(ಎದ್ದೇಳು ಮಂಜುನಾಥ) ಎಂಬ ಸಾಲುಗಳು ಇದನ್ನು ಪುಷ್ಟೀಕರಿಸುತ್ತವೆ.

ಈ ಸಂಕಲನದಲ್ಲಿ ಸತ್ಯೋತ್ತರ ಕಾಲಧರ್ಮವನ್ನು ಕೇಂದ್ರೀಕರಿಸಲಾಗಿದೆ. ಎಲ್ಲವೂ ಒಂದು ಕತೆಯಾಗುವುದನ್ನೂ, ಪ್ರತಿ ಕತೆಗೂ ಅದರದೇ ಆದ ಸಮರ್ಥನೆ ಇರುವುದನ್ನೂ ಪ್ರತಿಭಾರ ಕವಿತೆಗಳು ಸಣ್ಣದಾದ ವ್ಯಂಗ್ಯದ ಮೂಲಕ ಮಾತಿನಲ್ಲಿ ನಿವಾಳಿಸುವ ಮೂಲಕ ಎತ್ತಿ ತೋರುತ್ತವೆ. ಕವಿತೆಯ ಶೋಧ ನಿಜದ ನೆಲೆ ಎನ್ನುವುದಾದರೆ ಅದು ಈ ಹೊಸಗಾಲದ ಸತ್ಯಗಳನ್ನು ಅರಿಯುವುದಕ್ಕೂ ಸಿದ್ಧವಾಗಿರಬೇಕೆನ್ನುವುದು ಅವರ ನಿಲುವು. ಅದಕ್ಕೆ ತಕ್ಕಂತೆ ಇಲ್ಲಿನ ಕವಿತೆಗಳು ಸಮಕಾಲೀನ ಸಮಾಜ ಮತ್ತು ಅದರ ನಡವಳಿಕೆಗಳನ್ನು ಉದ್ದೇಶಿಸಿ ಬರೆಯಲ್ಪಟ್ಟಿವೆ.

ಹೀಗೆ ಸಮಕಾಲೀನ ಪುರಾಣವನ್ನು ಬರೆಯುವುದು ಹೇಗೆ? ಯಾವ ಪರಿಭಾಷೆಯಲ್ಲಿ ಮುಟ್ಟಿಸಬೇಕು? ಎನ್ನುವ ಪ್ರಶ್ನೆಗೆ ಇಲ್ಲಿ ಉತ್ತರವೆಂಬಂತೆ **'ದೇಶಭಕ್ತ ಸೂಳೆಮಕ್ಕಳ ಗದ್ಯಗೀತೆ ಅಂತ ಬರೆದ್ರಲ್ಲ ಸಾರ್/ ಈಗ ಬರೀರಿ ನೋಡೋಣ/ಟ್ರಾಲ್ ಯುಗದ ಜಗದ ಝುನ್ಡಾ ಊಂಚಾ ರಹೇ ಹಮಾರಾ'**('ಇಲ್ಲಿದ್ದ ಕಾಡೇನಾಯ್ತು?') ಎಂಬ ಸವಾಲಿದೆ. ಮಾತು ಮತ್ತು ಜೀವನ ಸ್ರೋತದ್ದನ್ನು ಕನ್ನಡ ಕಾವ್ಯದ/ ಜಾನಪದದ ಮಾತುಗಳನ್ನೇ ಇಲ್ಲಿ ಬಳಸಿ ಕವಿತೆಗಳನ್ನು ಕಟ್ಟಿರುವುದು ವಿಶೇಷ. **'ನಿಮ್ಮ ನಿಮ್ಮ ತನುವ ಸಂತೈಸಿಕೊಂಡು ನಿಮ್ಮ ನಿಮ್ಮ ಮನವ ನಿಯಂತ್ರಿಸಿಕೊಂಡು', 'ಕೇಶಪಾಶ ಪ್ರಪಂಚದ ಮಾತಲ್ಲ ಇದು' 'ನಡುವೆ ಸುಳಿವಾತ್ಮಕ್ಕೆ ಲಿಂಗವಿಲ್ಲ', 'ಮುಂದೆ ಬಂದರೆ ಹಾಯಲಾರೆ/ಹಿಂದೆ ಬಂದರೆ ಒದೆಯಲಾರೆ ಎಂದು /ನಾನು ಮಾತು ಕೊಟ್ಟಿಲ್ಲ', 'ಪರಿಣತಮತಿಗಳ್', 'ಎಲ್ಲ ಚಿತ್ತಾರವನ್ನು ಮಸಿ ನುಂಗಿದ ಆರೋಪ ಹೊತ್ತು/ನಗೀನವಿಲು ಕುಣಿಯುತ್ತಿತ್ತು ಆಡುತ್ತಿತ್ತು'** ಹೀಗೆ ಇರುವ ಸಾಲುಗಳು ವ್ಯಂಗ್ಯ ಮತ್ತು ವಿಷಾದಗಳನ್ನು ಹುಟ್ಟಿಸಬಲ್ಲವು.

ಎಂದಿನಂತೆ ಆಧುನಿಕತೆಯ ಅನಾರೋಗ್ಯಕರ ಬೆಳವಣಿಗೆಯನ್ನು ಕಾವ್ಯದಲ್ಲಿ ಕಾಣುವ ಪ್ರತಿಭಾ ಈ ಸಂಕಲನದಲ್ಲಿ ಕೊಂಚ ಪ್ರತಿಕ್ರಿಯಾತ್ಮಕವಾಗಿದ್ದಾರೆ. ಗದ್ಯದ ಮೀಟನಿಂದ ಕಾವ್ಯ ಹುಟ್ಟಿಸುವ ಎಂದಿನ ಹದ ಇಲ್ಲಿಯೂ ಕೈ ಹಿಡಿದಿದೆ.

**–ಆರ್.ತಾರಿಣಿ ಶುಭದಾಯಿನಿ**

ಪು: **ಜಿನ್ನಾ ಕೋಮುವಾದಿಯೇ?** ಲೇ: **ಬಿ.ಎಂ. ಹನೀಫ್** ಪ್ರ: **ಅನುವಾದ,** ಬೆಂಗಳೂರು (೭೭೬೦೫೫೦೨೪೪) ಪು: ೧೧೬ ಬೆ : **ರೂ. ೧೦೦/–**

## ಮುಖ್ಯ ಪ್ರಶ್ನೆಯನ್ನು ಹಾಗೇ ಉಳಿಸುವ ಚರ್ಚೆ



**ಪಾ**ಕಿಸ್ತಾನದ ನಿರ್ಮಾತೃವೆನಿಸಿರುವ ಮಹಮ್ಮದಲಿ ಜಿನ್ನಾ ಕೋಮುವಾದಿಯೇ? ಎನ್ನುವ ಪ್ರಶ್ನೆಗೆ ಉತ್ತರ ಹುಡುಕುವುದಕ್ಕೆ ಹೊರಟಿರುವ ಈ ಪುಸ್ತಕ, 'ಜಿನ್ನಾ ಒಬ್ಬ ಸೆಕ್ಯುಲರ್' ಎನ್ನುವ – ಕೋಮುವಾದಿ ಪಕ್ಷವೆಂದು ಗುರುತಿಸಲ್ಪಟ್ಟ ಬಿಜೆಪಿಯ ನಾಯಕರಲ್ಲೊಬ್ಬರಾದ – ಎಲ್.ಕೆ ಅದ್ವಾನಿಯವರ ಹೇಳಿಕೆಯ ಮೂಲಕ. ಜಿನ್ನಾರವರ ವ್ಯಕ್ತಿತ್ವದಲ್ಲಿನ ಆಂತರಿಕ ವೈರುಧ್ಯಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ. ಅತ್ಯಂತ ವಿವಾದಾತ್ಮಕವಾದ ಜಿನ್ನಾರಂತಹ ವ್ಯಕ್ತಿತ್ವದ ಚಿತ್ರಣವನ್ನು, ವಸ್ತುನಿಷ್ಠವಾಗಿ ಕಟ್ಟಿಕೊಡುವುದು ಕಷ್ಟಕರವಾದದ್ದೆಂಬ ಲೇಖಕರ ಅಭಿಪ್ರಾಯ ಸರಿಯಾದದ್ದೇ. 'ಜಿನ್ನಾ ಅವರ ವೈಭವೀಕರಣವಾಗಲಿ ಮೂರ್ತಿ ಭಂಜನೆಯಾಗಲೀ ನನ್ನ ಉದ್ದೇಶವಲ್ಲ' ಎನ್ನುವುದನ್ನು ಅವರು ಮೊದಲೆ ಸ್ಪಷ್ಟಪಡಿಸಿ ಅದಕ್ಕೆ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಜಿನ್ನಾರವರ ವ್ಯಕ್ತಿತ್ವವನ್ನು ಕಟ್ಟಿಕೊಡಲು ಹುಡುಕಿಕೊಂಡಿರುವ ಮಾರ್ಗ ಸ್ವಾರಸ್ಯಕರ ಮತ್ತು ಉಪಯುಕ್ತವಾಗಿದೆ ಎನಿಸುತ್ತದೆ. ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದ್ದ ಸಾವರ್ಕರ್, ಅಂಬೇಡ್ಕರ್, ಎಂ.ಎನ್.ರಾಯ್ ಮತ್ತು ಸ್ವಲ್ಪ ಮಟ್ಟಿಗೆ ಸರೋಜಿನಿ ನಾಯ್ಡು ಅವರ ದೃಷ್ಟಿಯಲ್ಲಿ ಜಿನ್ನಾರವರ ವ್ಯಕ್ತಿತ್ವ ಹೇಗಿತ್ತು ಎನ್ನುವುದನ್ನು ನಮ್ಮ ಮುಂದಿಡುತ್ತಾರೆ. ಜಿನ್ನಾ ಮತ್ತು ಗಾಂಧಿಯವರ ವ್ಯಕ್ತಿತ್ವಗಳ ಹೋಲಿಕೆ ಮಾಡಿ ವ್ಯತ್ಯಾಸಗಳನ್ನೂ ಗುರುತಿಸುತ್ತಾರೆ.

ಈ ಕಿರುಹೊತ್ತಿಗೆ ಒಟ್ಟಾರೆ ಹೇಳುವುದು ಇದು: ಜಿನ್ನಾ ಅವರ ವೈಯಕ್ತಿಕ ಬದುಕು ಸೆಕ್ಯುಲರ್ ಮತ್ತು ಕಾಸ್ಮಾಪೊಲಿಟನ್ ಆಗಿತ್ತು. ಹಾಗೆಯೆ ಅವರು ೧೯೩೦ರಲ್ಲಿ ಇಂಗ್ಲೆಂಡ್‌ಗೆ ಹೋಗುವವರೆಗೂ ಅವರು ಆಗಿನ ಮುಸ್ಲಿಂ ಲೀಗ್‌ನ್ನೂ ಒಳಗೊಂಡಂತೆ ಯಾವುದೇ ಕೋಮುವಾದಿ ಸಂಘಟನೆಗಳ ಜೊತೆ ಗುರುತಿಸಿಕೊಂಡಿರಲಿಲ್ಲ. ಗಾಂಧೀಜಿಯ ಪ್ರವೇಶದ ನಂತರ ಬದಲಾದ ರಾಷ್ಟ್ರ ರಾಜಕಾರಣದಲ್ಲಿ ಜಿನ್ನಾರವರ ಪಾತ್ರ ನಗಣ್ಯವಾಗುತ್ತಾ ಹೋಗಿ ಅವರು ಬದಿಗೆ ಸರಿಸಲ್ಪಟ್ಟರು. ಇದರಿಂದ ಹತಾಶರಾದ ಅವರು ೧೯೩೪ರಲ್ಲಿ ಇಂಗ್ಲೆಂಡಿನಿಂದ ಮರಳಿದ ನಂತರ ಮುಸ್ಲಿಂಲೀಗ್‌ನೊಂದಿಗೆ ನೇರವಾಗಿ ಗುರುತಿಸಿಕೊಂಡರು ಮತ್ತು ಸರ್ ಸೈಯದ್ ಅಹ್ಮದ್ ಖಾನ್ ಮತ್ತು ಇಕ್ಬಾಲ್‌ರಂತವರ ಸಖ್ಯ ಬೆಳಸಿ ಪ್ರತ್ಯೇಕ ರಾಷ್ಟ್ರಸ್ಥಾಪನೆಯ ಬೇಡಿಕೆಯ ಪ್ರಮುಖ ವಕ್ತಾರರಾದರು.

ಜಿನ್ನಾರವರ ಕುರಿತಂತೆ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಲೇಖಕರು ಸಾಕಷ್ಟು ಶ್ರಮಪಟ್ಟಿದ್ದಾರೆ ಮತ್ತು ಯಾವುದೆ ಪೂರ್ವಾಗ್ರಹಕ್ಕೆ ಒಳಗಾಗದಂತೆ ಎಚ್ಚರ ವಹಿಸಿದ್ದಾರೆ. ಕೇವಲ ಕಪ್ಪು ಬೆಳಕಿನ ಹಿನ್ನೆಲೆಯಲ್ಲಿ ರಾಷ್ಟ್ರೀಯವಾದಿ ಚಳುವಳಿಯನ್ನು ನೋಡಿದರೆ ಜಿನ್ನಾರದಂತಹ ಸಂಕೀರ್ಣ ವ್ಯಕ್ತಿತ್ವವನ್ನು ಹಿಡಿದಿಡಲು ನಾವು ಸೋಲುತ್ತೇವೆ ಎನ್ನುವುದನ್ನು ಈ ಕೃತಿಯು ಯಶಸ್ವಿಯಾಗಿ ತೋರಿಸುತ್ತದಾದರೂ ಈ ಕಿರುಹೊತ್ತಗೆಯಲ್ಲಿ ಸ್ಪಷ್ಟಪಡಿಸದೇ ಇರುವ ಮತ್ತು ಆ ಕಾರಣದಿಂದ ಅಪಾರ್ಥಕ್ಕೆ ಎಡೆ ಮಾಡಿಕೊಡುವ ಒಂದೆರಡು ಮುಖ್ಯ ಸಂಗತಿಗಳಿವೆ. ಮೊದಲನೆಯದಾಗಿ, ಗಾಂಧೀಜಿಯವರ ಪ್ರವೇಶದಿಂದಾಗಿ ಜಿನ್ನಾ ಮೂಲೆಗುಂಪಾದರು ಎಂದಷ್ಟೆ ಹೇಳಿದರೆ ಗಾಂಧೀಜಿಯವರಿಗೆ ಚಳುವಳಿಯ ನಾಯಕತ್ವವನ್ನು ಕೊಟ್ಟ ಪರಿಣಾಮವಾಗಿ ಜಿನ್ನಾರಂತಹವರು ಬದಿಗೆ ಸರಿಸಲ್ಪಟ್ಟರು ಎಂದು ಹೇಳುವ ಮೂಲಕ ಇದಕ್ಕೆ ಗಾಂಧೀಜಿಯವರನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿದಂತಾಗುತ್ತದೆ. ಮತ್ತು ಇದೊಂದು ಉದ್ದೇಶಪೂರ್ವಕ ಕೃತ್ಯ ಎನಿಸುತ್ತದೆ. ಗಾಂಧಿಯವರು ಪ್ರವೇಶ ಮಾಡುವವರೆಗೆ ಕೇವಲ ಗಣ್ಯರ ನಿಯಂತ್ರಣದಲ್ಲಿದ್ದ ಕಾಂಗ್ರೆಸ್ ಜನಸಮೂಹದ ಸಂಘಟನೆಯಾಗಿ ಪರಿವರ್ತಿತವಾದ ಪರಿಣಾಮವಾಗಿ ಜಿನ್ನಾರವರೂ ಸೇರಿದಂತೆ ಅದೂವರೆಗೂ ಇದ್ದ ಎಲ್ಲ ಗಣ್ಯ ನಾಯಕರುಗಳು ಬದಿಗೆ ಸರಿಸಲ್ಪಟ್ಟರು. ಕೆಲವರು ಅಂತಹ ಬದಲಾವಣೆಯನ್ನು ಸ್ವಾಗತಿಸಿ ಕಾಂಗ್ರೆಸ್‌ನಲ್ಲೆ ಉಳಿದು ಬದಲಾದ ತಮ್ಮ ಪಾತ್ರ ವಹಿಸಲು ತೀರ್ಮಾನಿಸಿದರು. ಅಂತಹ ಬದಲಾವಣೆಯನ್ನು ಒಪ್ಪದ ಜಿನ್ನಾರಂತಹವರು ಹೊರದಬ್ಬಲ್ಪಟ್ಟರು ಎಂದು ನೋಡುವುದು ಹೆಚ್ಚು ಸೂಕ್ತ ಎನಿಸುತ್ತದೆ.

ಎರಡನೆಯದಾಗಿ, ಈ ಪುಸ್ತಕ ಓದಿದ ನಂತರ ಈ ಪ್ರಶ್ನೆ ಬಗೆಹರಿಯದೆ ಉಳಿಯುತ್ತದೆ: ವೈಯಕ್ತಿಕವಾಗಿ ಸೆಕ್ಯುಲರ್ ಆಗಿದ್ದ ಜಿನ್ನಾ ಕೋಮುವಾದಿ ರಾಷ್ಟ್ರವೊಂದನ್ನು ಹುಟ್ಟುಹಾಕಲು ಕಾರಣರಾದರು ಎನ್ನುವ ಸಂಗತಿಯನ್ನು ಗುರುತಿಸುವ ಲೇಖಕರು ಅಂತಿಮವಾಗಿ ಜಿನ್ನಾ ಸೆಕ್ಯುಲರಾಗಿದ್ದರು ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಆದರೆ ವ್ಯಕ್ತಿಯು ಸೆಕ್ಯುಲರ್ ಹೌದೆ ಅಲ್ಲವೆ ಎಂದು ನಿರ್ಧರಿಸಲು ಅವನ ವೈಯಕ್ತಿಕ ಬದುಕನ್ನು ನೋಡಬೇಕೊ ಅಥವ ಅವನು ಸಾರ್ವಜನಿಕ ನಾಯಕನಾಗಿ ತೆಗೆದುಕೊಂಡ ನಿರ್ಣಯಗಳ ಪರಿಣಾಮಗಳನ್ನೋ?

**–ಜೆ.ಎಸ್ ಸದಾನಂದ**

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೇ ಲೇಸು ಕಂಡಯ್ಯಾ!
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೇ ಲೇಸು ಕಂಡಯ್ಯಾ!!

–ಅಕ್ಕಮಹಾದೇವಿ

ಡಿ. ರವೀಂದ್ರ ದೇಸಾಯಿ ಪ್ರತಿಷ್ಠಾನ
(ಕಿರಣ್ ದೇಸಾಯಿ ಮತ್ತು ಕುಟುಂಬ)
ಶಿವಮೊಗ್ಗ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು



ಜಿ. ಶಿವಕುಮಾರ್
ವಿವೇಕ ಬ್ಯೂರೋ
ಹಾಸನ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು



**ಕಡಿದಾಳು ದಯಾನಂದ**
ಮತ್ತು ಕುಟುಂಬ
**ವಿಹಂಗಮ ನರ್ಸರಿ**
ಭಾರತೀಪುರ (ತೀರ್ಥಹಳ್ಳಿ)

## ತಿಂಗಳ ಕೊನೆಯ ಸಾಲುಗಳು



ಯಾವ ರಾಮನ ಚರಿತ್ರೆ ಕೇಳಿ ದಶರಥನು ತನ್ನ ಹಿರಿಮಗನಿಗೆ ರಾಮ ಎಂದು ಹೆಸರಿಟ್ಟನೋ ಆ ರಾಮ ನನ್ನ ರಾಮ.

**–ವಿನೋಬಾ ಭಾವೆ**

**ಶುಭಾಶಯಗಳೊಂದಿಗೆ,**

**ಎಂ. ಜಗದೀಶ ಪೈ**
ಮತ್ತು **ಕುಟುಂಬ**
ಕರ್ನೂಲು (ಆಂಧ್ರ ಪ್ರದೇಶ)

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)